ವಿಶ್ವವಾಣಿ
ವಿಶ್ವಾಸವೇ ವಿಶ್ವ

ದೆಹಲಿಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂಸದರ ಸಭೆಯಲ್ಲಿ ರಾಜ್ಯಸಭೆ ಸದಸ್ಯೆ ಡಾ.ಸುಧಾಮೂರ್ತಿ ಮತ್ತು ಸಿಎಂ ಸಿದ್ದರಾಮಯ್ಯ ಉಭಯ ಕುಶಲೋಪರಿ ನಡೆಸಿದರು.

ಪುಟ ತೆರೆದಂತೆ...

ಅಮೆರಿಕದಲ್ಲಿ ಇನ್ಶೂರೆನ್ಸ್ ಸರ್ವಾಂತರ್ಯಾಮಿ
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ಹಾಡಿ ಹಕ್ಕಲು ಹೊಲಗಳ ಸಾಂಗತ್ಯದಲ್ಲಿ
ಶಶಾಂಕಣ
ಶಶಿಧರ ಹಾಲಾಡಿ
ಸಂ.ಗಮ | 7

ಮಾತಂದ್ರೆ ಮಾತು

ಭಾರತವು ಹಿಂದೂ ರಾಷ್ಟ್ರ ಅಲ್ಲ ಎಂದು ಈ ಚುನಾವಣಾ ಫಲಿತಾಂಶ ತೋರಿಸಿದೆ. ಹಿಂದೆ ಇದ್ದಂತೆ ವಿಚಾರಣೆಯಿಲ್ಲದೆ ಜನರನ್ನು ಜೈಲಿಗೆ ಹಾಕುವುದು ಮತ್ತು ಶ್ರೀಮಂತರು-ಬಡವರ ನಡುವಿನ ಅಂತರವನ್ನು ಹೆಚ್ಚಿಸುವಂತಹ ಕೆಲವು ಘಟನೆಗಳು ಇನ್ನೂ ಮುಂದುವರಿದಿವೆ. ಇದು ನಿಲ್ಲಬೇಕಿದೆ.

- ಅಮರ್ತ್ಯ ಸೇನ್
ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ

ದಾರಿದೀಪೋಕ್ತಿ

ಯಾರೂ ತಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ಎಲ್ಲರೂ ಅವರವರ ಹವ್ಯಾಸ ಮತ್ತು ಅಭ್ಯಾಸವನ್ನು ನಿರ್ಧರಿಸುತ್ತಾರೆ. ಅವರವರ ಹವ್ಯಾಸ ಮತ್ತು ನಿರ್ಧಾರಗಳು ಭವಿಷ್ಯವನ್ನು ನಿರ್ಧರಿಸುತ್ತವೆ.

ವಕ್ರತುಂಡೋಕ್ತಿ

ಮೌನ ಬಂಗಾರವಾದರೆ, ಡಕ್ಟ್ ಟೇಪ್ ಬೆಳ್ಳಿ.

ಅರುಂಧತಿಗೆ ಪೆನ್ ಪಿಂಟರ್ ಗೌರವ

ಲಂಡನ್: ಲೇಖಕಿ, ಹೋರಾಟಗಾರ್ತಿ ಅರುಂಧತಿ ರಾಯ್ ಅವರು 2024ರ ಸಾಲಿನ ಪ್ರತಿಷ್ಠಿತ ಪೆನ್ ಪಿಂಟರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತ ಸಾಹಿತಿ ಹೆರಾಲ್ಡ್ ಪಿಂಟರ್ ಅವರ ಸ್ಮರಣಾರ್ಥ ಇಂಗ್ಲಿಷ್ ಪೆನ್ ಸಂಸ್ಥೆಯು 2009ರಲ್ಲಿ ಸ್ಥಾಪಿಸಿ ರುವ ಈ ಪ್ರಶಸ್ತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ.

ನಾಲ್ವರು ನಕ್ಸಲರು ಪೊಲೀಸರಿಗೆ ಶರಣು

ಪಾಡೇರು: ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಗೆ ಸೇರಿದ ನಾಲ್ವರು ಸದಸ್ಯರು ಗುರುವಾರ ಪೊಲೀಸರ ಮುಂದೆ ಶರಣಾ ದರು. ಸಂಘಟನೆಯಲ್ಲಿ ಸೂಕ್ತ ನಾಯಕತ್ವದ ಕೊರತೆಯಿಂದ ಗಾಳಿಕೊಂಡ ದಳಕ್ಕೆ ಸೇರಿದ ಟಿ.ಸಾಯಿ ರಾಂ, ವಿ.ಕಿರಣ್, ಟಿ.ರಮೇಶ್, ಕೆ.ಬಾಬು ರಾವ್ ಸ್ವಯಂ ಪ್ರೇರಿತರಾಗಿ ಶರಣಾಗಿದ್ದಾರೆ.

ಬಿಹಾರ: ನಾಲ್ಕನೇ ಸೇತುವೆ ಕುಸಿತ

ಪಟನಾ: ಬಿಹಾರದಲ್ಲಿ ಸೇತುವೆಗಳು ಆಟಿಕೆ ವಸ್ತುಗಳಂತೆ ಕುಸಿಯುತ್ತಿದ್ದು, ಗುರುವಾರ ಮತ್ತೊಂದು ಸೇತುವೆ ಕುಸಿದಿದೆ. ಬಿಹಾರದ ಕಿಶನ್‌ಗಂಜ್ ಜಿಲ್ಲೆಯಲ್ಲಿ 13 ವರ್ಷದ ಸೇತುವೆ ಕುಸಿತ ಕಂಡಿದ್ದು, 10 ದಿನಗಳಲ್ಲಿ ನಾಲ್ಕು ಸೇತುವೆಗಳು ಕುಸಿದಂತಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -
ಡಿಕೆಶಿ ಪರ ಬ್ಯಾಟಿಂಗ್ ಮಾಡಿದ ಸ್ವಾಮೀಜಿ
ಸುದ್ದಿ



ಮಳೆ ಸಂಬಂಧಿ ಅವಘಡಗಳಲ್ಲಿ ಇಬ್ಬರು ಸಾವು | ಶಿರಾಡಿ, ಹೊನ್ನಾವರ ಹೆದ್ದಾರಿ ಸಂಚಾರ ವ್ಯತ್ಯಯ
ಇಂದೂ ಭಾರೀ ಮಳೆ ನಿರೀಕ್ಷೆ, ದ.ಕ.ದಲ್ಲಿ ಶಾಲೆಗಳಿಗೆ ರಜೆ, ರೆಡ್‌ಅಲರ್ಟ್ ಘೋಷಣೆ

ಕರಾವಳಿ, ಮಲೆನಾಡಿನಲ್ಲಿ ಮಳೆ ಅಬ್ಬರ

ಕುಮಟಾ ತಾಲೂಕಿನ ಹೊಳೆಗದ್ದೆ ಸಮೀಪ ಭೂಮಿ, ನದಿ, ಸಮುದ್ರ
ಫೋಟೋ : ವಿಶ್ವೇಶ್ವರ ಭಟ್

ಮಂಗಳೂರು: ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಕಳೆದ 3-4 ದಿನಗಳಿಂದ ಧಾರಾಕಾರ ಮಳೆಯಾಗುತ್ತಿದ್ದು, ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮಂಗಳೂರು ನಗರದ ರೊಸಾರಿಯೊದಲ್ಲಿ ಭಾರಿ ಮಳೆ ವೇಳೆ ತುಂಡಾಗಿ ನೆಲಕ್ಕುರುಳಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಹಾಸನ ಜಿಲ್ಲೆಯ ಆಲೂರು ತಾಲೂಕಿನ ಪಾಳ್ಯ ಹೋಬಳಿಯ ರಾಜು (50) ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ರಾಮಕುಂಜದ ದೇವರಾಜ್ (46) ಮೃತಪಟ್ಟಿದ್ದಾರೆ. ಬುಧವಾರ ರಾತ್ರಿಯೇ ಈ ದುರ್ಘಟನೆ ಸಂಭವಿಸಿದ್ದು, ಗುರುವಾರ ನಸುಕಿನಲ್ಲಿ ಗೊತ್ತಾಗಿದೆ.

ಬಾಡಿಗೆ ಆಟೊ ರಿಕ್ಷಾವನ್ನು ಚಲಾಯಿಸುತ್ತಿದ್ದ ರಾಜು ಹಾಗೂ ದೇವರಾಜ್ ಇಬ್ಬರು ರೊಸಾರಿಯೊದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ರಿಕ್ಷಾ ತೊಳೆಯಲು ಹೋದ ರಾಜು ಅವರು ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿಯನ್ನು ಸ್ಪರ್ಶಿಸಿ ದ್ದರು. ವಿದ್ಯುದಾಘಾತಕ್ಕೊಳಗಾದ ಅವರ ನರಳಾಟ ಕೇಳಿ ದೇವರಾಜ್ ನೆರವಿಗೆ ಧಾವಿಸಿದ್ದರು. ಗೋಣಿ ಚೀಲವೊಂದನ್ನು ಮೈಮೇಲೆ ಎಸೆದು ಅವರನ್ನು ರಕ್ಷಿಸಲು ಯತ್ನಿಸಿದ್ದರು. ಭಾರಿ ಮಳೆಯಾಗಿ ಆ ಸ್ಥಳದಲ್ಲಿ ನೀರು ಹರಿಯುತ್ತಿದ್ದರಿಂದ ದೇವರಾಜ್ ಅವರಿಗೂ ವಿದ್ಯುದಾಘಾತ ಉಂಟಾಗಿತ್ತು. ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ದೃಶ್ಯಗಳು ಸಿಸಿಟಿವಿ ಕ್ಯಾಮೆರಾವೊಂದರಲ್ಲಿ ದಾಖಲಾಗಿವೆ. ಪುತ್ತೂರು ಸಮೀಪದ ಬನ್ನೂರಿನ ಜೈನರ ಗುರಿ ಎಂಬಲ್ಲಿ ಭಾರಿ ಮಳೆಯಿಂದಾಗಿ ಮಜೀದ್ ಎಂಬುವರ ಮನೆ ಮೇಲೆ ಧರೆ ಕುಸಿದು, ಗುರುವಾರ ನಸುಕಿನಲ್ಲಿ ಗೋಡೆ ನೆಲಕ್ಕುರುಳಿದೆ. ಮಣ್ಣಿನಡಿ ಸಿಲುಕಿದ್ದ ಇಬ್ಬರು ಮಕ್ಕಳನ್ನು ತಂದೆಯೇ ರಕ್ಷಣೆ ಮಾಡಿದ್ದಾರೆ. ಕೊಡಗು ಜಿಲ್ಲೆ ಕೊಯ್ನಾಡು ಶಾಲೆ ಹಿಂಭಾಗದ ಗುಡ್ಡದ ಮಣ್ಣು ಕುಸಿದು ಶಾಲೆಯ ಗೋಡೆ ಕುಸಿದು ಬಿದ್ದಿದೆ. ರಜೆ ಘೋಷಿಸಿದ್ದ ಕಾರಣ ಅನಾಹುತ ತಪ್ಪಿದೆ.

→ 4

ಬೊಬ್ಬಿರಿದ ಮಳೆ

- ಕೊಡಗು ಜಿಲ್ಲೆ ಕೊಯ್ನಾಡಿನಲ್ಲಿ ಭಾರಿ ಮಳೆಗೆ ಶಾಲಾ ಕೊಠಡಿಯ ಮೇಲೆ ಗುಡ್ಡ ಕುಸಿತ
- ಭಾಗಮಂಡಲದಲ್ಲಿ ಕಾವೇರಿ ಉಗಮ ಸ್ಥಾನ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತ
- ಕೊಡಗು, ವಯನಾಡಿನಲ್ಲಿ ಮಳೆ ಹೆಚ್ಚಳ, ಕೆಆರ್‌ಎಸ್, ಕಬಿನಿಗೆ ಒಳ ಹರಿವು ಹೆಚ್ಚಳ
- ಶಿವಮೊಗ್ಗ ಗಾಜನೂರು ಡ್ಯಾಂ ಭರ್ತಿ, 1 ಸಾವಿರ ಕ್ಯೂಸೆಕ್ ನೀರು ಬಿಡುಗಡೆ
- ತುಂಗೆ ಅಣೆಕಟ್ಟೆಗೆ 6 ಸಾವಿರ ಕ್ಯೂಸೆಕ್ ಒಳ ಹರಿವು, ಸಾವಿರ ಕ್ಯೂಸೆಕ್ ನೀರು ಬಿಡುಗಡೆ
- ಉಕ್ಕಿ ಹರಿಯುತ್ತಿರುವ ಕುಮಾರಧಾರಾ, ಕುಕ್ಕೆ ಸುಬ್ರಮಣ್ಯ ಸ್ನಾನ ಘಟ್ಟ ಮುಳುಗಡೆ
- ಗಡಿ ಜಿಲ್ಲೆ ಕಾಸರಗೋಡಿನಲ್ಲಿ ನದಿಗುರುಳಿದ ಕಾರು, ಇಬ್ಬರ ರಕ್ಷಣೆ, ಕಾರು ನೀರುಪಾಲು

ರಾಜ್ಯವ್ಯಾಪಿ ಮಳೆ ನಿರೀಕ್ಷೆ

ಮುಂದಿನ ನಾಲ್ಕು ದಿನಗಳ ಕಾಲ ರಾಜ್ಯದಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾ ಮಾನ ಇಲಾಖೆ ತಿಳಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಉತ್ತರ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸ ಲಾಗಿದೆ. ಬೆಳಗಾವಿ, ಹಾವೇರಿ, ಧಾರವಾಡ, ಹಾಸನ, ಮೈಸೂರು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ರಾಯ ಚೂರು, ಯಾದಗಿರಿ, ಬೀದರ್, ಕಲಬುರ್ಗಿ, ಗದಗ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂ. ಗ್ರಾಮಾಂತರ, ದಾವಣಗೆರೆ, ಕೋಲಾರ, ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿಯೂ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ

ದಕ್ಷಿಣ ಜಿಲ್ಲೆಯಲ್ಲಿ ಇಂದು ರಜೆ

ಮಂಗಳೂರು: ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪ್ರಾಥಮಿಕ- ಪ್ರೌಢಶಾಲೆಗಳಿಗೆ ಮತ್ತೊಂದು ದಿನ (ಜೂನ್ 28) ರಜೆ ಘೋಷಿ ಸಲಾಗಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ. ನದಿ ಮತ್ತು ಸಮುದ್ರ ತೀರದ ಜನರಿಗೆ ಎಚ್ಚರ ವಹಿಸುವಂತೆ ತಿಳಿಸಲಾಗಿದೆ.

ಆಗುಂಬೆ: ಭಾರಿ ವಾಹನ ನಿಷೇಧ

ಶಿವಮೊಗ್ಗ: ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಹಿನ್ನೆಲೆ ಆಗುಂಬೆ ಘಾಟಿಯಲ್ಲಿ ನಾಳೆಯಿಂದ (ಜೂ.27) ಭಾರಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.

ದುಬಾರೆ: ಪ್ರವಾಸಿಗರಿಗೆ ನಿರ್ಬಂಧ

ಮಡಿಕೇರಿ: ಭಾರೀ ಮಳೆಯಿಂದ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಪ್ರಮಾಣದಲ್ಲಿ ಏರಿಕೆಯಾಗಿದೆ. ಕುಶಾಲನಗರ ಬಳಿ ಇರುವ ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರಿಗೆ ಅರಣ್ಯ ಇಲಾಖೆ ನಿಷೇಧ ಹೇರಿದೆ.

ಸಿಎಂ ಸೂಚನೆ ನಂತರವೂ ಪ್ರತಿಕ್ರಿಯಿಸಿದ ರಾಜಣ್ಣ

ಹೆಚ್ಚುವರಿ ಉಪಮುಖ್ಯಮಂತ್ರಿ ಬಾಯ್ಬಿಡದಂತೆ ಸಿಎಂ ಎಚ್ಚರಿಕೆ

ಬೆಂಗಳೂರು: ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿಯ ವಿವಾದ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಮಧ್ಯಪ್ರವೇಶಿಸಿರುವ ಸಿಎಂ ಸಿದ್ದರಾಮಯ್ಯ ಅವರು 'ಡಿಸಿಎಂ ಹುದ್ದೆಗೆ ಸಂಬಂಧಿಸಿದಂತೆ ಯಾರೂ ಮಾತನಾಡಬೇಡಿ' ಎಂದು ಎಚ್ಚರಿಕೆ ನೀಡಿದ್ದಾರೆ.

ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್ ಸೇರಿದಂತೆ ಅನೇಕರು ಹೆಚ್ಚುವರಿ ಡಿಸಿಎಂ ಹುದ್ದೆ ಸೃಷ್ಟಿ ಸಂಬಂಧ ಧ್ವನಿ ಎತ್ತಿದ್ದರು. ಸಾಲು ಸಾಲು ಬಹಿರಂಗ ಹೇಳಿಕೆಗಳಿಂದ ಸರಕಾರ ಹಾಗೂ ಪಕ್ಷಕ್ಕೆ ಡ್ಯಾಮೇಜ್ ಆಗುವ ಆತಂಕ ಶುರುವಾಗಿತ್ತು. ಈ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಅವರು ಸಚಿವ ರಾಜಣ್ಣ ಅವರಿಗೆ ಕರೆ ಮಾಡಿ, ಈ ವಿಷಯದ ಬಗ್ಗೆ ಮಾತನಾಡದಂತೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸಿದ್ದರಾಮಯ್ಯ ಅವರು ಬುಧವಾರ ಬೆಳಗ್ಗೆ ಕರೆ ಮಾಡಿ, ಈ ಬಗ್ಗೆ ಮಾತನಾಡದಂತೆ ಸೂಚನೆ ನೀಡಿದರೂ, ರಾಜಣ್ಣ ಮತ್ತೊಮ್ಮೆ ಡಿಸಿಎಂ ಸ್ಥಾನಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿ ಯಿಸಿರುವುದು ಇದೀಗ ಇನ್ನಷ್ಟು ಕುತೂಹಲಕ್ಕೆ ಕಾರಣವಾಗಿದೆ. ಇದೇ ವಿಷಯ ಮುಂದಿಟ್ಟುಕೊಂಡು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ಹೆಚ್ಚುವರಿ ಡಿಸಿಎಂ ಸ್ಥಾನದ ಬೇಡಿಕೆ ಬಂದಾಗಲೂ, ಪಕ್ಷದ ಹೈಕಮಾಂಡ್ ಬಳಿಕ ಡಿಕೆಶಿ ಅವರು ವಿಷಯ ಪ್ರಸ್ತಾಪಿಸಿದ್ದರು. ಬಳಿಕ ಈ ಬಗ್ಗೆ ಯಾರೂ ಮಾತನಾಡ ಬಾರದು ಎಂದು ಕೆ.ಸಿ.ವೇಣುಗೋಪಾಲ್ ಬಹಿರಂಗವಾಗಿಯೇ ಎಚ್ಚರಿಕೆ ನೀಡಿದ್ದರು.

ನಾವು ಹೇಳೋದು ಹೇಳುತ್ತೇವೆ: ರಾಜಣ್ಣ

ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಸಚಿವ ಕೆ.ಎನ್. ರಾಜಣ್ಣ, ನಾನು ಡಿಸಿಎಂ ಸ್ಥಾನದ ಆಕಾಂಕ್ಷಿಯಲ್ಲ. ಒಂದು ವೇಳೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಮತ್ತೊಮ್ಮೆ ಪುನರುಚ್ಚರಿಸಿದರು. ಡಿಕೆಶಿ ಅವರು ಮೀಡಿಯಾ ಮುಂದೆ ಮಾತನಾಡುವುದು ಪ್ರಚಾರಕ್ಕಾಗಿ ಎಂದು ಹೇಳಿದ್ದಾರೆ. ಅವರು ಹೇಳಿದರೆ ಹೇಳಿಕೊಳ್ಳಲಿ. ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಅಂತಿಮವಾಗಿ ಪಕ್ಷದ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ. ನಮಗೂ ಸ್ವಂತ ಬುದ್ಧಿ ಇದೆ. ನಾನು ಕಾನೂನು ಪದವೀಧರ. ಮುಖ್ಯಮಂತ್ರಿ ಆಯ್ಕೆಯ ಸಮಯದಲ್ಲಿ ಕೆ.ಸಿ.ವೇಣುಗೋಪಾಲ್ ಏನು ಹೇಳಿದ್ದರು ಎಂದು ನೆನಪಿಸಿದ್ದೇನೆ. ಕರ್ನಾಟಕದಲ್ಲಿ ಸಿಎಂ ಸ್ಥಾನ ಖಾಲಿಯಿಲ್ಲ. ಆದರೆ ಡಿಸಿಎಂ ಹುದ್ದೆಗಳು ಖಾಲಿಯಿವೆ. ಅವುಗಳನ್ನು ಭರ್ತಿ ಮಾಡಬೇಕು ಎಂದು ಮತ್ತೊಮ್ಮೆ ತಿರುಗೇಟು ನೀಡಿದರು.

ಹೈಕಮಾಂಡ್ ಮುಂದೆ ಮಾತಾಡಲಿ: ಡಿಕೆಶಿ

ವಿವರಪುಟ → 4

ಡಿಕೆಶಿ ಪರ ಸ್ವಾಮೀಜಿ ಬ್ಯಾಟಿಂಗ್



ಬೆಂಗಳೂರು: ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿಯೇ ಸಿಎಂ ಸ್ಥಾನವನ್ನು ಬಿಟ್ಟುಕೊಡುವಂತೆ ಒಕ್ಕಲಿಗ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿಯ ಹೇಳಿಕೆ ಇದೀಗ ವಿವಾದಕ್ಕೆ ಕಾರಣವಾಗಿದ್ದು, ಪರ-ವಿರೋಧ ಚರ್ಚೆಗೆ ಗ್ರಾಸವಾಗಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ವೇದಿಕೆಯಲ್ಲಿರುವಾಗಲೇ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರು, 'ಎಲ್ಲರೂ ಮುಖ್ಯಮಂತ್ರಿಗಳಾಗಿದ್ದಾರೆ. ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಸಿಕ್ಕಿಲ್ಲ. ಹಾಲಿ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಟ್ಟು ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಬೇಕು' ಎಂದು ಆಗ್ರಹಿಸಿದರು. ಈ ಹೇಳಿಕೆಯ ಬೆನ್ನಲ್ಲೇ ಸ್ವಾಮೀಜಿಗಳ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಮುರ್ಮು

ರಾಷ್ಟ್ರಪತಿ ಭಾಷಣದಲ್ಲೂ ತುರ್ತು ಪರಿಸ್ಥಿತಿ ಪ್ರಸ್ತಾಪ

ದೆಹಲಿ: 18ನೇ ಲೋಕಸಭೆ ರಚನೆ ನಂತರ ಮೊದಲ ಬಾರಿಗೆ ನಡೆಯುತ್ತಿರುವ ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಗುರುವಾರ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು, 1975ರ ತುರ್ತು ಪರಿಸ್ಥಿತಿ ಹೇರಿಕೆ ದೇಶದ ಸಂವಿಧಾನದ ಮೇಲೆ ನಡೆದ ನೇರ ದಾಳಿ ಎಂದು ವ್ಯಾಖ್ಯಾನಿಸಿದರು.

ರಾಷ್ಟ್ರಪತಿಗಳ ಭಾಷಣದಲ್ಲಿನ ಈ ಅಂಶಕ್ಕೆ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳ ಹಲವು ಸದಸ್ಯರು ವಿರೋಧ ವ್ಯಕ್ತಪಡಿಸಿದರು. ಕಾಂಗ್ರೆಸ್ ಸದಸ್ಯರು ಸದನದಲ್ಲಿ ಗದ್ದಲ ಎಬ್ಬಿಸಿ ರಾಷ್ಟ್ರಪತಿಗಳ ಭಾಷಣಕ್ಕೆ ಪದೇ ಪದೇ ಅಡ್ಡಿಪಡಿಸಲು ಯತ್ನಿಸಿದರು. ಇದೇ ವೇಳೆ ರಾಷ್ಟ್ರಪತಿಯವರು, ನೀಟ್ ಮತ್ತು ನೆಟ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕೇಂದ್ರ ಸರಕಾರ ಬದ್ಧವಾಗಿದೆ. ಆ ದಿಶೆಯಲ್ಲಿ ಹೊಸ ಕಠಿಣ ಕಾನೂನನ್ನು ಜಾರಿಗೆ ತಂದಿದೆ ಎಂದು ಹೇಳಿದರು. ಆಗ ಪ್ರತಿಪಕ್ಷಗಳ ಸದಸ್ಯರು ನೀಟ್, ನೀಟ್ ಎಂದು ಕೂಗುತ್ತಾ ಭಾಷಣಕ್ಕೆ ತಡೆಯೊಡ್ಡಲು ಯತ್ನಿಸಿದರು.

ಮಣಿಪುರ ಹಿಂಸಾಚಾರವನ್ನು ಪ್ರಸ್ತಾಪಿಸಿದಾಗಲೂ ಪ್ರತಿಪಕ್ಷಗಳ ಸದಸ್ಯರು ಸರಕಾರದ ವಿರುದ್ಧ ಧಿಕ್ಕಾರ ಕೂಗಿ ಗದ್ದಲ ಎಬ್ಬಿಸಿದರು. 'ಸ್ಪಷ್ಟ ಬಹುಮತದ ಸರಕಾರ', 'ಜನರ ವಿಶ್ವಾಸ' ಪದ ಬಳಕೆ ಖಂಡಿಸಿ ಪ್ರತಿಪಕ್ಷಗಳು ಗದ್ದಲವೆಬ್ಬಿಸಿ, ಭಾಷಣಕ್ಕೆ ಅಡ್ಡಿ ಪಡಿಸಲೆತ್ನಿಸಿದರು. ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್, ಲೋಕಸಭೆ ಸಭಾಧ್ಯಕ್ಷ ಓಂ ಬಿರ್ಲಾ ಅವರು ಉಪಸ್ಥಿತರಿದ್ದರು.

ಪಾನಿಪುರಿಗಳಲ್ಲಿ ಕೃತಕ ಬಣ್ಣ ಬಳಕೆ ನಿಷೇಧ?

ಬೆಂಗಳೂರು: ಈಗಾಗಲೇ ರಾಜ್ಯದಲ್ಲಿ ಬಾಂಬೆ ಮಿಠಾಯಿ, ಗೋಬಿ ಮಂಚೂರಿ, ಕಬಾಬ್‌ನಲ್ಲಿ ಬಳಕೆ ಮಾಡುವ ಕೃತಕ ಬಣ್ಣ ನಿಷೇಧಿಸಲಾಗಿದೆ. ಇದೀಗ ಪಾನಿಪುರಿ ಹಾಗೂ ಮಸಾಲ ಪುರಿ ಪದಾರ್ಥಗಳಿಗೆ ಬಳಸುವ ಕೃತಕ ಬಣ್ಣ ನಿಷೇಧದ ಬಗ್ಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿರ್ಧಾರ ಕೈಗೊಳ್ಳಲಿದೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ರಾಜ್ಯದ ವಿವಿಧೆಡೆ ಪಾನಿಪುರಿ ಹಾಗೂ ಮಸಾಲಪುರಿ ಮಾದರಿಗಳನ್ನು ಪರಿಶೀಲಿಸಿದ್ದು, ಇವುಗಳಿಗೆ ಬಳಸುವ ಪದಾರ್ಥದಲ್ಲಿ ಕೃತಕ ಬಣ್ಣ ಬಳಸುವುದು ದೃಢಪಟ್ಟಿದೆ.

ಸಂಗ್ರಹಿಸಲಾದ 260 ಮಾದರಿಗಳಲ್ಲಿ 41 ಮಾದರಿಗಳು ಅಸುರಕ್ಷಿತವೆಂದು ವರದಿ ಬಂದಿದ್ದು, ಕೃತಕ ಬಣ್ಣ ಬಳಸಿರುವುದು ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯದ ಪೋಕ್ಸೋ ಪ್ರಕರಣ

ಬಿಎಸ್‌ವೈ ವಿರುದ್ಧ 750 ಪುಟ ದೋಷಾರೋಪ ಪಟ್ಟಿ ಸಲ್ಲಿಕೆ



ಬೆಂಗಳೂರು: ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ಕೋರ್ಟ್‌ಗೆ 750 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಯಡಿಯೂರಪ್ಪ ಸೇರಿದಂತೆ ನಾಲ್ಕು ಜನರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 73 ಸಾಕ್ಷಿಗಳ ಪರಿಗಣಿಸಿ ದೋಷಾರೋಪ ಪಟ್ಟಿ ತಯಾರಿಸಲಾಗಿದೆ. ಯಡಿಯೂರಪ್ಪ, ಅರುಣ್, ರುದ್ರೇಶ್ ಮತ್ತು ಮರಿಸ್ವಾಮಿ ಎಂಬವರ ವಿರುದ್ಧ ಸಿಐಡಿ ಅಧಿಕಾರಿಗಳು 1ನೇ ತ್ವರಿತಗತಿ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ ನೀಡಿದ್ದಾರೆ ಎಂಬ ಆರೋಪದ ಮೇಲೆ ಸದಾಶಿವನಗರ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿತ್ತು.

→ 4

ಆರೋಪ ಪಟ್ಟಿಯಲ್ಲೇನಿದೆ?

- ಬಾಲಕಿ ದಾಖಲಿಸಿದ್ದ ಹಳೇ ಕೇಸ್ ಬಗ್ಗೆ ವಿಚಾರಿಸುತ್ತಾ ರೂಮಿಗೆ ಕರೆದೊಯ್ದು ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿರುವುದಾಗಿ ಆರೋಪಪಟ್ಟಿಯಲ್ಲಿ ಉಲ್ಲೇಖ.
- ಬಾಲಕಿ ಪ್ರತಿಭಟಿಸಿದಾಗ ಹಣ ನೀಡಿ ಕಳುಹಿಸಿರುವುದಾಗಿ ಆರೋಪ.
- ಬಾಲಕಿಯ ತಾಯಿ ಈ ಘಟನೆ ಕುರಿತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು. ವೈ.ಎಂ.ಅರುಣ್, ಎಂ. ರುದ್ರೇಶ್, ಜಿ.ಮರಿಸ್ವಾಮಿ ಎನ್ನುವರು ಮಹಿಳೆಯನ್ನು ಕರೆತಂದು ವಿಡಿಯೋ ಪೋಸ್ಟ್ ಡಿಲೀಟ್ ಮಾಡಿಸಿದ್ದಾರೆ.

ಅಡ್ವಾಣಿ ಡಿಸ್ಚಾರ್ಜ್



ದೆಹಲಿ: ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರು ಅನಾರೋಗ್ಯದಿಂದ ಚೇತರಿಸಿಕೊಂಡಿದ್ದಾರೆ. ಹೀಗಾಗಿ, ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಯಿಂದ ಗುರುವಾರ ಮಧ್ಯಾಹ್ನ ಬಿಡುಗಡೆ ಮಾಡಲಾಗಿದೆ. ಅಡ್ವಾಣಿ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಬುಧವಾರ ರಾತ್ರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಜು.8 ರಷ್ಯಾಗೆ ಮೋದಿ

ದೆಹಲಿ: ಭಾರತ-ರಷ್ಯಾ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತು ಚರ್ಚಿಸಲು ಪ್ರಧಾನಿ ಮೋದಿ ಜುಲೈ 8ರಂದು ರಷ್ಯಾಕ್ಕೆ ಭೇಟಿ ನೀಡಲಿದ್ದಾರೆ. ಈ ಭೇಟಿ ಸಮಯದಲ್ಲಿ ರಕ್ಷಣೆ, ತೈಲ, ಅನಿಲ ಮತ್ತು ಇತರ ಭಾರತೀಯ ಕಾರ್ಯತಂತ್ರದ ಹಿತಾಸಕ್ತಿಗಳ ಕುರಿತು ಚರ್ಚೆಗಳನ್ನು ನಿರೀಕ್ಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಯೋಗೇಶ್ವರ್ ಮೈತ್ರಿ ಅಭ್ಯರ್ಥಿಯಾದರೆ, ನಿಶಾ ಕೈ ಅಭ್ಯರ್ಥಿಯಾಗುವ ಸಾಧ್ಯತೆ

ಚನ್ನಪಟ್ಟಣ ಅಖಾಡಕ್ಕೆ ಸೈನಿಕನ ಪುತ್ರಿ?

ವಿಶ್ವವಾಣಿ ವಿಶೇಷ

ಬೆಂಗಳೂರು: ದಿನದಿಂದ ದಿನಕ್ಕೆ ಚನ್ನಪಟ್ಟಣ ಉಪ ಚುನಾವಣೆ ಕಾವೇರುವ ಸರ್ವ ಲಕ್ಷಣಗಳು ಗೋಚರಿಸುತ್ತಿವೆ. ಕುಮಾರಸ್ವಾಮಿ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ತೆರವಾಗಿರುವ ಚನ್ನಪಟ್ಟಣದ ಮೇಲೆ ಸೈನಿಕ ಯೋಗೇಶ್ವರ್ ಕಣ್ಣಿಟ್ಟಿದ್ದಾರೆ. ಇದರ ಬೆನ್ನಲ್ಲೇ, ಯೋಗೇಶ್ವರ್ ಎದುರಾಳಿ ಯಾಗಿ ಪುತ್ರಿಯನ್ನು ಕಣಕ್ಕೆ ಇಳಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಚನ್ನಪಟ್ಟಣದಿಂದ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಸ್ಪರ್ಧಿಸಲಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ. ಈ ನಡುವೆ ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯಾ ಸ್ಪರ್ಧಿಸಿದರೂ ಅಚ್ಚರಿಯಿಲ್ಲ ಎನ್ನಲಾಗುತ್ತಿದೆ. ಆದರೆ ಈ ಎಲ್ಲದರ ನಡುವೆ ಸೈನಿಕ ಯೋಗೇಶ್ವರ್‌ಗೆ ಪ್ರತಿಯಾಗಿ, ಪುತ್ರಿಯನ್ನು ಬ್ರಹ್ಮಾಸ್ತ್ರದ ರೀತಿ ಯಲ್ಲಿ ಬಳಸಿಕೊಂಡರೆ ಹೇಗೆ ಎನ್ನುವ ಆಲೋಚನೆಯಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ ಎನ್ನಲಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿಯೇ ನಿಶಾ ಯೋಗೇಶ್ವರ್ ಕಾಂಗ್ರೆಸ್ ಸೇರಲಿದ್ದಾರೆ ಎನ್ನಲಾಗಿತ್ತು. ಆದರೆ 'ತಂದೆ- ಮಗಳನ್ನು ಬೇರ್ಪಡಿಸಲ್ಲ' ಎನ್ನುವ ಮಾತನ್ನು ಡಿ.ಕೆ. ಶಿವಕುಮಾರ್ ಹೇಳಿದ್ದರು.

→ 4

ನಿಶಾ
ಯೋಗೇಶ್ವರ್ ಪುತ್ರಿ
ಐಶ್ವರ್ಯಾ
ಶಿವಕುಮಾರ್ ಪುತ್ರಿ

- ಈ ಮೊದಲೇ ಕಾಂಗ್ರೆಸ್‌ಗೆ ಸೇರಲು ಮುಂದಾಗಿದ್ದ ನಿಶಾ ಯೋಗೇಶ್ವರ್
- ತಂದೆಯ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಆರೋಪಿಸಿದ್ದ ಮಗಳು
- ತಂದೆಗೆ ಪುತ್ರಿಯೇ ಪ್ರತಿಸ್ಪರ್ಧಿಯಾದರೆ, ಕಾಂಗ್ರೆಸ್ ಲಾಭವಾಗುವ ಸಾಧ್ಯತೆ
- ಯೋಗೇಶ್ವರ್ ಸ್ಪರ್ಧಿಸದಿದ್ದರೆ, ಡಿಕೆಶಿ ಪುತ್ರಿ ಐಶ್ವರ್ಯಾ ಕಣಕ್ಕಿಳಿಸಲು ಚಿಂತನೆ

ಐಶ್ವರ್ಯಾ ಹೆಸರು ಮುನ್ನೆಲೆಗೆ!

ಜೆಡಿಎಸ್‌ಗೆ ಚಿಹ್ನೆಯಲ್ಲಿ ಯೋಗೇಶ್ವರ್ ಸ್ಪರ್ಧೆಗೆ ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಒಂದು ವೇಳೆ ಅವರ ಬದಲಿಗೆ ಬೇರೊಬ್ಬರನ್ನು ಚನ್ನಪಟ್ಟಣದಿಂದ ನಿಲ್ಲಿಸಿದರೆ, ಆ ಸಮಯದಲ್ಲಿ ನಿಶಾ ಯೋಗೇಶ್ವರ್ ಬದಲಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುತ್ರಿ ಐಶ್ವರ್ಯಾ ಹೆಗ್ಡೆ ಅವರನ್ನು ನಿಲ್ಲಿಸುವ ಬಗ್ಗೆಯೂ ಚರ್ಚೆಗಳು ಆರಂಭವಾಗಿದೆ. ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ ಸುರೇಶ್ ಬದಲಿಗೆ ಮೂರನೇ ಅಭ್ಯರ್ಥಿಯನ್ನಾಗಿ ಐಶ್ವರ್ಯಾ ಹೆಸರನ್ನು ತೇಲಿಬಿಡುವ ಬಗ್ಗೆಯೂ ಡಿಕೆ ಆಪ್ತ ವಲಯದಲ್ಲಿ ಚರ್ಚೆಗಳು ಶುರುವಾಗಿದೆ. ಆದರೆ ಈ ಎಲ್ಲ ಚರ್ಚೆಗಳು ಪ್ರಾಥಮಿಕ ಹಂತದಲ್ಲಿದ್ದು, ಯಾವುದೇ ಅಂತಿಮ ತೀರ್ಮಾನಕ್ಕೆ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

ಇಂದು ಮೋದಿ-ಸಿದ್ದು ಭೇಟಿ

ರಾಜ್ಯಕ್ಕಾಗಬೇಕಿರುವ ಕೆಲಸಗಳ ಪಟ್ಟಿ ಹಸ್ತಾಂತರ
ಅಮಿತ್ ಶಾ ಸೇರಿ ಹಲವು ಸಚಿವರ ಭೇಟಿ ಸಾಧ್ಯತೆ

ಬೆಂಗಳೂರು: ಮೂರು ದಿನಗಳ ದೆಹಲಿ ಪ್ರವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ರಾತ್ರಿ ಎಂಟು ಗಂಟೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಯಾಗಿ ರಾಜ್ಯಕ್ಕೆ ಕೇಂದ್ರದಿಂದ ಆಗಬೇಕಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲಿದ್ದಾರೆ.

ಗುರುವಾರ ದೆಹಲಿಗೆ ತೆರಳಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಸಂಜೆ ರಾಜ್ಯ ದಿಂದ ಆಯ್ಕೆಯಾಗಿರುವ ಸಂಸದ ರೊಂದಿಗೆ ಸಭೆ ನಡೆಸಿದರು. ಶುಕ್ರವಾರ ಬೆಳಗ್ಗೆ ಕೇಂದ್ರದ ವಿವಿಧ ಸಚಿವರನ್ನು ಭೇಟಿಯಾ ಗಲಿರುವ ಸಿಎಂ, ಸಂಜೆ ಮೋದಿ ಅವರನ್ನು ಭೇಟಿಯಾ ಗಲಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದ ಸಂಸದರೊಂದಿಗೆ ಚರ್ಚೆ: ಬುಧವಾರ ಸಂಜೆ ರಾಜ್ಯದಿಂದ ಆಯ್ಕೆಯಾಗಿರುವ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯ ರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್ ಚರ್ಚೆ ನಡೆಸಿದರು.

→ 4

ಪ್ರಧಾನಮಂತ್ರಿ ಸೇರಿದಂತೆ ವಿವಿಧ ಕೇಂದ್ರ ಸಚಿವರನ್ನು ನಮ್ಮ ಸಚಿವರೊಂದಿಗೆ ಹೋಗಿ ಭೇಟಿ ಮಾಡಲಿದ್ದೇನೆ. ಕೇಂದ್ರದಿಂದ ರಾಜ್ಯಕ್ಕೆ ಆಗಬೇಕಿರುವ ಕೆಲಸಗಳ ಪಟ್ಟಿಯನ್ನು ಈಗಾಗಲೇ ಕಳುಹಿಸಲಾಗಿದ್ದು, ಇದೇ ವಿಷಯವಾಗಿ ಪ್ರಧಾನ ಮಂತ್ರಿ ಸೇರಿದಂತೆ ಕೇಂದ್ರದ ವಿವಿಧ ಸಚಿವರೊಂದಿಗೆ ಚರ್ಚೆ ನಡೆಸಲಾಗುವುದು.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ನೀಟ್: ಇಬ್ಬರು ಸೆರೆ

ಪಟನಾ: ವೈದ್ಯಕೀಯ ಶಿಕ್ಷಣ ಪ್ರವೇಶದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-2024) ಪ್ರಶ್ನೆ ಪತ್ರಿಕೆಗಳ ಸೋರಿಕೆ ಪ್ರಕರಣದ ತನಿಖೆ ಆರಂಭಿಸಿರುವ ಸಿಬಿಐ, ಮೊದಲಿಗೆ ಬಿಹಾರದಲ್ಲಿ ಇಬ್ಬರು ಆರೋಪಿಗಳನ್ನು ಗುರುವಾರ ಬಂಧಿಸಿದೆ. ಪಟನಾ ನಗರದ ಮನೀಶ್ ಕುಮಾರ್, ಆಶುತೋಷ್ ಬಂಧಿತರು.

ಸುಳ್ಳು ದೂರು: ಜೈಲು

ಬೆಳಗಾವಿ: ತೀವ್ರ ಕುತೂಹಲ ಮೂಡಿಸಿದ್ದ ಬೆಳಗಾವಿ ಹೆಸ್ಕಾಂ ಅಧಿಕಾರಿ ವಿರುದ್ಧದ ಸುಳ್ಳು ಅತ್ಯಾಚಾರ ಆರೋಪ ಪ್ರಕರಣದಲ್ಲಿ ಎಲ್ಲ 13 ಸಹೋದ್ಯೋಗಿಗಳಿಗೆ 3 ವರ್ಷ 6 ತಿಂಗಳು ಜೈಲುವಾಸ ಮತ್ತು ತಲಾ 86 ಸಾವಿರ ರು. ದಂಡ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗುರುವಾರ ಮಹತ್ವದ ತೀರ್ಪು ನೀಡಿದೆ.

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ: 2024-25ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಪಿ.ಯು.ಸಿ. ಮತ್ತು ಪಿ.ಯು. ಸಮಾನಾಂತರ ಕೋರ್ಸ್‌ನ ವಿದ್ಯಾರ್ಥಿಗಳಿಂದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು https://shp.karnataka.gov.in/bcwd ಅನ್ನು ಸಂಪರ್ಕಿಸಿ ಇಫೆಔಐಫೇಉನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನವಾಗಿರುತ್ತದೆ. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in ಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ-ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇಲ್ಲಿಗೆ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬೇಕು. ಹೆಚ್ಚಿನ ಮಾಹಿತಿಗಾಗಿ 8050770004, 8050770005 ಸಹಾಯವಾಣಿಗೆ ಸಂಪರ್ಕಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಗಾಯತ್ರಿ ತಿಳಿಸಿದ್ದಾರೆ.

ಶಿಕ್ಷಕರ ಅರ್ಹತಾ ಪರೀಕ್ಷೆ: ಸಕಲ ಸಿದ್ಧತೆ

ಚಿಕ್ಕಮಗಳೂರು: ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂನ್ 25 ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ 2024 ಕ್ಕೆ ಸಂಬಂಧಿಸಿದಂತೆ ಸಭೆ ನಡೆಯಿತು. ಪರೀಕ್ಷೆಯ ಪೂರ್ವ ತಯಾರಿಗಾಗಿ ಕೈಗೊಂಡಿರುವ ಕ್ರಮಗಳು: ಪರೀಕ್ಷೆಯು ಜೂನ್ 30ರಂದು ಭಾನುವಾರ ನಡೆಯಲಿದ್ದು. ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರಗಳಲ್ಲಿ 7 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯು ನಡೆಯಲಿದೆ. ಬೆಳಗ್ಗಿನ ಅಧಿವೇಶನ 4 ಪರೀಕ್ಷಾ ಕೇಂದ್ರಗಳಲ್ಲಿ ಬೆಳಿಗ್ಗೆ 9.30 ರಿಂದ 12.00 ಗಂಟೆಯ ವರೆಗೆನಡೆಯಲಿದೆ. ಪರೀಕ್ಷೆ ಬರೆಯಲಿರುವ ಒಟ್ಟು ಅಭ್ಯರ್ಥಿಗಳ 1115 ಮಧ್ಯಾಹ್ನದ ಅಧಿವೇಶನ 7 ಪರೀಕ್ಷೆ ಬರೆಯಲಿರುವ ಒಟ್ಟು ಅಭ್ಯರ್ಥಿಗಳ 1703 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ.

ಪರೀಕ್ಷಾ ಕೇಂದ್ರಗಳ ವಿವರ: ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಬಸವನಹಳ್ಳಿ ಚಿಕ್ಕಮಗಳೂರು ಎಂ.ಇ.ಎಸ್ ಬಾಲಕಿಯರ ಪದವಿ ಪೂರ್ವ ಕಾಲೇಜು ರತ್ನಗಿರಿ ರಸ್ತೆ ಚಿಕ್ಕಮಗಳೂರು, ಜೆ.ವಿ.ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿಜಯಪುರ, ವಿಜಯಪುರ ಚಿಕ್ಕಮಗಳೂರು, ಸೆಂಟ್ ಜೋಸೆಫ್ ಬಾಲಕಿಯರ ಪ್ರೌಢಶಾಲೆ ಚರ್ಚ್ ರಸ್ತೆ ಚಿಕ್ಕಮಗಳೂರು, ಸರಕಾರಿ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಬೇಲೂರು ರಸ್ತೆ ಚಿಕ್ಕಮಗಳೂರು, ಟಿ.ಎಂ.ಎಸ್ ಪ್ರೌಢಶಾಲೆ ಕೋರ್ಟ್ ಹತ್ತಿರ ಚಿಕ್ಕಮಗಳೂರು, ಎಸ್.ಟಿ.ಜೆ ಪ್ರೌಢಶಾಲೆ ಬೇಲೂರು ರಸ್ತೆ ಚಿಕ್ಕಮಗಳೂರು. ಪರೀಕ್ಷಾ ಸಹಾಯವಾಣಿ ಸ್ಥಾಪಿಸಲಾಗಿದೆ. 9448999334, 9481155696 ಪರೀಕ್ಷೆಯ ಬಗ್ಗೆ, ಪರೀಕ್ಷಾ ವೇಳಾಪಟ್ಟಿಯ ಬಗ್ಗೆ, ಅಭ್ಯರ್ಥಿಗಳು ಪ್ರವೇಶ ಪತ್ರ ಡೌನ್ ಲೋಡ್ ಮಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಲಾಗಿದೆ.

{ಆಯನೂರು ಮಂಜುನಾಥ್} ಕೆಪಿಸಿಸಿ ವಕ್ತಾರ

ಬಿಜೆಪಿ ಆಡಳಿತಾವಧಿಯಲ್ಲಿ ಡಿಸಿಸಿ ಬ್ಯಾಂಕ್‌ನ ಹುದ್ದೆಗಳ ನೇಮಕಾತಿಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದ್ದು, ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು.



ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸೊರಬ.
ಸಿ ಮಿಸ್ ನಂ.222/2024
ಅರ್ಜಿದಾರರು:- 1) ಜಯಮ್ಮ ಕೋಂ ಈರಪ್ಪ ಬಡಿಗೇರ ಸುಮಾರು 54 ವರ್ಷ, ಸಮನವಳ್ಳಿ ಗ್ರಾಮದ ವಾಸಿ, ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು, 2) ಮೌನೇಶ ಬಡಿಗೇರ ಬಿನ್ ಭೀಮಪ್ಪ ಸುಮಾರು 57 ವರ್ಷ, ಸಮನವಳ್ಳಿ ಗ್ರಾಮದ ವಾಸಿ, ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು.
ವಿರುದ್ಧ
ಎದುರುದಾರರು:- ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ, ಆನವಟ್ಟಿ, ಸೊರಬ ತಾಲ್ಲೂಕು.
ಪತ್ರಿಕ ಪಕಟಣೆ.
1ನೇ ಅರ್ಜಿದಾರರ ಮಾವ ಹಾಗೂ 2ನೇ ಅರ್ಜಿದಾರರ ತಂದೆಯಾದ ಭೀಮಪ್ಪ ಬಿನ್ ಮಾತಾರ್ಂಡಪ್ಪ ಇವರು ದಿನಾಂಕ:11-03-1968 ರಂದು ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಸಮನವಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. 1ನೇ ಅರ್ಜಿದಾರರ ಮಾವ ಹಾಗೂ 2ನೇಅರ್ಜಿದಾರರ ತಂದೆಯ ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್ ನಂ.222/2024 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ, ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ ದಿನಾಂಕ: 20/07/2024ರಂದು ಬೆಳಗ್ಗೆ 11-00 ಗಂಟೆಗೆ ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಶ್ರೀಮತಿ ಮಂಜಮ್ಮ, ಸೊರಬ
ರೋಲ್ ನಂ.ಕೆ.ಎ.ಆರ್1736/2011
M: 97406 82443

ಪಟ್ಟಣದ ಪ್ರಮುಖ ರಸ್ತೆ ಶೀಘ್ರವೇ ಅಗಲೀಕರಣ: ಶಾಸಕ

ರಸ್ತೆ ಅಭಿವೃದ್ಧಿಗೆ 20 ಕೋಟಿ ಹಣ ಬಿಡುಗಡೆ, ಬೀದಿ ಬದಿ ವ್ಯಾಪರಸ್ಥರು ಸಹಕರಿಸಿ

ಜಗಳೂರು: ತಾಲೂಕು ಮುಖ್ಯ ರಸ್ತೆ ಶೀಘ್ರವೇ ಅಗಲಿಕರಣ ಮಾಡಲಾಗುವುದು ಎಂದು ಜಗಳೂರು ಕ್ಷೇತ್ರದ ಶಾಸಕ ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗುರುವಾರ ಜನ ಸಂಪರ್ಕ ಸಭೆ ಹಾಗೂ ಸಿಬ್ಬಂದಿಗಳಿಗೆ ಹೆಲ್ಮೆಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾರ್ವಜನಿಕರ ಬಹುದಿನದ ಕನಸಾದ ಪಟ್ಟಣದ ಪ್ರಮುಖ ರಸ್ತೆಯ ಅಗಲಿಕರಣ ಕಾರ್ಯಗಳು ಟೆಂಡರ್ ಹಂತಕ್ಕೆ ತಲುಪಿದ್ದು, ಕಾಮಗಾರಿಗಾಗಿ 20 ಕೋಟಿ ಹಣ ಬಿಡುಗಡೆಯಾಗಿದ್ದು, ಶೀಘ್ರವೇ ರಸ್ತೆ ಅಗಲೀಕರಣಕ್ಕೆ ಅಣಿಯಾಗಲಾಗುವುದು ಎಂದು ತಿಳಿಸಿದರು.

ಪಟ್ಟಣದ ಬೀದಿ ಬದಿ ವ್ಯಾಪರಸ್ಥರು, ನನ್ನನ್ನು ಭೇಟಿಯಾಗಿ ರಸ್ತೆ ಅಗಲೀಕರಣ ಮುಂದೂಡಲು ಮನವಿ ಮಾಡಿದ್ದು, ಆದರೆ ಒಬ್ಬ ಜವಾಬ್ದಾರಿಯುತ ರಾಜಕಾರಣಿಯಾಗಿ, ಸುಗಮ ಸಂಚಾರಕ್ಕೆ ಅನುವು ಮಾಡುವುದಕ್ಕೆ ರಸ್ತೆ ಅಗಲೀಕರಣ ಅವಶ್ಯಕವಾಗಿದೆ ಎಂದು ಮನವರಿಕೆ ಮಾಡಿ ಕೊಟ್ಟಿದ್ದೇನೆ ಅಲ್ಲದೆ ರಾಜ್ಯದ ಹಲವು ಪಟ್ಟಣ, ನಗರಗಳಲ್ಲಿ ರಸ್ತೆಗಳು ಅಗಲೀಕರಣ ಮಾಡಿದ್ದಾರೆ.ಆದರೆ ಜಗಳೂರು ಪಟ್ಟಣದಲ್ಲಿ ಏಕೆ ಬೇಡ ಎಂಬ ಪ್ರಶ್ನೆಗಳನ್ನು ಅವರ ಮುಂದೆ ಇಟ್ಟಿದ್ದೇನೆ ರಸ್ತೆ ಅಗಲೀಕರಣಕ್ಕೆ ನಿಮ್ಮಗಳ ಸಹಕರ ತುಂಬಾ ಮುಖ್ಯ ಎಂದು ಮನವರಿಕೆ ಮಾಡಿದ್ದೇನೆ ಅಲ್ಲದೇ ಪ.ಪಂ ಮುಖ್ಯಾಧಿಕಾರಿ, ಗುತ್ತೆಗೆದಾರ, ಮತ್ತು ಇಂಜಿನಿಯರ್‌ಗಳ ಪಿಡಬ್ಲ್ಯೂಡಿ ಇಲಾಖೆ ಹೀಗೆ ಎಲ್ಲಾರ ಸಮ್ಮುಖದಲ್ಲಿ ಚರ್ಚೆ ನಡೆಸಿ, ನಮ್ಮ ಪಟ್ಟಣ ಸ್ವಚ್ಚಸುಂದರ ಪಟ್ಟಣವಾಗುವುದಕ್ಕೆ

ರಸ್ತೆ ನಿಯಮ ಪಾಲಿಸಿ

ಪ್ರತಿ ವರ್ಷಕ್ಕೆ 52000 ಜನರು ಹೆಲ್ಮೆಟ್ ಧರಿಸದೆ ಸಾವನ್ನಪ್ಪುವ ಮಾಹಿತಿ ಲಭ್ಯವಾಗುತ್ತದೆ ಆದ್ದರಿಂದ ಬೈಕ್ ಸವರಾರು ಖಡ್ಡಾಯವಾಗಿ ರಸ್ತೆ ನಿಯಮಗಳನ್ನು ಪಾಲನೆ ಮಾಡಿ, ಜೀವ ರಕ್ಷಣೆ ಮಾಡಿಕೊಳ್ಳುವುದಕ್ಕೆ ಗುಣಮಟ್ಟ ಹೆಲ್ಮೆಟ್ ಧರಿಸಬೇಕು ಎಂದು ಜಗಳೂರು ಕ್ಷೇತ್ರದ ಶಾಸಕ ದೇವೇಂದ್ರಪ್ಪ ತಿಳಿಸಿದರು.

ಶ್ರಮಿಸಬೇಕು ಎಂದು ಸೂಚಿಸಿದ್ದೇನೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್

ಪಟ್ಟಣ ಮುಖ್ಯ ರಸ್ತೆ ಅಗಲೀಕರಣಕ್ಕೆ 20 ಕೋಟಿ ಹಣ ಬಿಡುಗಡೆಯಾಗಿದೆ ಶೀಘ್ರವೇ ರಸ್ತೆ ಅಗಲೀಕರಣಕ್ಕೆ ಮುಂದಾಗಲಾಗುವುದು ಅಲ್ಲದೆ ಪಟ್ಟಣದ ಸೌಂದರ್ಯಕ್ಕೆ, ಅಭಿವೃದ್ಧಿಗೆ ಬೀದಿ ಬದಿ ವ್ಯಾಪರಸ್ಥರು ಸಹಕರಿಸಬೇಕು, ಬೀದಿ ಬದಿ ವ್ಯಾಪರಸ್ಥರನ್ನು, ಅಂಗಡಿ ಮಾಲೀಕರನ್ನು ಒಕ್ಕಲೆಬ್ಬಿಸುವ ಉದ್ದೇಶ ಉದ್ದೇಶವಿಲ್ಲ. ಕಾನೂನು ಚೌಕಟ್ಟಿನಲ್ಲಿ ಸಾರ್ವಜನಿಕರ ಹಿತಕಾಯುತ್ತೇನೆ ಕೊಟ್ಟ ಭರವಸೆಯನ್ನು ಹುಸಿಯಾಗದಂತೆ ಹಿಡೇರಿಸುತ್ತೇನೆ.
- ಬಿ.ದೇವೇಂದ್ರಪ್ಪ ಶಾಸಕ

ಮಾತನಾಡಿ, ದೇಶದಲ್ಲಿ ಪ್ರತಿ ಗಂಟೆಗೆ ಸಂಭವಿಸುವ 52 ಜನರ ಪ್ರಮಾಣದಲ್ಲಿ 19 ಜನ ಹೆಲ್ಮೆಟ್ ಧರಿಸದೆ ಸಾವನ್ನಪ್ಪುತ್ತಿದ್ದಾರೆ ಎಂದರು. ಪ್ರತಿ ವರ್ಷಕ್ಕೆ 52000 ಜನರು ಹೆಲ್ಮೆಟ್ ಧರಿಸದೆ ಸಾವನ್ನಪ್ಪುವ ಮಾಹಿತಿ ಲಭ್ಯವಾಗುತ್ತದೆ ಆದ್ದರಿಂದ ಬೈಕ್ ಸಾವರಾರು ಖಡ್ಡಾಯವಾಗಿ ರಸ್ತೆ ನಿಯಮಗಳನ್ನು ಪಾಲನೆ ಮಾಡಿ, ಜೀವ ರಕ್ಷಣೆ ಮಾಡಿಕೊಳ್ಳುವುದಕ್ಕೆ ಗುಣಮಟ್ಟ ಹೆಲ್ಮೆಟ್ ಧರಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ಪಿ ಬಸವರಾಜ್, ಸಿಪಿಐ ಶ್ರೀನಿವಾಸ್ ರಾವ್, ಪಿಎಸ್‌ಈ ಸಾಗರ್ ಎ ಎಸ್,ಐ ಚಂದ್ರಶೇಖರ್, ಶಿವಪ್ರಸಾದ್,ಸಿಬ್ಬಂದಿಗಳಾದ ವಸಂತ ರೆಡ್ಡಿ, ನಾಗಭೂಷಣ್, ಬಸವರಾಜ್, ಶಶಿಕುಮಾರ್ ಸೇರಿದ್ದಂತೆ ಹಲವರಿದ್ದರು.

ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕೆಂಪೇಗೌಡರ ಕೊಡುಗೆ ಅಪಾರ

ದಾವಣಗೆರೆ: ಸರ್ವಜಾತಿ ಸಮನ್ವಯ, ಸರ್ವಧರ್ಮ ಪಾಲಕರು, ವಿಶಾಲ ನೀರಾವರಿ ಯೋಜನೆಗಳು ಹಾಗೂ ಬೃಹತ್ ಬೆಂಗಳೂರು ನಿರ್ಮಾಣದಂತಹ ಕಾರ್ಯಗಳಿಂದ ನಾಡಿನಲ್ಲಿ ಪ್ರಖ್ಯಾತಿ ಹೊಂದಿದಂತಹವರು ನಾಡದೊರೆ ಕೆಂಪೇಗೌಡರು ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್.ಎಂ.ವಿ ಹೇಳಿದರು.

ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಒಕ್ಕಲಿಗರ ಸಂಘ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡ ಅವರ 515 ನೇ ಜಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಮಹಾತ್ಮರ ಚಿಂತನೆಗಳು ಮತ್ತು ಕಾರ್ಯ ಚಟುವಟಿಕೆಗಳನ್ನು ನಾವು ತಿಳಿದುಕೊಳ್ಳುವ ಮೂಲಕ ನಮ್ಮಲ್ಲಿ ಬದಲಾವಣೆ ತಂದುಕೊಳ್ಳಬೇಕು. ಅಂದಿನ ಯೋಜನೆಗಳು ಇಂದಿಗೂ ಪ್ರಸ್ತುತವಾಗಿವೆ, ಕೆರೆಗಳನ್ನು ನಿರ್ಮಾಣ ಮಡಿ ಅಂತರ್ಜಲ ಹೆಚ್ಚಿಸುವ ಮೂಲಕ ರೈತರಿಗೆ ಅತೀ ಹೆಚ್ಚು ಉಪಯೋಗವಾಗುವಂತೆ ಮಾಡಿದ್ದಾರೆ. ನಮ್ಮ ರಾಜ್ಯ ಯಾವುದೇ ರೀತಿಯ ಭೂಕಂಪಗಳಿಂದ ಹಾನಿಗೊಳಗಾದೇ ಇರುವ ಸ್ಥಳವನ್ನಾಗಿ ನಿರ್ಮಿಸಿದ್ದಾರೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತಾನಾಡಿ ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಬೆಂಗಳೂರಿಗೆ ದೊಡ್ಡ ಕೊಡುಗೆಗಳನ್ನು ನೀಡಿ ರಾಜಧಾನಿಯಾಗಿ ಮಾಡಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ಎಂದರು.

ಅಪ್ರತಿಮ ಆಡಳಿತಾಗಾರ

ನಾಡು ಕಂಡ ಅಪ್ರತಿಮ ಆಡಳಿತಾಗಾರ, ತುಂಬಾ ದೂರದೃಷ್ಟಿಯಿಂದ ನಮ್ಮ ರಾಜ್ಯ, ದೇಶಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ವಿದೇಶಗಳಿಗೆ ಹೋದರೆ ನಮ್ಮವರನ್ನು ಯಾರು ಗುರುತಿಸುವುದಿಲ್ಲ, ಆದರೆ ನಾವು ಬೆಂಗಳೂರಿನಿಂದ ಬಂದಿದ್ದೇವೆ ಎಂದರೆ ಕೂಡಲೇ ನಮ್ಮನ್ನು ಗುರುತಿಸುತ್ತಾರೆ. ಎಲ್ಲರನ್ನೂ ಕೈಬಿಸಿ ಕರೆಯುವಂತೆ ಮಾಡಿರುವ ಖ್ಯಾತಿ ಕೆಂಪೇಗೌಡರದ್ದು, 1510 ಇಸವಿಯಲ್ಲಿ ಜನನ ಹೊಂದಿ 35 ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿ ರಾಜ್ಯದಲ್ಲಿ ಶಾಂತಿ ಹಾಗೂ ಎಲ್ಲ ರೀತಿಯಲ್ಲಿ ಸುಸ್ಥಿರ ಬದುಕಿಗೆ ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್.ಎಂ.ವಿ ಹೇಳಿದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿ ನೀಡಿ: ಡಿಸಿ

ಚಿತ್ರದುರ್ಗ: ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಮಾಹಿತಿಯನ್ನು ತಾಲೂಕುವಾರು ಸಂಗ್ರಹಿಸಿ ವಾರದೊಳಗೆ ವರದಿ ನೀಡಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ 2024ನೇ ಸಾಲಿನ ಎರಡನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಲೆಯಿಂದ ಹೊರಗುಳಿದ ಮಕ್ಕಳು ಬಾಲ್ಯವಿವಾಹ, ಬಾಲ ಕಾರ್ಮಿಕರಾಗುವ ಸಾಧ್ಯತೆ ಇರುವುದರಿಂದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ವಿವಿಧ ಕಾರ್ಯತಂತ್ರದ ಮೂಲಕ ಮುಖ್ಯವಾಹಿನಿಗೆ ತರಬೇಕು ಎಂದರು. ಶಾಲಾ ಶಿಕ್ಷಣ ಇಲಾಖೆಯ ಡಿವೈಪಿಸಿ ವೆಂಕಟೇಶ್ ಮಾತನಾಡಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕ್ರಮವಹಿಸಲಾಗಿದ್ದು, ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ 489 ಮಕ್ಕಳಲ್ಲಿ 27 ಮಕ್ಕಳು ಪ್ರವೇಶಾತಿ ಪಡೆಯುವುದು ಬಾಕಿ ಇದೆ ಎಂದರು. ಇಲಾಖೆಯ ಅಧಿಕಾರಿಗಳು ಇದ್ದರು.

ಜಿಲ್ಲಾ ವ್ಯಾಪ್ತಿಯಲ್ಲಿ ಸರಕಾರದಿಂದ ಪರವಾನಗಿ ಪಡೆಯದೇ ಮದ್ಯ ಮಾರಾಟ ಮಾಡುವ ಬಗ್ಗೆ ಮಾಹಿತಿ, ದೂರು ಬಂದ ಕೂಡಲೇ ಖಚಿತಪಡಿಸಿ ಕೊಂಡು ದಾಳಿ ಮಾಡಿ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವವರ ಮೇಲೆ ದಾಳಿ ಮಾಡಿ ಒಟ್ಟು 179 ಪ್ರಕರಣ ದಾಖಲು ಮಾಡಲಾಗಿದೆ.
-ಧರ್ಮೇಂದರ್ ಕುಮಾರ್ ಮೀನಾ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಕೆಂಪೇಗೌಡರು ಒಬ್ಬ ವೈಜ್ಞಾನಿಕ ಚಿಂತಕ: ತಹಸೀಲ್ದಾರ್

ಹರಿಹರ: ಬೆಂಗಳೂರು ನಿರ್ಮಾತೃ ಕೆಂಪೇಗೌಡರು ಒಬ್ಬ ವೈಜ್ಞಾನಿಕ ಚಿಂತಕರಾಗಿ ದೂರ ದೃಷ್ಟಿ ಇಟ್ಟುಕೊಂಡು ಬೆಂಗಳೂರು ನಗರವನ್ನಾಗಿ ನಿರ್ಮಿಸಿದ ಕಾರಣದಿಂದ ಬೆಂಗಳೂರನ್ನು ಸಾಂಸ್ಕೃತಿಕ ನಗರವನ್ನಾಗಿ ಇಂದಿಗೂ ನೋಡುತ್ತಿದ್ದೇವೆ ಎಂದು ತಹಸೀಲ್ದಾರ್ ಗುರುಬಸವರಾಜ್ ಹೇಳಿದರು.

ನಗರದ ಮೇರಿಯಾ ಸದನದಲ್ಲಿ ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಶಾಲಾ ಶಿಕ್ಷಣ ಇಲಾಖೆ ಹರಿಹರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತೋತ್ಸವ ಕಾರ್ಯಕ್ರಮದ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಹನುಮಂತಪ್ಪ ಮಾತನಾಡಿ ಒಬ್ಬ ಜನಪರ ಆಡಳಿತಗಾರನಿಗೆ ಇರಬೇಕಾಗಿದ್ದ ದೂರ ದೃಷ್ಟಿಯ ಜಾಣ್ಮೆಯನ್ನು ಹೊಂದಿದ್ದ ಕೆಂಪೇಗೌಡರು ಈ ವಿಷಯದಲ್ಲಿ ಇಂದಿಗೂ ನಮಗೆ ಆದರ್ಶ ವಾಗಿದ್ದಾರೆ. ಅವರು ಗವಿ ಗಂಗಾಧರೇಶ್ವರ ದೇವಸ್ಥಾನ, ಬಸವೇಶ್ವರ, ದೊಡ್ಡ ಗಣೇಶ, ಹನುಮಂತನ ಗುಡಿ ಮತ್ತು ಚೆನ್ನಿಗರಾಯಸ್ವಾಮಿಯ ದೇವಸ್ಥಾನಗಳನ್ನು ಕಟ್ಟಿಸಿ, ಬೆಂಗಳೂರಿಗೆ ಸಂಸ್ಕೃತಿಯ ಮೆರುಗನ್ನೂ ತುಂಬಿದ್ದಾರೆ ಎಂದರು.

ಮಾಗಡಿ ತಾಲೂಕಿನ ಕೆಂಪಾಪುರ ಗ್ರಾಮದಲ್ಲಿ ಜನಿಸಿದ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಅಡಿಯಲ್ಲಿ ಆಡಳಿತಗಾರರಾಗಿ

ನಂತರ ಯಲಹಂಕ ಅರಸರಾಗಿ 1513 ರಿಂದ 1559 ರ ವರೆಗೆ 46 ವರ್ಷಗಳ ಕಾಲ ಆಡಳಿತ ನಡೆಸಿದ ಕೆಂಪೇಗೌಡರು ಬೆಂಗಳೂರು ಕೋಟೆ ಮತ್ತು ಬೆಂಗಳೂರು ಪೇಟೆಯ ನಕ್ಷೆಯನ್ನು ಸಿದ್ದಪಡಿಸಿ ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ಹೀಗೆ ನಾಡಿನ ಅನೇಕರು ಮಹನೀಯರ ದಾರ್ಶನಿಕರ ಈ ನಾಡಿಗೆ ಮತ್ತು ದೇಶಕ್ಕೆ ಕೊಡಗಿಯನ್ನು ನೀಡಿದ್ದು ಇವರ ಚರಿತ್ರೆಯ ಪುಸ್ತಕಗಳನ್ನ ಓದುವ ಮೂಲಕ ಅವರ ಆದರ್ಶಗಳನ್ನ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ತಾಲೂಕು ಕಛೇರಿಯಿಂದ ನಾಡಪ್ರಭು ಕೆಂಪೇಗೌಡರ ಭಾವಚಿತ್ರವನ್ನು ಮೆರವಣಿಗೆ ಮೂಲಕ ಸಭಾ ಕಾರ್ಯಕ್ರಮಕ್ಕೆ ಬರಲಾಯಿತು. ಕೆಂಪೇಗೌಡ ಜಯಂತೋತ್ಸವ ನಿಮಿತ್ಯ ಶಿಕ್ಷಣ ಇಲಾಖೆಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಬಹುಮಾನವಾಗಿ ಪುಸ್ತಕ ವಿತರಿಸಲಾಯಿತು.

ವೇದಿಕೆಯಲ್ಲಿ ತಾಲೂಕು ಪಂಚಾಯಿತಿ ಇ ಓ ರಾಮಕೃಷ್ಣಪ್ಪ, ಗಿರಿಯಮ್ಮ ಕಾಲೇಜಿನ ಪ್ರಾಚಾರ್ಯ ಸುಜಾತ, ಬಿ ಆರ್ ಸಿ ಕೃಷ್ಣಪ್ಪ, ಶಿಕ್ಷಣ ಇಲಾಖೆ ಮಂಜುಳಮ್ಮ ಕಂದಾಯ ಇಲಾಖೆಯ ಸಂತೋಷ್ ಸೇರಿದಂತೆ ಇತರರಿದ್ದರು.

ಬೆಂಗಳೂರು ಹೊಸದಾಗಿ ನಿರ್ಮಾಣ

ಕೆಂಪೇಗೌಡರು ಬೆಂಗಳೂರು ನಗರವನ್ನು ಹೊಸದಾಗಿ ನಿರ್ಮಾಣ ಮಾಡಿದರು. ದೊಡ್ಡ ನಗರವಾಗಿ ರೂಪಗೊಂಡ ಕಾರಣದಿಂದಲೇ ನಮ್ಮ ರಾಜ್ಯದ ರಾಜಧಾನಿ ಮಹಾನಗರವಾಗಿ ಬೆಳೆಯಿತು ನೂರಾರು ಕೆರೆಗಳನ್ನು ನಿರ್ಮಾಣ ಮಾಡಿ ಬೆಂಗಳೂರಿನಂತಹ ಸುಬೀಕ್ಷ ನಗರವನ್ನು ಕಟ್ಟಿದ್ದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ವಿಶ್ವದ ಅನೇಕ ರಾಷ್ಟ್ರಗಳು ಇಂದು ಬೆಂಗಳೂರನತ್ತ ತಿರುಗು ನೋಡುತ್ತಿವೆ. ಇದರಲ್ಲಿ ಕೆಂಪೇಗೌಡರ ಪಾತ್ರ ಮಹತ್ವದ್ದು ಎಂದು ತಹಸೀಲ್ದಾರ್ ಗುರುಬಸವರಾಜ್ ತಿಳಿಸಿದರು.

4.80 ಕೋಟಿ ರು.ವಂಚನೆ: ಆರೋಪಿ ಬಂಧನ

ಚಿತ್ರದುರ್ಗ: ಕೇವಲ 60 ದಿನಗಳಲ್ಲಿ ಹಣ ಡಬ್ಬಲ್ ಮಾಡಿಕೊಡುವುದಾಗಿ ನಂಬಿಸಿ ಜಿಲ್ಲೆಯ 107 ಜನರಿಂದ 4.79 ಕೋಟಿ ರೂ. ಸಂಗ್ರಹಿಸಿ ಪರಾರಿಯಾಗಿದ್ದ ಆರೋಪಿಯನ್ನು ಚಿತ್ರದುರ್ಗ ಸೈಬರ್ ಠಾಣೆ ಪೊಲೀಸರು ಬಂಧಿಸಿ ಕರೆತಂದಿದ್ದಾರೆ

ಆಂಧ್ರಪ್ರದೇಶದ ಕರ್ನೂಲ್ ನಗರದ ಕೋಡೆ ರಮಣಯ್ಯ ಬಂಧಿತ ಆರೋಪಿಯಾಗಿದ್ದು, ವಂಚನೆ ಪ್ರಕರಣದ ಬಳಿಕ ದೇಶವನ್ನೇ ತೊರೆದು ವಿಯೆಟ್ನಾಂ ಸೇರಿಕೊಂಡಿದ್ದ.

ಈ ಮಾಹಿತಿ ಪತ್ತೆ ಮಾಡಿದ ಚಿತ್ರದುರ್ಗದ ಸೈಬರ್ ಠಾಣೆ ಪೊಲೀಸರು, ಭಾರತ ಸರ್ಕಾರದ ಬ್ಯೂರೋ ಆಫ್ ಇಮಿಗ್ರೇಶನ್ ವಿಭಾಗದ ನೆರವಿನೊಂದಿಗೆ ಲುಕ್‌ಔಟ್ ನೋಟೀಸ್ ಹೊರಡಿಸಿದ್ದರು.

2024 ಜೂನ್ 8 ರಂದು ಆರೋಪಿ ಕೋಡೆ ರಮಣಯ್ಯ ಕೊಲ್ಕತ್ತಾದ ಧಮ್ ಧಮ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದಾನೆ. ತಕ್ಷಣ ವಿಮಾನ ನಿಲ್ದಾಣ ಪ್ರಾಧಿಕಾರದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ಕೋಲ್ಕತ್ತಾದ ನೇತಾಜಿ ಸುಭಾಶ್‌ಚಂದ್ರಭೋಸ್ ವಿಮಾನ ನಿಲ್ದಾಣದ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ಈ ಮಾಹಿತಿ ತಿಳಿದ ಚಿತ್ರದುರ್ಗದ ಸಿಇಎನ್ ಠಾಣೆ ಪೊಲೀಸರು, ಕಲ್ಕತ್ತಾಕ್ಕೆ ತೆರಳಿ ಅಲ್ಲಿನ ನ್ಯಾಯಾಲಯದ ಅನುಮತಿ ಪಡೆದು, ಚಿತ್ರದುರ್ಗದ ಸೈಬರ್ ಪೊಲೀಸ್ ಠಾಣೆಗೆ ಕರೆತಂದು ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿ ಕೋಡೆ ರಮಣಯ್ಯ ಬಳಿಯಿದ್ದ ಲ್ಯಾಪ್ ಟ್ಯಾಪ್, ಮೂರು ಮೊಬೈಲ್ ವಶಪಡಿಸಿಕೊಂಡು ಪಂಚನಾಮೆ ನಂತರ ದಾವಣಗೆರೆ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ಮಿರರ್ ಇಮೇಜ್ ಮಾಡಿಕೊಡಲು ನೀಡಲಾಗಿದೆ.

ಆರೋಪಿಯಿಂದ ಇನ್ನೂ ಸಾಕಷ್ಟು ದಾಖಲೆಗಳ ಸಂಗ್ರಹ ಬಾಕಿಯಿದೆ ಎಂದು ಕಾರ್ಯಾಚರಣೆಯಲ್ಲಿ ಸಿಇಎನ್ ಪೊಲೀಸ್ ಠಾಣೆ ಪಿಐ ವೆಂಕಟೇಶ್, ಸಿಬ್ಬಂದಿಗಳಾದ ಕೆಂಚಪ್ಪ, ಸಿಪಿಸಿ ಗಗನ್ ದೀಪ್ ಪವಾರ್ ಭಾಗವಹಿಸಿದ್ದು, ಸಿಬ್ಬಂದಿಗಳ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದರ್ ಕುಮಾರ್ ಮೀನಾ ಶ್ಲಾಘಿಸಿದ್ದಾರೆ.

4.80 ಕೋಟಿ ವಂಚನೆ

2023 ಡಿಸೆಂಬರ್ ನಿಂದ ಸುಮಾರು 9 ತಿಂಗಳ ಹಿಂದೆ ಚಿಕ್ಕಜಾಜೂರು ರೈಲ್ವೇ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುವ ಪಿ.ವಿ.ಶೇಷಯ್ಯ ಹಾಗೂ ಎಂ.ಏಳುಕುಂಡಲು ಅವರ ಮೂಲಕ ಮಾಹಿತಿ ಪಡೆದುಕೊಂಡು ಆಂಧ್ರಪ್ರದೇಶ ಕರ್ನೂಲ್ ಜಿಲ್ಲೆಯ ಕೋಡೆ ರಮಣಯ್ಯ ಎಂಬುವವರ ಕ್ರೌಡ್ ಕ್ಲಬ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ 60 ದಿನಗಳಲ್ಲಿ ಡಬಲ್ ಆಗುತ್ತದೆ ಎಂದು ಮಾಹಿತಿ ನೀಡಿದ್ದು, ಅದರಂತೆ ಚಿಕ್ಕಜಾಜೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಸದುರ್ಗ ತಾಲೂಕು ಬಾಗೂರು ಮೂಲದ ರಮೇಶಪ್ಪ ತಮ್ಮ ಸ್ನೇಹಿತ ರವೀಂದ್ರ ಹೆಸರಿನಲ್ಲಿ 1.4 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದ್ದಾರೆ.

ಮಾದಕ ವಸ್ತು ಜೀವನವನ್ನು ಕಸಿದುಕೊಳ್ಳುತ್ತಿದೆ

ದಾವಣಗೆರೆ: ಮಾದಕ ವಸ್ತುಗಳು ನಮ್ಮ ಜೀವನವನ್ನು ಹಾಳು ಮಾಡುವುದಲ್ಲದೇ ನಮ್ಮನ್ನು ದೈಹಿಕ, ಮಾನಸಿಕವಾಗಿ ಹಾಳು ಮಾಡುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್ ತಿಳಿಸಿದರು.

ಗುರುವಾರ ಜಿಲ್ಲಾ ಕಾರಾಗೃಹ ಇಲಾಖೆಯ ಸಂಭಾಗಣದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ದಾವಣಗೆರೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಮನೋವೈದ್ಯಕೀಯ ವಿಭಾಗ, ಚಿಗಟೇರಿ ಜಿಲ್ಲಾಸ್ಪತ್ರೆ ದಾವಣಗೆರೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಪೋಲೀಸ್ ಇಲಾಖೆ, ಜಿಲ್ಲಾ ಕಾರಾಗೃಹ ಇಲಾಖೆ, ಹಾಗೂ ವಿವಿಧ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಣಿಕೆ ವಿರೋಧಿ ದಿನದ ಪ್ರಯುಕ್ತ ಕಾರಾಗೃಹ ನಿವಾಸಿಗಳಿಗೆ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತಾನಾಡಿದರು.

ಇಂದಿನ ಯುವ ಸಮೂಹವು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗುತ್ತಿರುವುದು, ದುರದೃಷ್ಟಕರ ಸಂಗತಿಯಾಗಿದೆ. ಯುವಕರು ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಆಲೋಚನೆ ಮಾಡಬೇಕೆ ಹೊರತು, ದುರಾಲೋಚನೆ ಮಾರ್ಗದಕಡೆ ಗಮನಹರಿಸಬಾರದು ಎಂದರು. ಮಾದಕ ವ್ಯಸನಕ್ಕೆ ದಾಸರಾದವರು ಪರಿಜ್ಞಾನವಿಲ್ಲದೇ ನಶೆಯಲ್ಲಿಯೇ ಏನಾದರೂ ಅವಘಡಗಳನ್ನು ಮಾಡಿಕೊಂಡು ಕಾರಾಗೃಹಕ್ಕೆ ಬಂದಿರುವವರೇ ಹೆಚ್ಚಾಗಿದೆ. ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವಿಕೆಯಲ್ಲಿ ಯೋಗ, ಧ್ಯಾನದಲ್ಲಿ ನಿರತರಾಗಬೇಕು ಮತ್ತು ಕಾರಾಗೃಹವು ನಿಮಗೆ ಪರಿವರ್ತನಾ ಮಂದಿರವಿದ್ದಂತೆ, ಇಲ್ಲಿ ಬಂದಿರುವ ಎಲ್ಲರೂ ಕೂಡ ತಮ್ಮ ಮನಃಪರಿವರ್ತನೆ ಮಾಡಿಕೊಂಡು ಹೊರಗಡೆ ಹೋದ ನಂತರ ಹೊಸ ಜೀವನವನ್ನು ಪ್ರಾರಂಭಿಸಿ ಎಂದು ಕಿವಿ ಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೆಚ್ಚುವರಿ ಪೊಲೀಸ್ ಅಧಿಕ್ಷಕರಾದ ಮಂಜುನಾಥ್ ಮಾತನಾಡಿ ಯುವಕರು ದುಷ್ಟರ ಸಹವಾಸದಿಂದ ಅನ್ಯ ಮಾರ್ಗದಕಡೆಗೆ ಹೋಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾರಾಗೃಹದ ಅಧೀಕ್ಷಕರಾದ ಕರ್ಣ.ಬಿ.ಕ್ಷತ್ರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಆಸ್ಪತ್ರೆಯ ಮನೋವೈದ್ಯರಾದ ಡಾ. ಮರುಳಸಿದ್ದಪ್ಪ ಉಪಸ್ಥಿತರಿದ್ದರು.

ಯುವಕರಿಂದ ಉತ್ತಮ ಸಮಾಜ

ಯುವಕರು ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಆಲೋಚನೆ ಮಾಡಬೇಕೆ ಹೊರತು, ದುರಾಲೋಚನೆ ಮಾರ್ಗದಕಡೆ ಗಮನಹರಿಸಬಾರದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್ ತಿಳಿಸಿದರು.

ಡಿಕೆಶಿಗೆ ಸಿಎಂ ಹುದ್ದೆ ನೀಡಲು ಶಾಸಕ ಮನವಿ

ಚನ್ನಗಿರಿ: ಮೂರಲ್ಲ, ಐದು, 10, 15 ಜನರನ್ನು ಉಪ ಮುಖ್ಯಮಂತ್ರಿ ಮಾಡಿ ಅಥವಾ ಜಾತಿಗೊಬ್ಬ ಉಪ ಮುಖ್ಯಮಂತ್ರಿ ಮಾಡಿದರೂ ನಮ್ಮ ವಿರೋಧವಿಲ್ಲ. ಡಿಸಿಎಂ ಡಿ.ಕೆ.ಶಿವಕುಮಾರ ಅವರನ್ನು ಮುಖ್ಯಮಂತ್ರಿ ಮಾಡಿ ಎಂದು ಚನ್ನಗಿರಿ ಶಾಸಕ ಬಸವರಾಜ ವಿ.ಶಿವಗಂಗಾ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜಾತಿ ಆಧಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಅನೇಕ ಬೇಡಿಕೆಯಿಡುತ್ತಿದ್ದಾರೆ. ಡಿಸಿಎಂ ವಿಚಾರ ಪದೇ ಪದೇ ಪ್ರಸ್ತಾಪ ಮಾಡುತ್ತಲೇ ಇದ್ದಾರೆ. ನಾವೂ ಹಿರಿಯರನ್ನು ಅನುಸರಿಸಬೇಕಾಗುತ್ತದೆ. ಎಷ್ಟು ಬೇಕಾದರೂ ಡಿಸಿಎಂ ಹುದ್ದೆ ಸೃಷ್ಟಿಸಲಿ. ಮೊದಲು ಡಿ.ಕೆ. ಶಿವಕುಮಾರ ಸಾಹೇಬರನ್ನು ಮುಖ್ಯಮಂತ್ರಿ ಮಾಡಲಿ ಎಂದರು. ಲೋಕಸಭೆ ಚುನಾವಣೆ ಮುಗಿದಿದೆ. ಈಗ ಉಪ ಮುಖ್ಯಮಂತ್ರಿ ಹುದ್ದೆ ವಿಚಾರ ಸರಿ ಅಲ್ಲ. ಕೆಲ ಹಿರಿಯ ನಾಯಕರು ಮೂರು ಡಿಸಿಎಂ ಹುದ್ದೆಗೆ ಬೇಡಿಕೆ ಇಡುತ್ತಿದ್ದಾರೆ. ಮೊದಲು ಡಿ.ಕೆ. ಶಿವಕುಮಾರ ಸಾಹೇಬರನ್ನು ಪಕ್ಷ ಸಂಘಟನೆಯನ್ನು ಗುರುತಿಸಿ, ಉಪ ಮುಖ್ಯಮಂತ್ರಿಯಾಗಿ ಮಾಡಿದೆಯೇ ಹೊರತು, ಜಾತಿಯ ಆಧಾರದಲ್ಲಿ ಮಾಡಿಲ್ಲ. ಈಗ ಮುಖ್ಯಮಂತ್ರಿ ಮಾಡಿ ಐದು ಡಿಸಿಎಂ ಹುದ್ದೆ ಸೃಷ್ಟಿಸಲಿ, ಸಂಪುಟ ಪುನಾರಚನೆ ಮಾಡಲಿ ಎಂದು ತಿಳಿಸಿದರು.

ಮಕ್ಕಳಿಗೆ ಮೊದಲ ದೇಗುಲ ಶಾಲಾ ಕೊಠಡಿ

ಚಳ್ಳಕೆರೆ: ಮಕ್ಕಳಿಗೆ ಮೊದಲ ದೇಗುಲ ಶಾಲಾ ಕೊಠಡಿ ಇಂತಹ ದೇಗುಲದಲ್ಲಿ ಮುಗ್ಧ ಮಕ್ಕಳು ಸಂಸ್ಕರ, ಸಂಸ್ಕೃತಿ ಈಗೇ ಉತ್ತಮ ನಡವಳಿಕೆ ಕಲಿಯು ವಿಶಿಷ್ಠವಾದ ಈ ದೇಗುಲದಲ್ಲಿ ನಿರಂತವಾಗಿ ಅಕ್ಷರಭ್ಯಾಸ ನಡೆಯುತ್ತಿದೆ ಎಂದು ಹೊಂಗಿರಣ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಡಿ.ದಯಾನಂದ ಪ್ರಹ್ಲಾದ್ ಹೇಳಿದರು. ಅವರು ನಗರದ ಹೊಂಗಿರಣ ಇಂಟರ್‌ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಕ್ಷರ ಅಭ್ಯಾಸ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಅಕ್ಷರ ಅಭ್ಯಾಸ ಎಂಬುದು ಶಾಲಾ ಹಂತದಿಂದ ನಡೆಯಬೇಕು ಮತ ಮಾನ್ಯಗಳಿಗೆ ಹೋಗುವುದು ಒಂದು ಪದ್ಧತಿಯಾದರೆ ಶಾಲಾ ಹಂತದಲ್ಲಿ ನಿತ್ಯವೂ ಅಕ್ಷರ ಕಲಿಯುವ ದೇಗುಲದಲ್ಲಿ ನಿರಂತರ ಅಭ್ಯಾಸ ಶಾಶ್ವತವಾಗಿರುತ್ತದೆ ಎಂದರು. ಇನ್ನೂ ಸಂಸ್ಥೆಯ ಡಿ.ಎನ್.ಶಿವಪ್ರಸಾದ್ ಮಾತನಾಡಿ, ಬಾಲ್ಯದಲ್ಲಿ ಮಕ್ಕಳಿಗೆ ಯಾವ ರೀತಿಯಲ್ಲಿ ನಾವು ಕಲಿಸುತ್ತೇವೆ ಎಂಬುದು ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ಕೇವಲ ಅಕ್ಷರ ಎಂಬುದು ಅಕ್ಷರ ಅಲ್ಲ ಅದು ಬದಲಾಗಿ ಮನುಷ್ಯನ ಸರ್ವಾಂಗೀಣ ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡುತ್ತದೆ. ಆದ್ದರಿಂದ ಬಾಲ್ಯದಲ್ಲಿ ಮಗುವಿಗೆ ಅಕ್ಷರ ಅಭ್ಯಾಸ ಎಂಬ ಕಾರ್ಯಕ್ರಮ ನಮ್ಮ ಶಾಲೆಯಲ್ಲಿ ಪ್ರತಿ ವರ್ಷವೂ ಆಮ್ಮಿಕೊಂಡಿರುವುದು ಸಂತಸ ತಂದಿದೆ ಎಂದರು. ಮುಖ್ಯ ಶಿಕ್ಷಕ ಪ್ರಸಾದ್ ಮಾತನಾಡಿದರು. ಈದೇ ಸಂಧರ್ಭದಲ್ಲಿ ಸ್ವಾಮೀಜಿಯಾದ ಶ್ರೀಕುಮಾರಸ್ವಾಮಿ, ಶಾಲಾ ಶಿಕ್ಷಕರಾದ ಶೈಲಜಾ, ಶೋಭಾ, ಮಹದೇವ್ ಇತರರು ಇದ್ದರು.

ಬೆಂಗಳೂರು ಕಟ್ಟುವಲ್ಲಿ ಗೌಡರ ಪಾತ್ರ ಮಹತ್ವದ್ದು

ಚಿಕ್ಕಮಗಳೂರು: ಬೆಂಗಳೂರು ನಗರವನ್ನು ಅರ್ಥಪೂರ್ಣವಾಗಿ ಕಟ್ಟುವಲ್ಲಿ ಕೆಂಪೇಗೌಡರ ಕೊಡುಗೆ ಬಹಳ ಮಹತ್ವವಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್ ತಿಳಿಸಿದರು.ಜಿಲ್ಲಾಡಳಿತದ ವತಿಯಿಂದ ಇಂದು ನಗರದ ಕುವೆಂಪು ಕಲಾ ಮಂದಿರದಲ್ಲಿ ನಾಡ ಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಕೆಂಪೇಗೌಡ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ನಾಡ ಪ್ರಭು ಕೆಂಪೇಗೌಡರು ಸುಭದ್ರವಾದ ಬೆಂಗಳೂರು ನಿರ್ಮಾಣದ ಜೊತೆಯಲ್ಲಿಯೇ ಜನಪರ ಕಾರ್ಯಾಕ್ರಮಗಳನ್ನು ಕೈಗೊಂಡರು ಬಾಲ್ಯದಲ್ಲಿಯೇ ಚುರುಕಾಗಿದ್ದ ಅವರು ಗುರುಕುಲದಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ರಾಜ ನೀತಿ, ಆರ್ಥಿಕ ತಿಳುವಳಿಕೆ ಇತ್ತು. ಕುಸ್ತಿ, ಯುದ್ಧ ಕಲೆಗಳನ್ನು ಕಲಿತಿದ್ದು ವಿಜಯನಗರದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಿರಿಯನ್ನು ಕಣ್ಣಾಲೆ ಕಂಡಿದ್ದ ಅವರು ಎಲ್ಲ ವೈಭವಗಳನ್ನು ಪುನರ್ ಪ್ರತಿಷ್ಠಾಪಿಸುವ ಬಯಕೆ ಕೆಂಪೇಗೌಡ ಅವರದಾಗಿತ್ತು ಎಂದು ಹೇಳಿದರು. ಕೆಂಪೇಗೌಡರ ಕುರಿತು ಹಾಸನ ಜಿಲ್ಲೆ ಬಾಣಾವರದ ಬಾಣಾವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ದೊರೇಶ್ ಬಿಳಿಕೆರೆ ಉಪನ್ಯಾಸ ನೀಡಿದರು.ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ವರಸಿದ್ಧಿ ವೇಣುಗೋಪಾಲ್, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮದ ಅಧ್ಯಕ್ಷ ಬಿ.ಹೆಚ್ ಹರೀಶ್, ಜಿ.ಪಂ ಕಾರ್ಯನಿರ್ವಹಣಾಧಿಕಾರಿ ಡಾ. ಗೋಪಾಲ ಕೃಷ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿಕ್ರಂ ಅಮಟೆ, ಜಿಲ್ಲಾ ವಕ್ಕಲಿಗ ಸಂಘದ ಅಧ್ಯಕ್ಷ ಟಿ. ರಾಜಶೇಕರ್ ಉಪಸ್ಥಿತರಿದ್ದರು.

ತೆರಿಗೆ ಹಣ ಸಮರ್ಪಕ ಬಳಕೆಯಾಗಲಿ

ಚಿಕ್ಕಮಗಳೂರು: ಜಿಲ್ಲೆಯು ಪ್ರವಾಸೋದ್ಯಮಕ್ಕೆ ಹೆಸರಾಂತವಾಗಿದೆ ಪ್ರೇಕ್ಷಣೀಯ ಸ್ಥಳಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ಆಧಾಯ ಕ್ರೋಡಿಕರಿಸಿ ಜನರ ತೆರಿಗೆ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ನಗರದ ಅಭಿವೃದ್ಧಿಗೆ ಮುಂದಾಗಿ ಎಂದು ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಡಾ.ಸಿ. ನಾರಾಯಣಸ್ವಾಮಿ ಹೇಳಿದರು. ನಗರದ ನಗರಸಭೆ ಕಾರ್ಯಾಲಯ ಸಭಾಂಗಣದಲ್ಲಿ ನೆನ್ನೆ (ಬುಧವಾರ)ನಡೆದ ಐದನೇ ರಾಜ್ಯ ಹಣಕಾಸು ಆಯೋಗ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯ ಮುಳ್ಳಯ್ಯನಗಿರಿ ಪ್ರದೇಶಕ್ಕೆ ದೇಶದ ವಿವಿಧಡೆಯಿಂದ ಪ್ರವಾಸಿಗರು ಆಗಮಿಸುತ್ತಾರೆ ಇಲ್ಲಿನ ಪ್ರಕೃತಿ ಸೌಂದರ್ಯ ವೈಶಿಷ್ಟತೆಯನ್ನು ಪಡೆದಿದೆ ಇದನ್ನು ಆಧಾರವಾಗಿಟ್ಟುಕೊಂಡು ಪ್ರವಾಸಿ ತಾಣಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಮೂಲಕ ತೆರಿಗೆಯನ್ನು ಕ್ರೋಡಿಕರಿಸಿಕೊಂಡು ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ತೆರಿಗೆ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ನಗರದ ಅಭಿವೃದ್ಧಿಗೆ ಗಮನಹರಿಸಿ ಎಂದು ತಿಳಿಸಿದರು. ನಗರಸಭೆ ಅಧ್ಯಕ್ಷ ವರಸಿದ್ದಿ ವೇಣುಗೋಪಾಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಮಾತನಾಡಿದರು. ಸಭೆಯಲ್ಲಿ ಐದನೇ ರಾಜ್ಯ ಹಣಕಾಸು ಆಯೋಗದ ಸದಸ್ಯರಾದ ಆರ್.ಎಸ್ ಫೊಂಡೆ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಕಳಪೆ ಕಾಮಗಾರಿ ಕುರಿತು ತನಿಖೆ

ಶಿವಮೊಗ್ಗ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪರ ಅಧಿಕಾರ ಅವಧಿಯಲ್ಲಿ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಅವೈಜ್ಞಾನಿಕ ಮತ್ತು ಕಳಪೆಯಿಂದ ಕೂಡಿರುವುದರಿಂದ ಉನ್ನತ ಮಟ್ಟದ ತನಿಖೆ ನಡೆಸುವಂತೆ ರಾಜ್ಯ ಸರಕಾರವನ್ನು ಕೋರಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರರಾದ ವೈ.ಬಿ.ಚಂದ್ರಕಾಂತ್ ತಿಳಿಸಿದ್ದಾರೆ. ದೇಶದಲ್ಲಿ ಸರಕಾರಗಳಿಂದ ತೆರಿಗೆ ಸಂಗ್ರಹವು ಹೆಚ್ಚಳವಾದಂತೆ ಅಭಿವೃದ್ಧಿ ಕಾರ್ಯಗಳು ಹೆಚ್ಚಾಗಿರುವುದರಲ್ಲಿ ಯಾವುದೆ ಮಹತ್ವವಿಲ್ಲ. ಶಿವಮೊಗ್ಗ ನಗರವೂ ಸೇರಿದಂತೆ ಜಿಲ್ಲೆಯಲ್ಲಿ ನೂರಾರು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ನಡೆದಿರುವಂತ ಅಭಿವೃದ್ಧಿ ಕಾಮಗಾರಿಗಳು ತಾಂತ್ರಿಕವಾಗಿ ನಡೆದಿದ್ದರಿಂದ ಕಾಮಗಾರಿಗಳಿಗೆ ಬಳಸಲಾದ ಹಣ ನೀರಿನಲ್ಲಿ ಹೋಮ ಮಾಡಿದಂತೆ ಆಗಿದೆ. ಇಂತಹ ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಗಳಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದ ಬಿ.ವೈ. ರಾಘವೇಂದ್ರ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರೆ ಕಾರಣರಾಗಿದ್ದಾರೆಂದು ವೈ.ಬಿ.ಚಂದ್ರಕಾಂತ್ ಆರೋಪಿಸಿದ್ದಾರೆ.

ಮೋಕ್ಷವಾಹಿನಿ ವಾಹನ ಲೋಕಾರ್ಪಣೆ

ಶಿವಮೊಗ್ಗ: ಭಾವಸಾರ ಕ್ಷತ್ರಿಯ ಮಹಾಜನ ಸಮಾಜ ವತಿಯಿಂದ ಶಿವಮೊಗ್ಗದ ನಾಗರಿಕರ ಅನುಕೂಲಕ್ಕಾಗಿ ಮೋಕ್ಷವಾಹಿನಿ ವಾಹನವನ್ನು ಇತ್ತೀಚೆಗೆ ಲೋಕಾರ್ಪಣೆ ಮಾಡಲಾಗಿದ್ದು, ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಮಾಜದ ಅಧ್ಯಕ್ಷ ಟಿ.ವಿ. ಗಜೇಂದ್ರನಾಥ್ ಮನವಿ ಮಾಡಿಕೊಂಡರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಮೋಕ್ಷವಾಹಿನಿಯನ್ನು ನಗರದ ಆದಿಶಕ್ತಿ ಕಾರ್ ಮಾಲೀಕ ನಾರಾಯಣರಾವ್ ತಾತುಸ್ಕರ್ ಸಾರ್ವಜನಿಕರ ಅನುಕೂಲಕ್ಕಾಗಿ ಬಾಹುಸಾರ ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಎಂದರು. ಸದರಿ ಮೋಕ್ಷವಾಹಿನಿ ನಗರದ ರೋಟರಿ ಚಿತಾಗಾರದಲ್ಲಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದ್ದು, ಹಾಗೂ ರೋಟರಿ ಚಿತಾಗಾರದಲ್ಲಿಯೇ ಮೋಕ್ಷ ವಾಹಿನಿ ಕಾಯ್ದಿರಿಸಲು ಮಾಡಲು ವ್ಯವಸ್ಥೆ ಮಾಡಲಾಗಿದೆ. ನಗರದ 50 ಕಿ.ಮೀ. ಒಳಗೆ ಬಳಸಬಹುದಾಗಿದೆ. 600 ರೂ. ಶುಲ್ಕ ನಿಗದಿಪಡಿಸಲಾಗಿದೆ ಎಂದರು. ಹೆಚ್ಚಿನ ಮಾಹಿತಿಗಾಗಿ 9448139485, 7204563074 ಅಥವಾ 6361957271ರಲ್ಲಿ ಸಂಪರ್ಕಿಸಬಹುದು.

ಶಿವಮೊಗ್ಗ: ಇಂದು ಕಲಾ ಪರಿಷತ್ ಉದ್ಘಾಟನೆ

ಶಿವಮೊಗ್ಗ: ಸಹ್ಯಾದ್ರಿ ಕಲಾ ಕಾಲೇಜಿನ ವಿದ್ಯಾರ್ಥಿ ಕಲಾ ಪರಿಷತ್ ಉದ್ಘಾಟನಾ ಸಮಾರಂಭ ಜೂ.28ರ ಬೆಳಗ್ಗೆ 10 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ.ಕೆ.ಎನ್. ಮಂಜುನಾಥ್ ತಿಳಿಸಿದ್ದಾರೆ.ವಿದ್ಯಾರ್ಥಿ ಕಲಾ ಪರಿಷತ್ ಅನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಮಿಥುನ್ ಕುಮಾರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕುವೆಂಪು ವಿವಿ ಕುಲಸಚಿವ (ಆಡಳಿತ) ಎ.ಎಲ್. ಮಂಜುನಾಥ್, ಹಂಪಿ ಕನ್ನಡ ವಿವಿ ನಿರ್ದೇಶಕ ಪ್ರೊ. ಬಿ.ಎಂ. ಪುಟ್ಟಯ್ಯ, ಹಾಸ್ಯ ಕಲಾವಿದ ಆರಾಧ್ಯ, ಗೋಣಿಬೀಡು, ಸಹ್ಯಾದ್ರಿ ವಿವಿಧ ಕಾಲೇಜುಗಳ ಪ್ರಾಂಶುಪಾಲ ಡಾ. ಸೈಯದ್ ಸನಾವುಲ್ಲಾ, ಡಾ. ಎನ್. ರಾಜೇಶ್ವರಿ, ಡಾ. ಅವಿನಾಶ್ ಟಿ. ಮುಂತಾದವರು ಉಪಸ್ಥಿತರಿರುವರು.

ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಆಗ್ರಹ

ಶಿವಮೊಗ್ಗ: ಶಿವಮೊಗ್ಗದಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಬೇಕೆಂದು ಆಗ್ರಹಿಸಿ ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ವತಿಯಿಂದ ಇಂದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ನಗರವನ್ನು ಸ್ಮಾರ್ಟ್‌ಸಿಟಿ ಎಂದು ಘೋಷಿಸಲಾಗಿದೆ. ಆದರೆ, ನಗರದ ಯಾವುದೇ ಸ್ಥಳದಲ್ಲಿ ಸರಕು ಸಾಗಾಣಿಕೆ ವಾಹನಗಳ ನಿಲುಗಡೆಗೆ ಜಾಗವೇ ಇಲ್ಲದಂತಾಗಿದೆ. ಮತ್ತು ಹಲವು ಕಡೆ ಸಾಗಣಿಕೆ ವಾಹನಗಳ ನಿಲುಗಡೆಯನ್ನೇ ನಿಷೇಧಿಸಲಾಗಿದೆ. ಸರಕು ಸಾಗಾಣಿಕೆ ವಾಹನಗಳ ನಿಲುಗಡೆಗೆ ಅನುಕೂಲವಾಗುವಂತೆ ನಗರದಲ್ಲಿ ಟ್ರಕ್ ಟರ್ಮಿನಲ್ ಅನ್ನು ಕೂಡಲೇ ನಿರ್ಮಿಸಿಕೊಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಈಗಾಗಲೇ ಲಾರಿ ಮಾಲೀಕರ ಸಂಕಷ್ಟ ಹೆಚ್ಚಿದೆ. ಡೀಸೆಲ್ ಬೆಲೆ ಹೆಚ್ಚಿಸಲಾಗಿದೆ. ರಸ್ತೆ ತೆರಿಗೆಯೂ ಹೆಚ್ಚಿದೆ. ಈ ಎಲ್ಲಾ ಹೆಚ್ಚುವರಿಗಳನ್ನು ಬಾಡಿಗೆ ರೂಪದಲ್ಲಿ ವಾಪಸ್ ಪಡೆಯಲು ಸಾಧ್ಯವಾಗುತ್ತಿಲ್ಲ. ಸಾರಿಗೆ ಉದ್ಯಮ ಉಳಿಯಲು ಸರಕಾರ ಸಹಕರಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ವಿ+
ಸೋಮವಾರ

{ದಿನೇಶ ಗುಂಡೂರಾವ್ } ಆರೋಗ್ಯ ಸಚಿವ

ಭ್ರೂಣ ಹತ್ಯೆ ತಡೆಗೆ ಇಲಾಖೆಯಿಂದ ರಾಜ್ಯಾದ್ಯಂತ ಮಂಡ್ಯ, ಬೆಂಗಳೂರು ಮತ್ತಿತರರ ಕಡೆಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಇಂತಹ ಸಾಮಾಜಿಕ ಪೀಡುಗಾಗಿರುವ ಭ್ರೂಣ ಹತ್ಯೆ ಪ್ರಕರಣಗಳ ತಡೆಗೆ ಜಾಗೃತಿ ಮೂಡಿಸಲಾಗುತ್ತಿದೆ. ಜತೆಗೆ ವ್ಯವಸ್ಥೆ ಬದಲಾವಣೆಗೆ ಎಲ್ಲರೂ ಕೈ ಜೋಡಿಸಬೇಕು.

ಬಿಜೆಪಿ ನಾಯಕರಿಂದ ಹಗರಣ ಮುಚ್ಚಿಹಾಕಲು ಯತ್ನ: ಆಯನೂರು ಆರೋಪ

ಡಿಸಿಸಿ ಬ್ಯಾಂಕ್ ನೇಮಕದಲ್ಲಿ ಭ್ರಷ್ಟಾಚಾರ

ಶಿವಮೊಗ್ಗ: ಬಿಜೆಪಿ ಆಡಳಿತಾವಧಿಯಲ್ಲಿ ಡಿಸಿಸಿ ಬ್ಯಾಂಕ್‌ನ ಹುದ್ದೆಗಳ ನೇಮಕಾತಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದು, ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು ಎಂದು ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಆಗ್ರಹಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ನೇತೃತ್ವದಲ್ಲಿ ಡಿಸಿಸಿ ಬ್ಯಾಂಕ್ ನಲ್ಲಿ ಸುಮಾರು 98 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ನೇಮಕಾತಿಯಲ್ಲಿ ಕೋಟ್ಯಾಂತರ ರೂ. ಭ್ರಷ್ಟಾಚಾರ ನಡೆದಿದೆ. ಒಂದೊಂದು ಹುದ್ದೆಗೂ 45–50 ಲಕ್ಷ ರೂ. ಪಡೆಯಲಾಗಿದೆ. ನಿಯಮಗಳನ್ನು ಉಲ್ಲಂಘಿಸಿ ನೇಮಕ ಮಾಡಿಕೊಳ್ಳಲಾಗಿದೆ. ಅರ್ಹತೆ ಇಲ್ಲದವರಿಗೂ ಕೂಡ ಹುದ್ದೆ ನೀಡಲಾಗಿದೆ. ಕೆಲವು ನಿರ್ದೇಶಕರನ್ನು ಹೊರತುಪಡಿಸಿದರೆ ಆಡಳಿತ ಮಂಡಳಿ ಈ ಭ್ರಷ್ಟಾಚಾರದಲ್ಲಿ ಭಾಗಿಯಾಗಿದೆ ಎಂದು ಆರೋಪಿಸಿದರು.

ಪರೀಕ್ಷಾ ಪದ್ಧತಿಯೇ ಸರಿ ಇರಲಿಲ್ಲ. ಲಿಖಿತ ಪರೀಕ್ಷೆಯನ್ನು ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಯಾವುದಾದರೂ ಶಿಕ್ಷಣ ಸಂಸ್ಥೆಗೆ ನೀಡಬೇಕಿತ್ತು. ಯಾರ ಒಪ್ಪಿಗೆಯೂ ಇಲ್ಲದೇ ಅಧ್ಯಕ್ಷರು ಅಧಿಕಾರಿಗಳೊಂದಿಗೆ ಸೇರಿಕೊಂಡು ಅಕ್ಕಮಹಾದೇವಿ ವಿವಿಗೆ ನೀಡಲಾಗಿತ್ತು.

ಡಿಸಿಸಿ ಬ್ಯಾಂಕ್‌ನ ಹುದ್ದೆಗಳ ನೇಮಕಾತಿಯಲ್ಲಿ ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್ ಆಗ್ರಹಿಸಿದರು.

ಅವರು ಒಪ್ಪಿಗೆ ಕೊಡುವ ಮುನ್ನವೇ ಆ ವಿವಿಗೆ 40 ಲಕ್ಷ ರೂ. ಪಾವತಿಸಲಾಗಿದೆ ಎಂದು ದೂರಿದರು.

ಇಡೀ ನೇಮಕ ಪ್ರಕ್ರಿಯೆಯನ್ನೇ ಉಲ್ಲಂಘಿಸಲಾಗಿದೆ. ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಪ್ರಶ್ನೆ ಪತ್ರಿಕೆಗಳನ್ನು ಕೂಡ ವಾಪಸ್ ಪಡೆಯಲಾಗಿದೆ. ಪರೀಕ್ಷೆಯಲ್ಲಿ ಪಡೆದಿರುವ ಮೆರಿಟ್ ಅಂಕಗಳನ್ನು ಆಡಳಿತ ಮಂಡಳಿಗೆ ಮಂಡಿಸಿರುವುದಿಲ್ಲ. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನಕ್ಕೆ ಮಾಹಿತಿಯನ್ನೂ ನೀಡಿಲ್ಲ. ಸಂದರ್ಶನದ ಕರೆ ಪತ್ರ ನೀಡದೇ ದೂರವಾಣಿ ಮೂಲಕ ಕರೆಸಿಕೊಂಡು ಸಂದರ್ಶನ ಮಾಡಲಾಗಿದೆ. ಆದೇಶವನ್ನೂ ಕೂಡ ಅಂಚೆ ಮೂಲಕ ಮಾಡದೇ ಖುದ್ದಾಗಿ ಕರೆಸಿಕೊಂಡು ಮಾಡಲಾಗಿದೆ. ಇವೆಲ್ಲವೂ ನಿಯಮಕ್ಕೆ ವಿರುದ್ಧವಾಗಿವೆ ಎಂದರು.

ನೇಮಕಗೊಂಡ 98 ಉದ್ಯೋಗಿಗಳಿಗೆ ಇನ್ನೂ ಪ್ರೊಬೇಷನರಿ ಇರುವಾಗಲೇ ಅವರಿಗೆ ತಮ್ಮದೇ ಬ್ಯಾಂಕ್‌ನಿಂದ ಸಾಲ ಮಂಜೂರು ಮಾಡಲಾಗಿದೆ. ವಿಚಿತ್ರ ಎಂದರೆ ಈ ಸಾಲ ಏಕ ಕಾಲದಲ್ಲಿ ಬಿಡುಗಡೆಯಾಗಿ ಏಕ ಕಾಲದಲ್ಲೇ ಡ್ರಾ ಕೂಡ ಆಗಿದೆ. ಈ ಹಣ ಪೂರ್ವ ನಿಗದಿಯಂತೆ ಲಂಚ ಕೊಡಲು ಸಾಲ ನೀಡಲಾಗಿದೆ. ಬ್ಯಾಂಕಿನ ಇತಿಹಾಸದಲ್ಲಿ ಲಂಚಕ್ಕಾಗಿ ಸಾಲ ಮಂಜೂರು ಮಾಡಿದ್ದು ಇದೇ ಮೊದಲು. ತನಿಖೆ ಮಾಡಿದರೆ ಇದೆಲ್ಲ ಗೊತ್ತಾಗುತ್ತದೆ. ಕೆಲವರನ್ನು ಹೊರತುಪಡಿಸಿ ಅಧ್ಯಕ್ಷರಿಂದ ಹಿಡಿದು ನಿರ್ದೇಶಕರವರೆಗೂ ಈ ಲಂಚದ ಹಣ ತಲುಪಿರಬಹುದು ಎಂದು ಆರೋಪಿಸಿದರು.

ಇದರ ಜತೆಗೆ ಜುಲೈ 1, 2021 ರಿಂದ ಮಾರ್ಚ್ 30, 2022ರವರೆಗಿನ ತುಟ್ಟಿಭತ್ಯೆ ಬಾಕಿ ಮೊತ್ತ ಸುಮಾರು 1.06 ಕೋಟಿ ರೂ.ಗಳನ್ನು ಕೂಡ ಮೊದಲು ನೌಕರರ ಉಳಿತಾಯ ಖಾತೆಗೆ ಜಮಾ ಮಾಡಿ ಅದೇ ದಿನ ಉಳಿತಾಯ ಖಾತೆಯಿಂದ ಹಣ ವಾಪಸ್ ಪಡೆದು ಆಡಳಿತ ಮಂಡಳಿಯ ಕೆಲ ನಿರ್ದೇಶಕರಿಗೆ ಮತ್ತು ಅಧ್ಯಕ್ಷರಿಗೆ ಹಂಚಲಾಗಿದೆ. ಹಣದ ವಿಲೇವಾರಿ ಕೂಡ ಒಂದೇ ದಿನ ನಡೆದಿರುವುದು ಅನುಮಾನಕ್ಕೆ ಆಸ್ಪದವಾಗಿದೆ ಎಂದರು.

> ನೇಮಕಾತಿಗೆ ಸಂಬಂಧಿಸಿದಂತೆ ಆಗಿರುವ ಲೋಪಗಳ ಬಗ್ಗೆ ಸರಕಾರದಿಂದ ಸಹಕಾರ ಉಪನಿಬಂಧಕರಿಗೆ ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಈಗ ವಿಚಾರಣಾಧಿಕಾರಿ ವರದಿ ನೀಡಿದ್ದರೂ ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ. ಮತ್ತು ನ್ಯಾಯಾಲಯದಲ್ಲಿ ಹುದ್ದೆ ವಂಚಿತರು ಕೇಸನ್ನೂ ಕೂಡ ದಾಖಲು ಮಾಡಿದ್ದಾರೆ. ನಾಳೆ ಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿಯ ಚುನಾವಣೆ ನಡೆಯಲಿದೆ. ಇದಕ್ಕಾಗಿ ಭಾರಿ ಪೈಪೋಟಿ ಕೂಡ ಇದೆ.
>
> – ಆಯನೂರು ಮಂಜುನಾಥ್, ಕೆಪಿಸಿಸಿ ವಕ್ತಾರ

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಆರ್. ಪ್ರಸನ್ನಕುಮಾರ್, ಕಲಗೋಡು ರತ್ನಾಕರ್, ಎಸ್.ಟಿ. ಹಾಲಪ್ಪ, ಸಿ.ಎಸ್. ಚಂದ್ರಭೂಪಾಲ್, ಯು. ಶಿವಾನಂದ್, ಶಿ.ಜು. ಪಾಶಾ, ಜಿ.ಡಿ. ಮಂಜುನಾಥ್, ಉದ್ಯೋಗ ವಂಚಿತ ಮಂಜುನಾಥ್ ಡಿ. ಅರಗವಳ್ಳಿ ಇದ್ದರು.

ತುರ್ತು ಪರಿಸ್ಥಿತಿ ವೇಳೆ ದೇಶದ ರಕ್ಷಣೆ: ಪ್ರಭಾಕರ್ ಭಟ್

ಶಿವಮೊಗ್ಗ: ತುರ್ತು ಪರಿಸ್ಥಿತಿ ವೇಳೆ ರಾಷ್ಟ್ರೀಯ ಸ್ವಯಂಸೇವಕ ಸಂಘ ದೇಶವನ್ನು ರಕ್ಷಣೆ ಮಾಡಿತು ಎಂದು ಹಲವು ಸಾಹಿತಿಗಳೆ ಹೇಳಿದ್ದಾರೆ. ಅದು ಸತ್ಯ ಕೂಡ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ನಾಯಕ ಡಾ. ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿದರು.

ನಗರದ ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ವತಿಯಿಂದ ಬಂಟರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ತುರ್ತು ಪರಿಸ್ಥಿತಿ ಸಂವಿಧಾನದ ಆಶಯಕ್ಕೆ ಅಪಚಾರ ಎಂಬ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದ ಪ್ರಧಾನಿಯಾಗಿ ನೆಹರು ಆಯ್ಕೆ ತಪ್ಪು ನಿರ್ಧಾರ ಆಗಿತ್ತು. ಅವರಿಗೆ ಭಾರತದ ಧರ್ಮ, ಸಂಸ್ಕೃತಿ ಗೊತ್ತಿರಲಿಲ್ಲ. ಚೀನಿ ಭಾಯಿ ಅಂತ ಚೀನಾಕ್ಕೆ 45 ಸಾವಿರ ಚ.ಕಿ. ಹಾಗೂ ಪಾಕ್‌ಗೆ ಆಕ್ರಮಿತ ಕಾಶ್ಮೀರ ಪ್ರದೇಶ ಬಿಟ್ಟುಕೊಟ್ಟಿದ್ದೇ ಅವರ ಸಾಧನೆ ಎಂದರು.

ನೆಹರು ಕುಟುಂಬದ ಗಾಂಧಿ ಶಬ್ದ ಬಳಕೆ ವಿಚಿತ್ರ:

ಇಂದಿರಾ ಗಾಂಧಿ ಮದುವೆ ಆಗಿದ್ದು ಫಿರೋಜ್ ಖಾನ್ ಅವರನ್ನು. ಅವರು ಗಾಂಧಿ ಕುಟುಂಬಕ್ಕೆ ಸೇರಿದವರೂ ಅಲ್ಲ, ವಂಶಸ್ಥರೂ ಅಲ್ಲ, ಮುಗಜನ ಗಾಂಧಿ ಕುಟುಂಬಕ್ಕೆ ಸೇರಿದವರು ಎಂದು ನಂಬಿದ್ದರು.

ಕೇವಲ ಒಂದು ರೈಲು ಅಪಘಾತಕ್ಕೆ ಆಗಿನ ರೈಲ್ವೆ ಸಚಿವರಾಗಿದ್ದ ಲಾಲಬಹದ್ದೂರ್ ಶಾಸ್ತ್ರಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟರು. ಆದರೆ ಹೈಕೋರ್ಟ್‌ನಲ್ಲಿ ಇಂದಿರಾ ಗಾಂಧಿ ವಿರುದ್ಧ ತೀರ್ಪು ಬಂದಿತ್ತು. ರಾಜೀನಾಮೆ ಬದಲು ಅಧಿಕಾರ ಉಳಿಸಿಕೊಳ್ಳಲು ಮುಂದಾದರು. ಆಗಿನ ಕಾನೂನು ಮಂತ್ರಿ ಎಸ್.ಎಸ್. ರೈ ಆಂತರಿಕ ತುರ್ತು ಪರಿಸ್ಥಿತಿ ಹೇರಲು ಸಲಹೆ ನೀಡಿದರು. ಆಗಿನ ರಬ್ಬರ್‌ಸ್ಟಾಂಪ್ ರಾಷ್ಟ್ರಪತಿ ಅದನ್ನು ಜಾಮಾಡಿದರು. ಇಡೀ ದೇಶದಲ್ಲಿ 567 ಜನರನ್ನು ಮೂರ್ನಾಲ್ಕು ಗಂಟೆಯಲ್ಲಿ ಬಂಧಿಸಿದರು. ಇಂದಿರಾ ಗಾಂಧಿ ವಿರೋಧಿ ನಾಯಕರನ್ನು ಬಂಧಿಸಲಾಯಿತು ಎಂದರು.

ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ವತಿಯಿಂದ ಬಂಟರ ಭವನದಲ್ಲಿ ಆಯೋಜಿಸಿದ್ದ ತುರ್ತು ಪರಿಸ್ಥಿತಿ ಸಂವಿಧಾನದ ಆಶಯಕ್ಕೆ ಅಪಚಾರ ಎಂಬ ಕಾರ್ಯಕ್ರಮದಲ್ಲಿ ಡಾ. ಕಲ್ಲಡ್ಕ ಪ್ರಭಾಕರ್ ಭಟ್ ಮಾತನಾಡಿದರು.

ವೈಯಕ್ತಿಕ ಸ್ವಾತಂತ್ರ್ಯ ಹರಣ:

ಇಂದಿರಾಗಾಂಧಿ ವಿರುದ್ಧ ಮಾತನಾಡುವ ತಾಕತ್ತು ಯಾರಿಗೂ ಇರಲಿಲ್ಲ. ಪತ್ರಿಕೆ ಮುದ್ರಣ ಸ್ಥಗಿತ ಆಗಿದ್ದವು. ಭಾಷಣ ಮಾಡುವ ಹಾಗಿರಲಿಲ್ಲ. ವೈಯಕ್ತಿಕ ಸ್ವಾತಂತ್ರ್ಯ ಸಂಪೂರ್ಣ ಹರಣ ಮಾಡಲಾಗಿತ್ತು ಎಂದರು.

ಪ್ರಜಾಪ್ರಭುತ್ವ ಐಸಿಯುನಲ್ಲಿತ್ತು:

> ಸರ್ವಾಧಿಕಾರಿ ಆದವರಿಗೆ ಕಿವಿ ಕಣ್ಣು ಇರುವುದಿಲ್ಲ. ಇಂದಿರಾ ಎಂದರೆ ಇಂಡಿಯಾ ಎಂಬ ಭಾವನೆ ಅವರಲ್ಲಿ ಮೂಡಿತ್ತು. ಕೊನೆಗೆ ಇದೇ ಹುಂಭತನದಲ್ಲಿ ಚುನಾವಣೆ ಘೋಷಣೆ ಮಾಡಿದರು. ಆಗ ಸಂಘದ ಮೂರನೇ ಸರಸಂಘ ಚಾಲಕರು ಪಕ್ಷ ರಹಿತವಾಗಿ ಚುನಾವಣೆ ಸ್ಪರ್ಧೆ ಮಾಡಲು ಹೇಳಿದ್ದರು. ಫಲಿತಾಂಶ ಬಂದಾಗ ಇಂದಿರಾ ಗಾಂಧಿ ಸೋತು ಹೋಗಿದ್ದರು. ಹಲವಾರು ರಾಜ್ಯದಲ್ಲಿ ಇಂದಿರಾ ಗಾಂಧಿ ಪಕ್ಷ ಶೂನ್ಯ ಸಾಧನೆ ಮಾಡಿತು. ಇದು ಪ್ರಜಾಪ್ರಭುತ್ವಕ್ಕೆ ಸಿಕ್ಕ ಯಶಸ್ಸು. ಇದು ಎರಡನೇ ಸ್ವಾತಂತ್ರ್ಯ ಹೋರಾಟ.
>
> – ಡಾ. ಕಲ್ಲಡ್ಕ ಪ್ರಭಾಕರ್ ಭಟ್, ಆರ್‌ಎಸ್‌ಎಸ್ ನಾಯಕ

ಡಾ. ಶ್ರೀನಿವಾಸ ರೆಡ್ಡಿ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕು ಆಧಾರ ಸ್ಥಂಭಗಳನ್ನು ಆಗಿನ ಪ್ರಧಾನಿ ಇಂದಿರಾ ಗಾಂಧಿ ಮೊಟಕು ಮಾಡಿದರು. ಸುಮಾರು 21 ತಿಂಗಳ ಕಾಲ ಪ್ರಜಾಪ್ರಭುತ್ವವನ್ನು ಐಸಿಯುನಲ್ಲಿ ಇರಿಸಲಾಗಿತ್ತು. ಇಂದಿರಾ ಗಾಂಧಿ ಅಧಿಕಾರ ದಾಹಕ್ಕೆ ಸರ್ವಾಧಿಕಾರಿ ಆಗಿದ್ದರು ಎಂದರು.

ಪ್ರೊ. ರಾಚಪ್ಪ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರದ ಮಾಜಿ ಸಚಿವ ವೈ.ಎ. ನಾರಾಯಣ ಸ್ವಾಮಿ, ಗದಗ್ ಗ್ರಾಮೀಣ ಅಭಿವೃದ್ಧಿ ವಿವಿ ನಿವೃತ್ತ ಕುಲಪತಿ ಪ್ರೊ. ವಿಷ್ಣುಕಾಂತ್, ಬಿಜೆಪಿ ಎಸ್ಟಿ ಮೋರ್ಚಾ ಅಧ್ಯಕ್ಷ ರಾಮು ನಾಯ್ಕ್ ಉಪಸ್ಥಿತರಿದ್ದರು.

ಸಂವಿಧಾನ ಪುಸ್ತಕ ಹಿಡಿಯಲು ಕೈ ನಾಯಕರಿಗೆ ಹಕ್ಕಿಲ್ಲ

ಶಿವಮೊಗ್ಗ: ಸಂವಿಧಾನ ಪುಸ್ತಕ ಹಿಡಿಯಲು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನವರಿಗೆ ನೈತಿಕ ಹಕ್ಕಿಲ್ಲ. ರಾಹುಲ್ ಅಜ್ಜಿ ಇಂದಿರಾ ಗಾಂಧಿ ಅತಿ ಹೆಚ್ಚು ಬಾರಿ ಸಂವಿಧಾನವನ್ನು ಸ್ವಾರ್ಥಕ್ಕಾಗಿ ತಿದ್ದುಪಡಿ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಂಚಾಲಕ ಎಸ್. ದತ್ತಾತ್ರಿ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಹುಲ್ ಗಾಂಧಿ ಸಂವಿಧಾನ ಪುಸ್ತಕ ಹಿಡಿದು ಪ್ರಮಾಣವಚನ ಸ್ವೀಕರಿಸಿದ್ದಾರೆ. ಪ್ರಧಾನಿ ಮೋದಿಯವರು ಪ್ರಮಾಣ ವಚನ ಸ್ವೀಕಾರ ಮಾಡುವಾಗ ಪದೇ ಪದೇ ಸಂವಿಧಾನ ಪುಸ್ತಕ ಎತ್ತಿ ತೋರಿಸುವ ಮೂಲಕ ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ. ತಮ್ಮಿಂದಲೇ ಸಂವಿಧಾನ ಉಳಿಯುತ್ತಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದರು.

ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ ರಾಹುಲ್ ಅಜ್ಜಿ ಇಂದಿರಾಗಾಂಧಿಯವರು 1975ರ ಜೂ.25 ರಂದು ಮಧ್ಯ ರಾತ್ರಿ ತುರ್ತು ಪರಿಸ್ಥಿತಿ ಹೇರಿದ್ದರು. ನ್ಯಾಯಾಂಗದ ಕತ್ತು ಕೊಯ್ಯುವ ಕೆಲಸ ಮಾಡಲಾಗಿತ್ತು.

ಹೆಚ್ಚು ಬಾರಿ ಸಂವಿಧಾನವನ್ನು ತಿದ್ದುಪಡಿ ಮಾಡಿರುವುದಾಗಿ ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಂಚಾಲಕ ಎಸ್. ದತ್ತಾತ್ರಿ ಆಕ್ರೋಶ ವ್ಯಕ್ತಪಡಿಸಿದರು.

ಮಾಧ್ಯಮಗಳ ಮೇಲೆ ನಿರ್ಬಂಧ ವಿಧಿಸಿ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಮಾಡಿದ್ದರು. ಇಂತಹ ಕಾನೂನು ಜಾರಿಗೆ ತರಲು ಸಂವಿಧಾನಕ್ಕೆ ತಿದ್ದುಪಡಿ ತರಲಾಗಿತ್ತು ಎಂದರು.

ಅಧಿಕಾರ ತಮ್ಮ ಬಳಿಯೇ ಉಳಿಸಿಕೊಳ್ಳಲು ತಮಗೆ ಬೇಕಾದಂತೆ ಸಂವಿಧಾನ ತಿದ್ದುಪಡಿ ತಂದಿದ್ದರು. ಅಂಬೇಡ್ಕರ್ ಸಂವಿಧಾನದ ಕತ್ತು ಹಿಸುಕುವ ಕೆಲಸ ಮಾಡಿದ್ದರು. ಅಜ್ಜಿ ಸಂವಿಧಾನ ತಿದ್ದುಪಡಿ ಮಾಡಿರುವುದಕ್ಕೆ ರಾಹುಲ್ ಈಗ ಕ್ಷಮೆ ಕೇಳಬೇಕು ಎಂದರು.

ಡೆಂಘೀ ಜ್ವರದ ಬಗ್ಗೆ ನಿರ್ಲಕ್ಷ್ಯ ಬೇಡ ನಿಯಂತ್ರಿಸೋಣ: ಡಾ.ನಟರಾಜ್

ಶಿವಮೊಗ್ಗ: ಡೆಂಘೀ ಜ್ವರವು ಮಾರಕ ಖಾಯಿಲೆಯಾಗಿದ್ದು ಇದರಿಂದ ಜೀವಹಾನಿ ಸಹ ಸಂಭವಿಸಬಹುದಾದ್ದರಿಂದ ಯಾವುದೇ ಕಾರಣಕ್ಕೂ ಇದನ್ನು ನಿರ್ಲಕ್ಷ್ಯಿಸಿರಬಾರದು. ಕೂಡಲೇ ಚಿಕಿತ್ಸೆ ಪಡೆಯಬೇಕು ಹಾಗೂ ಎಲ್ಲರೂ ಸೇರಿ ನಿಯಂತ್ರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ ಡಾ. ನಟರಾಜ್ ಕೆ.ಎಸ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಧಿಕಾರಿಗಳ ಕಚೇರಿ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಇವರ ಸಹಯೋಗದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ಆಯೋಜಿಸಲಾಗಿದ್ದ ಡೆಂಘೀ ಕುರಿತಾದ ತರಬೇತಿ ಕಾರ್ಯಗಾರ ಉದ್ಘಾಟಿಸಿ ಮಾತನಾಡಿ, ಯಾವುದೇ ಖಾಯಿಲೆ ಬಂದರೆ ಅದು ಆರೋಗ್ಯ ಇಲಾಖೆಗೆ ಮಾತ್ರ ಸಂಬಂಧ ಪಟ್ಟಿರುವುದು ಎಂಬ ಮನೋಭಾವ ಬೆಳೆದಿದೆ ಎಂದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಗುಡುದಪ್ಪ ಕಸಬಿ ಮಾತನಾಡಿ, ಸೊಳ್ಳೆ ಉತ್ಪಾದನೆ ನಿಯಂತ್ರಣ ಮಾಡಿದರೆ ಮಾತ್ರ ಡೆಂಘೀ ಕಡಿಮೆ ಮಾಡಬಹುದು. ಸೊಳ್ಳೆಗಳು ಕೇವಲ ಚರಂಡಿಯಿಂದ ಮಾತ್ರ ಬರುವುದಿಲ್ಲ ಮನೆಯ ಒಳಗಡೆ ನಿಂತ ಸ್ವಚ್ಛ ನೀರಿನಲ್ಲಿಯೂ ಉತ್ಪಾದನೆ ಆಗುತ್ತದೆ. ಪಾಟ್, ನೀರಿನಲ್ಲಿ ಬೆಳೆಯುವ ಗಿಡಗಳಲ್ಲಿ ಕೂಡ ಸೊಳ್ಳೆ ಉತ್ಪತ್ತಿಯಾಗುತ್ತವೆ. ಬ್ಯಾಟರಿ ಬೆಳಕಿನ ಮೂಲಕ ಲಾರ್ವಾಗಳ ಓಡಾಟವನ್ನು ನೋಡಬಹುದು. ಮಕ್ಕಳು ಶಾಲೆಯಲ್ಲಿ ಹೆಚ್ಚು ಕಾಲ ಕಳೆಯುವ ಕಾರಣ ಶಾಲೆಯ ಸುತ್ತ ಮುತ್ತ ಮತ್ತು ನೀರಿನ ಮೂಲಗಳನ್ನು ಸ್ವಚ್ಛ ಮಾಡಬೇಕು ಮತ್ತು ಮಕ್ಕಳಲ್ಲಿ ಅರಿವು ಮೂಡಿಸಿ ಸುರಕ್ಷತಾ ಕ್ರಮವಹಿಸಬೇಕು ಎಂದು ತಿಳಿಸಿದರು.

ತಾಲೂಕು ಆರೋಗ್ಯಧಿಕಾರಿ ಡಾ. ಚಂದ್ರಶೇಖರ್ ಜಿ.ಬಿ ಮಾತನಾಡಿ, ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿದ್ದು ಜೂನ್ ನಂತರದಲ್ಲಿ ಇದು ಹೆಚ್ಚಾಗುತ್ತಾ ಹೋಗುತ್ತದೆ. ಇಲಾಖೆಗಳ ಸಹಕಾರದಿಂದ ಇದನ್ನು ತಡೆಯಬಹುದು. ಆ ನಿಟ್ಟಿನಲ್ಲಿ ಎಲ್ಲರೂ ಕ್ರಮವಹಿಸಿ ಕೆಲಸ ಮಾಡಬೇಕು. ಶಾಲಾ ಮಕ್ಕಳಿಗೆ, ಸಾರ್ವಜನಿಕರಿಗೆ ಇದರ ಅರಿವು ತುಂಬಾ ಮುಖ್ಯವಾಗಿತ್ತದೆ. ಡೆಂಘೀ, ಮಲೇರಿಯಾ, ಚಿಕುನ್‌ಗುನ್ಯ ಖಾಯಿಲೆಗಳು ಸೊಳ್ಳೆಯಿಂದಲೇ ಬರುವುದರಿಂದ ಸೊಳ್ಳೆ ನಿಯಂತ್ರಣ ಮಾಡಲೇಬೇಕಿದೆ. ಶಿಕ್ಷಕರು ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಕ್ಷೇತ್ರ ಸಮನ್ವಯ ಅಧಿಕಾರಿ ಹಸೇನ್ ಸಾಬ್ ಹೆಚ್.ಕೆ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ಕಿರಣ್ ಎಸ್. ಕೆ, ಪ್ರೌಢ ಶಾಲಾ ಶಿಕ್ಷಕರು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಇದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ಆಯೋಜಿಸಿದ್ದ ಡೆಂಘೀ ಕುರಿತಾದ ತರಬೇತಿ ಕಾರ್ಯಗಾರವನ್ನು ಡಾ. ನಟರಾಜ್ ಕೆ.ಎಸ್ ಉದ್ಘಾಟಿಸಿದರು.

> ಡೆಂಘೀ, ಮಲೇರಿಯಾ, ಚಿಕುನ್‌ಗುನ್ಯ ದಂತಹ ಸೋಂಕಿನ ವಿರುದ್ಧ ಎಲ್ಲರೂ ಸೇರಿ ಹೋರಾಟ ಮಾಡಿದಾಗ ಮಾತ್ರ ಉತ್ತಮ ಫಲಿತಾಂಶ ಸಾಧ್ಯವಾಗುತ್ತದೆ. ಡೆಂಘೀ ನಿಯಂತ್ರಣದಲ್ಲಿ ನಮ್ಮ ಮುಖ್ಯ ಉದ್ದೇಶ ಲಾರ್ವಾಗಳ ನಿರ್ಮೂಲನೆ ಮಾಡುವುದಾಗಿದೆ. ಇದರಲ್ಲಿ ಶಿಕ್ಷಕರ ಪಾತ ಬಹು ಮುಖ್ಯವಾಗಿದ್ದು, ಈ ಕುರಿತು ಮಕ್ಕಳಲ್ಲಿ ಅರಿವು ಮೂಡಿಸಬೇಕು. ಈ ವಿಚಾರದಲ್ಲಿ ಯಾವುದೇ ನಿರ್ಲಕ್ಷ್ಯ ತೋರದೆ ಎಲ್ಲರೂ ಒಗ್ಗೂಡಿ ಕೆಲಸ ಮಾಡೋಣ ಎಂದರು.
>
> –ಡಾ.ನಟರಾಜ್ ಕೆ.ಎಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ

ಅಪಘಾತ ತಡೆಗೆ ಕ್ರಮ: ಜನರಿಂದ ರಸ್ತೆ ತಡೆ

ಶಿವಮೊಗ್ಗ: ಅಪಘಾತ ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸೂಳೆಬೈಲು ನಿವಾಸಿಗಳು ಗುರುವಾರ ಊರಗಡೂರು ಬೈಪಾಸ್ ರಸ್ತೆಯಲ್ಲಿ ದಿಢೀರ್ ಪ್ರತಿಭಟನೆ ನಡೆಸಿದರು.

ಸೂಳೆಬೈಲ್ ಬೈಪಾಸ್ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಪ್ರತಿದಿನ ಸಾವಿರಾರು ವಾಹನಗಳು ಓಡಾಡುತ್ತವೆ. ರಸ್ತೆಯ ಆಸುಪಾಸಿನಲ್ಲಿ ಸಾವಿರಾರು ಮನೆಗಳಿವೆ. ಮತ್ತೂರು, ಕಡೆಕಲ್, ಹಾಲಲಕ್ಕವಳ್ಳಿ ಮುಂತಾದ ಗ್ರಾಮಗಳ ಜನ ಇದೇ ರಸ್ತೆಯಲ್ಲಿ ಸಂಚರಿಸುತ್ತಾರೆ. ಇಲ್ಲಿ ಅಪಘಾತಗಳು ಸರ್ವೇ ಸಾಮಾನ್ಯವಾಗಿವೆ ಎಂದು ದೂರಿದರು.

ಇಲ್ಲಿನ ಸದರಿ ಕ್ರಾಸ್ ಬಳಿ ಮದಾರಿಪಾಳ್ಯ ಸಂಪರ್ಕ ಕಲ್ಪಿಸುವ ರಸ್ತೆ ಇದ್ದು, ಬೈಪಾಸ್ ರಸ್ತೆ ರಾಷ್ಟ್ರೀಯ ಹೆದ್ದಾರಿಯಾದ ನಂತರ ಅಪಘಾತಗಳು ಹೆಚ್ಚಾಗಿ ಜೀವ ಹಾನಿ ಕೂಡ ಸಂಭವಿಸುತ್ತಿವೆ. ಆದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿ, ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಅಲ್ಲದೇ ಈ ರಸ್ತೆಯನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಲಾಗಿದೆ. ಈ ರಸ್ತೆಯಲ್ಲಿ ಹಂಪ್ಸ್ ಗಳನ್ನು ನಿರ್ಮಿಸಬೇಕು. ಅಪಘಾತ ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪ್ರಮುಖರಾದ ಅಬ್ದುಲ್ ರಹೀಂ, ಸನಾವುಲ್ಲಾ, ರುಹಿತ್, ಮುಜೀಬ್, ಸಾದಿಕ್, ಯಾಸಿನ್, ರಹಮತ್ ಮೊದಲಾದವರಿದ್ದರು.

ಊರಗಡೂರು ಬೈಪಾಸ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು.

ಕೆಂಪೇಗೌಡರ 515ನೇ ಜಯಂತಿ ಆಚರಣೆ

ಶಿವಮೊಗ್ಗ: ಕೆಂಪೇಗೌಡರು ನಮ್ಮ ರಾಜ್ಯಕ್ಕೆ ಧರ್ಮಪ್ರಭುಗಳು ಮತ್ತು ನಾಡಪ್ರಭುಗಳು, ದೀನ ದಲಿತರ ಬಂಧು ಎಂದು ಕೀರ್ತಿವಂತರಾಗಿ ಬೆಂಗಳೂರನ್ನು ಕಟ್ಟಿ ತಮ್ಮ ಆಡಳಿತದಿಂದ ರಾಷ್ಟ್ರವ್ಯಾಪಿ ಕೀರ್ತಿಗಳಿಸಿದ್ದರು ಎಂದು ತುಂಗಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ತಿಮ್ಮಯ್ಯ ನಾಯ್ಡು ಹೇಳಿದ್ದಾರೆ.

ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಗುರುವಾರ ಜಿಲ್ಲಾ ಒಕ್ಕಲಿಗರ ಸಂಘ ಮತ್ತು ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳು ಹಾಗೂ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ ಇವರ ಸಂಯುಕ್ತಾಶ್ರಯದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಇದು ನಾಗರಿಕ ಸಮಾಜದ ಕರ್ತವ್ಯ ಕೂಡ ಹೌದು. ದೇಶದ ಇತಿಹಾಸದಲ್ಲಿ ಸಾವಿರಾರು ರಾಜ ಮಹಾರಾಜರು ಬಂದು ಹೋಗಿದ್ದಾರೆ. ಆದರೆ, ಇತಿಹಾಸ ನಿರ್ಮಿಸಿ ಶಾಶ್ವತವಾಗಿ ಜನ ಮನದಲ್ಲಿ ಉಳಿದವರು ಬೆರಳೆಣಿಕೆಯಷ್ಟು ಮಾತ್ರ. ಅದರಲ್ಲಿ ಕೆಂಪೇಗೌಡರು ಒಬ್ಬರು. ತಮ್ಮ ನಡವಳಿಕೆ, ತತ್ವ ಸಿದ್ಧಾಂತ ಮತ್ತು ಆಡಳಿತ ವೈಖರಿಯಿಂದಾಗಿ ಮತ್ತು ತಮ್ಮ ಕಾರ್ಯಗಳಿಂದ ಉನ್ನತ ಸ್ಥಾನ ಪಡೆದಿದ್ದಾರೆ ಎಂದರು.

ನೂತನವಾಗಿ ಆಯ್ಕೆಯಾದ ಶಾಸಕರು, ನಿಗಮ- ಮಂಡಳಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಎಂಆರ್‌ಎಸ್ ವೃತ್ತದಿಂದ ಆದಿಚುಂಚನಗಿರಿ ಸಮುದಾಯ ಭವನದವರೆಗೆ ವಾಹನಗಳ ರ್‍ಯಾಲಿ ನಡೆಸಲಾಯಿತು.

1510ರಲ್ಲಿ ಯಲಹಂಕದಲ್ಲಿ ಕೆಂಪ ನಂಜೇಗೌಡರ ಮಗನಾಗಿ ಜನಿಸಿ 9 ವರ್ಷ ಕಾಲ ಲೌಖಿಕ ಶಿಕ್ಷಣ ಮತ್ತು ಯುದ್ಧ ಕಲೆಗಳನ್ನು ಕಲಿತು ಮಲ್ಲಯುದ್ಧದಲ್ಲಿ ದೊಡ್ಡ ಖ್ಯಾತಿ ಪಡೆದ ಅವರು 1531ರಿಂದ 1591ರವರೆಗೆ ಯಶಸ್ವಿ ಆಡಳಿತ ನಡೆಸಿದ್ದಾರೆ. 1608ರಲ್ಲಿ ಕೆಂಪಾಪುರದಲ್ಲಿ ನಿಧನರಾದರು ಎಂದರು.

ನಾಡು ಕಟ್ಟುವಲ್ಲಿ ಕೆಂಪೇಗೌಡರ ಕೊಡುಗೆ

ಶಿವಮೊಗ್ಗ: ಕೇವಲ ರಾಜಧಾನಿ ಬೆಂಗಳೂರು ಮಾತ್ರವಲ್ಲ ಇಡೀ ರಾಜ್ಯಕ್ಕೇ ಅಡಿಪಾಯ ಹಾಕಿದವರು ಕೆಂಪೇಗೌಡರು. ದೂರದೃಷ್ಟಿಯಿಂದ ನಾಡನ್ನು ಕಟ್ಟುವಲ್ಲಿ ಅವರ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ನಾಡಪ್ರಭು ಕೆಂಪೇಗೌಡರನ್ನು ಸ್ಮರಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಜೂ.27 ರಂದು ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರದ ಸಂಸ್ಥಾಪಕರು. ಅತ್ಯಂತ ಮುಂದಾಲೋಚನೆಯಿಂದ ನಗರವನ್ನು ನಿರ್ಮಿಸಿದರು. 16 ನೇ ಶತಮಾನದಲ್ಲೇ ಬೆಂಗಳೂರಿನಲ್ಲಿ ಅನೇಕ ಕೆರೆಗಳು, ಮಾರುಕಟ್ಟೆಗಳನ್ನು ನಿರ್ಮಿಸಿದ್ದರು. ಅನೇಕ ಸಾಮಾಜಿಕ ಪಿಡುಗುಗಳ ವಿರುದ್ಧ ಕೆಲಸ ಮಾಡಿದ್ದರು. ಬೆಂಗಳೂರು ನಗರ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸೇರಿದಂತೆ ಎಲ್ಲ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದು ರಾಜ್ಯದ ಬೆನ್ನೆಲುಬಾಗಿದೆ. ಕೆಂಪೇಗೌಡರು ನಾಡು ಕಟ್ಟುವಲ್ಲಿ ನಮಗೆಲ್ಲ ಸ್ಪೂರ್ತಿದಾಯಕರಾಗಿದ್ದಾರೆ ಎಂದು ಹೇಳಿದರು. ಸೂಡಾ ಅಧ್ಯಕ್ಷ ಹೆಚ್.ಎಸ್.ಸುಂದರೇಶ್ ಮಾತನಾಡಿ, ಮಹಾನ್ ವ್ಯಕ್ತಿಗಳ ಜಯಂತಿ ಕಾರ್ಯಕ್ರಮ ಕೇವಲ ಭಾಷಣಕ್ಕೆ ಸೀಮಿತ ಆಗಬಾರದು. ಎಲ್ಲರೂ ಅವರ ಜೀವನ ಚರಿತ್ರೆಯನ್ನು ಓದಿ ತಿಳಿದುಕೊಳ್ಳಬೇಕು ಎಂದರು.

ಬೈಪಾಸ್ ರಸ್ತೆಯ ಹೈ ಮಾಸ್ಕ್ ದೀಪಕ್ಕೆ ಚಾಲನೆ

ಸಾಗರ: ನಗರದೊಳಗೆ ಸಂಚಾರ ದಟ್ಟಣೆ ಕಡಿಮೆ ಮಾಡುವುದಕ್ಕೆ ಪೂರಕವಾಗಿ ಇಲ್ಲಿನ ಬೈಪಾಸ್ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಸೂಚನೆಯಂತೆ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರೈಸಲಾಗಿದೆ ಎಂದು ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು. ಅಭಿವೃದ್ಧಿಪಡಿಸಲಾದ ಸಾಗರದ ಬೈಪಾಸ್ ರಸ್ತೆಯಲ್ಲಿಯ ಹೈಮಾಸ್ಕ್ ಲೈಟ್‌ಗಳಿಗೆ ಚಾಲನೆ ನೀಡಿ ನಂತರ ಅವರು ಮಾತನಾಡಿದರು. ಹಿಂದಿನ ಸರಕಾರದಲ್ಲಿ ಕಾಮಗಾರಿಯ ಪ್ರಸ್ತಾಪ ಮಾಡಲಾಗಿತ್ತು ಆದರೆ ಈಗ ಅನುದಾನವನ್ನು ತಂದು ನಿಗದಿತ ಅವಧಿಯೊಳಗೆ ಇಲ್ಲಿಯ ಬೈಪಾಸ್ ರಸ್ತೆಯನ್ನು ಡಿವೆಡರ್ ಹಾಕುವ ಮೂಲಕ ಅಭಿವೃದ್ಧಿಪಡಿಸಲಾಗಿದೆ. ಈಗಾಗಲೇ 3 ಕೋಟಿ ಅನುದಾನ ತರಲಾಗಿದೆ. ತಾಂತ್ರಿಕ ಕಾರಣದಿಂದ 500 ಮೀಟರ್ ರಸ್ತೆ ಕಾಮಗಾರಿ ಮಾತ್ರ ಉಳಿದುಕೊಂಡಿದೆ ಉಳಿದಂತೆ ಸಕಾಲದಲ್ಲಿ ಕಾಮಗಾರಿ ಮುಗಿದಿದೆ ಎಂದ ಅವರು ಇದೇ ರೀತಿ ಕೆಳದಿ ಮತ್ತು ಹೊಸನಗರ ರಸ್ತೆಗಳ ಅಗಲೀಕರಣ ಕಾರ್ಯಕ್ಕೂ ಅನುದಾನ ತರಲಾಗಿದೆ ಎಂದರು. ಇನ್ನು ಪ್ರವಾಸಿ ಮಂದಿರದ ಮುಂದಿರುವ ಉದ್ಯಾನವನದ ಕಾಯಕಲ್ಪಕ್ಕೆ 80 ಲಕ್ಷ ಬಿಡುಗಡೆಯಾಗುತ್ತಿದೆ, ಹಿಂದೆ ನಮ್ಮ ಅವಧಿಯಲ್ಲಿ ಪಾರ್ಕ್ ಮಾಡಲಾಗಿತ್ತು ನಂತರ ಪಾಳು ಬಿದಿತ್ತು. ಈಗ ಮತ್ತೆ ನಾನೇ ಅದರ ಕಾಯಕಲ್ಪಕ್ಕೆ ಮುಂದಾಗಿದ್ದೇನೆ ಎಂದರು. ಈ ವೇಳೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಪಕ್ಷದ ಪ್ರಮುಖರು ಇದ್ದರು.

ಮಹಿಳೆಯರಿಗೆ ಒಲಿಗೆ ತರಬೇತಿ ಪ್ರಮಾಣಪತ್ರ

ಶಿಕಾರಿಪುರ: ಇಂದಿನ ಸಮಾಜದಲ್ಲಿ ಮಹಿಳೆಯರು ಹಾಗೂ ಪುರುಷರು ಸಮಾನರು. ಇವರ ನಡುವೆ ಭೇದ ಕಾಣುವುದು ಸರಿಯಲ್ಲ ಎಂದು ಹಿಂದೂ ಸೇವಾ ಪ್ರತಿಷ್ಠಾನದ ತಾಲೂಕು ಸಂಯೋಜಕ ವಿನೋದ್ ಕುಮಾರ್ ತಿಳಿಸಿದರು. ತಾಲೂಕಿನ ಬೇಗೂರು ಗ್ರಾಮದಲ್ಲಿ ಮಹಿಳಾ ಸ್ವಾವಲಂಬನೆಗಾಗಿ ನಡೆದ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣ ಪತ್ರವನ್ನು ವಿತರಿಸಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸುವ ಅತ್ಯಗತ್ಯತೆ ಹಿಂದಿಗಿಂತ ಇಂದು ಮುಖ್ಯವಾಗಿದೆ. ಮಹಿಳೆ ಅಡುಗೆ ಕೆಲಸಕ್ಕೆ ಸೀಮಿತವಾಗದೇ ಹಲವು ಬಗೆಯ ಕೌಶಲ್ಯಗಳನ್ನು ಬೆಳೆಸಿಕೊಂಡು ವಿವಿಧ ಆರ್ಥಿಕ ವೃತ್ತಿಗಳಲ್ಲಿ ತೊಡಗಿಸಿಕೊಳ್ಳಬೇಕು. ಸರಕಾರ ಹಾಗೂ ಧರ್ಮಸ್ಥಳ ಯೋಜನೆಯಿಂದ ಸಿಗುವ ಸಾಲ ಸೌಲಭ್ಯಗಳನ್ನು ಬಳಸಿಕೊಂಡು ಸಣ್ಣ ಪ್ರಮಾಣದ ಲಭ್ಯವಿರುವ ವಿವಿಧ ಉದ್ಯಮಗಳನ್ನು ಪ್ರಾರಂಭಿಸಿ ಆರ್ಥಿಕ ಪ್ರಗತಿ ಕಾಣಬಹುದಾಗಿದೆ. ಬ್ಯೂಟೀಷಿಯನ್, ಕುಸುರಿ, ಬಟ್ಟೆ ಹೊಲಿಗೆ,ಅಡಿಕೆ ತಟ್ಟೆ ತಯಾರಿಕೆ,ಊಟದ ತಟ್ಟೆ ತಯಾರಿಕೆ,ಗಾರ್ಮೆಂಟ್ಸ್, ಕೋಳಿ,ಕುರಿ ಸಾಕಾಣಿಕೆ, ತಿಂಡಿಗಳ ತಯಾರಿಕೆ ಹೀಗೆ ಹಲವು ಉದ್ಯಮಗಳನ್ನು ಆರಂಭಿಸಲು ಸರಕಾರ ಎಲ್ಲ ರೀತಿಯಲ್ಲಿ ಪ್ರೋತ್ಸಾಹ ನೀಡಲಿದೆ ಎಂದು ತಿಳಿಸಿದರು. ಇಲ್ಲಿನ ಮಾತೃ ಮಂಡಳಿ ಸದಸ್ಯೆ ಅಪರ್ಣ ಗುರುಮೂರ್ತಿ ಯವರು ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮಹಿಳೆಯರಿಗೆ ಮುದ್ರಾಸನಗಳ ಬಗ್ಗೆ ತಿಳಿಸಿ ಇಂಟರ್ನೆಟ್ ಯುಗದಲ್ಲಿ ನಮ್ಮ ಜೀವನಕ್ಕೆ ಒತ್ತಡ ಹಾಗೂ ಆತಂಕ ಜತೆಯಾಗಿ ಬಿಟ್ಟಿದೆ.

ರಾಜ್ಯಶಾಸ್ತ್ರ ಪಠ್ಯಕ್ರಮ ಕುರಿತು ಕಾರ್ಯಾಗಾರ

ಶಿವಮೊಗ್ಗ: ಪಠ್ಯ ಕ್ರಮ ರೂಪಿಸಲು ಕಾರ್ಯಾಗಾರಗಳು ಸಹಾಯಕವಾಗುವುದರ ಜತೆಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸುತ್ತವೆ ಎಂದು ಕುವೆಂಪು ವಿವಿ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗದ ಅಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ. ಉದ್ದಗಟ್ಟಿ ವೆಂಕಟೇಶ್ ಹೇಳಿದರು. ಗುರುವಾರ ಕುವೆಂಪು ವಿವಿ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿವಿ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘ, ಕಮಲಾ ನೆಹರೂ ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ 2024 –25ನೇ ಸಾಲಿನ ಬಿಎ ಪದವಿ ರಾಜ್ಯಶಾಸ್ತ್ರ ಪಠ್ಯಕ್ರಮ ಕುರಿತ ಒಂದು ದಿನದ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು.ರಾಜ್ಯಶಾಸ್ತ್ರವು ವಿಮರ್ಶಕ ಚಿಂತನೆ ಯನ್ನು ಬೆಳೆಸುತ್ತದೆ. ಅರಿವಿನ ಶಕ್ತಿ ಹೆಚ್ಚಿಸುತ್ತದೆ. ರಾಜಕೀಯ ಸವಾ ಲುಗಳನ್ನು ಎದುರಿಸುವುದು ಮತ್ತು ನ್ಯಾಯಯುತ ಸಮಾಜ ಬೆಳೆ ಸುವುದೇ ಇದರ ಮುಖ್ಯ ಉದ್ದೇಶವಾಗಿದೆ. ಕಾಲ ಕಾಲಕ್ಕೆ ತಕ್ಕಂತೆ ಪಠ್ಯಕ್ರಮದ ನೀತಿಗಳು ಕೂಡ ಬದಲಾಗುತ್ತಿರುತ್ತವೆ. ಏನೇ ಬದ ಲಾದರೂ ಕೂಡ ಅದು ವರ್ತಮಾನದ ಜತೆಗೆ ಬೆಸೆದುಕೊಂಡಿ ರಬೇಕು ಎಂದರು. ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಜಿ.ಎಸ್. ನಾರಾಯಣರಾವ್ ಮಾತನಾಡಿ, ಯಾವುದೇ ಪಠ್ಯಗಳು ಹೇರಿಕೆಯಾಗಬಾರದು. ಚರ್ಚೆಯಿಂದ ಹೊರ ಬಂದ ವಿಷಯಗಳು ಮಾತ್ರ ಸಮುದಾಯವನ್ನು ತಲುಪಲು ಸಾಧ್ಯ. ಎನ್‌ಇಪಿಯನ್ನು ಅವಸರದಿಂದ ತರಲಾಗಿತ್ತು. ಈಗ ಮತ್ತೆ ರಾಜ್ಯ ಪಠ್ಯಕ್ರಮಕ್ಕೆ ಬದಲಾಗಿದೆ.

ಸಮಾಚಾರ ಸಣ್ಣದಲ್ಲ

ಆತ್ಮಹತ್ಯೆಗೆ ರೈತನ ಯತ್ನ

ಮುಂಡರಗಿ: ಕಾಲುವೆ ನೀರು ಜಮೀನಿಗೆ ನುಗ್ಗಿ ಭತ್ತದ ಬೆಳೆ ಹಾಳಾದ ಹಿನ್ನೆಲೆಯಲ್ಲಿ ರೈತನೊಬ್ಬ ನೀರಾವರಿ ಇಲಾಖೆ ಕಚೇರಿಗೆ ತೆರಳಿ ಅಧಿಕಾರಿಗಳ ಎದುರೇ ಫ್ಯಾನಿಗೆ ನೇಣು ಹಾಕಿಕೊಳ್ಳಲು ಮುಂದಾದ ಘಟನೆ ಗುರುವಾರ ನಡೆದಿದೆ. ಮುಂಡರಗಿ ತಾಲೂಕಿನ ಹಮ್ಮಿಗಿ ಗ್ರಾಮದ ರೈತ ಶಿವರಾಜ್ ಹೊಳಿಯಾಚೆ ಆತ್ಮಹತ್ಯೆಗೆ ಯತ್ನಿಸಿದ್ದು, ಕಚೇರಿಯಲ್ಲಿದ್ದವರು ತಡೆದಿದ್ದಾರೆ. ಜಮೀನಿನಲ್ಲಿ ಹಾದುಹೋಗಿರುವ ಶಿಂಗಟಾಲೂರು ಏತ ನೀರಾವರಿ ಕಾಲುವೆಯ ನೀರು ಉಕ್ಕಿ ಹರಿದು ಜಮೀನಿಗೆ ನುಗ್ಗಿ ಬೆಳೆಗಳು ಹಾನಿಯಾಗಿದ್ದವು. ಇದರಿಂದ ಬೇಸತ್ತು ನೇರವಾಗಿ ಕಚೇರಿಗೆ ಬಂದು ಆತ್ಮಹತ್ಯೆಗೆ ಮುಂದಾಗಿದ್ದಾನೆ ಎಂದು ತಿಳಿದುಬಂದಿದೆ. ಹಲವು ವರ್ಷಗಳಿಂದ ಬೆಳೆಹಾನಿಗೆ ಪರಿಹಾರ ನೀಡುವಂತೆ ನಿರಂತರವಾಗಿ ಮನವಿ ಮಾಡಿದ್ದರೂ ಪರಿಹಾರ ನೀಡದೆ ಅಧಿಕಾರಿಗಳು ಸತಾಯಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಮಲೆನಾಡಿನಲ್ಲಿ ಮಳೆ ಅಬ್ಬರ

← ಮೊದಲಪುಟದಿಂದ

ಭಾರಿ ಗಾಳಿ ಮಳೆಗೆ ಉತ್ತರಕನ್ನಡ ಜಿಲ್ಲೆ ಯ ಕಾರವಾರದ ದೇವಭಾಗದಲ್ಲಿ ಕಡಲ ಕೊರೆತ ಜೋರಾಗಿದೆ. ಜಂಗಲ್ ಲಾಡ್ಜಸ್‌ಗೆ ಸೇರಿದ ದೇವಭಾಗ ಬೀಚ್ ರೆಸಾರ್ಟ್‌ನ 4 ಕಾಟೇಜ್‌ಗಳಿಗೆ ಹಾನಿಯಾಗಿದೆ. ದಡಕ್ಕೆ ಅಪ್ಪಳಿಸುತ್ತಿರುವ ಆಳೆತ್ತರದ ಅಲೆ ಗಳಿಂದಾಗಿ ಕಾಟೇಜ್‌ಗಳು ಸಮುದ್ರ ಪಾಲಾ ದ ಪರಿಣಾಮ 1 ಕೋಟಿಗೂ ಅಧಿಕ ಹಾನಿ ಯಾಗಿದೆ. ಉತ್ತರಕನ್ನಡ ಜಿಲ್ಲೆಯ ಹೊನ್ನಾ ವರ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 206ರ ಭಾಸ್ಕೇರಿ ಬಳಿ ಗುಡ್ಡ ಕುಸಿದಿತ್ತು. ಗುಡ್ಡ ಕುಸಿತದಿಂದ ಹೊನ್ನಾವರ ಬೆಂಗಳೂರು ನಡುವಿನ ಸಂಚಾರ ಅಸ್ತವ್ಯಸ್ಥವಾಗಿತ್ತು.

ಕಾವೇರಿ ನದಿಯಲ್ಲಿ ಪ್ರವಾಹ ಹೆಚ್ಚಳ | ಕೆಆರ್‌ಎಸ್, ಕಬಿನಿಗೆ ಒಳಹರಿವು ಹೆಚ್ಚಳ

ಮುಂಗಾರು ಮಳೆಯ ಅಬ್ಬರ

ಮೈಸೂರು: ಕೊಡಗು ಹಾಗೂ ಕೇರಳದ ವಯನಾಡು ಪ್ರದೇಶದಲ್ಲಿ ಮುಂಗಾರು ಮಳೆಯ ಅಬ್ಬರ ಹೆಚ್ಚಾಗಿದೆ. ಇದರ ಪರಿಣಾಮ ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯಗಳಿಗೆ ಒಳಹರಿವು ಹೆಚ್ಚಾಗಿದೆ. ಕಾವೇರಿ ಉಗಮಸ್ಥಾನ ಭಾಗಮಂಡಲದ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತಗೊಂಡಿದೆ. ಈ ಹಿನ್ನೆಲೆಯಲ್ಲಿ ಕೊಡಗಿನ ಮೂರು ತಾಲೂಕಿನ ಶಾಲೆಗಳಿಗೆ ಗುರುವಾರ ರಜೆ ಘೋಷಿಸಲಾಗಿತ್ತು.

ವಯನಾಡಿನಲ್ಲಿ ಎಡಬಿಡದೆ ಸುರಿಯುತ್ತಿರುವ ಮಳೆಗೆ ಮೈಸೂರು ಜಿಲ್ಲೆಯ ಎಚ್. ಡಿ ಕೋಟೆ ಬಳಿಯ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚುತ್ತಿದೆ. ಜಲಾಶಯದ ನೀರಿನ ಸಾಮರ್ಥ್ಯ 84 ಅಡಿಗಳಾಗಿದ್ದು. ಗುರುವಾರದ ಮಟ್ಟ 69 ಅಡಿಗಳಾಗಿವೆ.

ಕಬಿನಿ ತುಂಬಲು 15 ಅಡಿ ಬಾಕಿ : ಕಬಿನಿ ಜಲಾಶಯ ಸಾಮರ್ಥ್ಯ 2284 ಅಡಿಗಳಾಗಿದ್ದು, 19.52 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವಿದೆ. ಗುರುವಾರದ ಮಟ್ಟ 2269.22 ಅಡಿಗಳಿದ್ದು, 11.30 ಟಿಎಂಸಿ ನೀರು ಸಂಗ್ರಹವಾಗಿದೆ. ಒಳಹರಿವು 16,977 ಕ್ಯೂಸೆಕ್ ಇದ್ದರೆ, ಹೊರಹರಿವು 1000 ಕ್ಯೂಸೆಕ್ ಇದೆ. ಜಲಾಶಯ ಪೂರ್ತಿ ತುಂಬಲು 15 ಅಡಿ ಬಾಕಿ ಇದೆ.

ಉಕ್ಕಿಹರಿದ ತುಂಗಾ ನದಿ: ಈ ಬಾರಿ ಆಶಾದಾಯಕ ಮುಂಗಾರು ಪ್ರಾರಂಭಗೊಂಡಿದೆ. ಪೂರ್ವ ಮುಂಗಾರು ಅಬ್ಬರಿಸಿದರೂ ಮುಂಗಾರು ಸ್ವಲ್ಪ ತಡವಾಗಿ ಮಲೆನಾಡಿನಲ್ಲಿ ಪ್ರಾರಂಭವಾಗಿದೆ. ಶಿವಮೊಗ್ಗ ತಾಲೂಕಿನ ಗಾಜನೂರು ಜಲಾಶಯ ಈ ಬಾರಿ ಬೇಗನೆ ಭರ್ತಿಯಾಗಿದೆ. ಒಳ ಹರಿವು 6 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಡ್ಯಾಂನಿಂದ ನದಿಗೆ ಎರಡು ಕ್ರಸ್ಟ್ ಗೇಟ್‌ಗಳ ಮೂಲಕ 1 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ.

ಅದೇ ರೀತಿ ವಿದ್ಯುತ್ ಉತ್ಪಾದನೆಗಾಗಿ 5 ಸಾವಿರ ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ. ಇದರಿಂದ ನದಿಗೆ ಒಟ್ಟು 6 ಸಾವಿರ ಕ್ಯೂಸೆಕ್ ನೀರು ಹರಿಸಲಾಗಿದೆ.ತುಂಗಾ ಅಣೆಕಟ್ಟೆಯು 3.24 ಟಿಎಂಸಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, 588.24 ಮೀಟರ್ ಎತ್ತರವಿದೆ.

ಕೊಡಗಿನಲ್ಲಿ ಕಳೆದ 2 ದಿನಗಳಿಂದ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕಾವೇರಿಯ ತ್ರಿವೇಣಿ ಸಂಗಮ ಸಂಪೂರ್ಣ ಜಲಾತವಾಗಿದೆ.

ಭಾಗಮಂಡಲ ಜಲಾವೃತ

ಕೊಡಗಿನಲ್ಲಿ ಕಳೆದ 2 ದಿನಗಳಿಂದ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕಾವೇರಿಯ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತವಾಗಿದೆ. ವರುಣನ ಆರ್ಭಟದಿಂದ ಜನಜೀವನ ಅಸ್ತವ್ಯಸ್ತವಾಗಿದ್ದು, ಮಡಿಕೇರಿ, ಪೊನ್ನಂಪೇಟೆ, ವಿರಾಜಪೇಟೆ ತಾಲೂಕಿನ ಶಾಲೆಗಳಿಗೆ ಗುರುವಾರ ರಜೆ ಘೋಷಿಸಲಾಗಿತ್ತು. ಅಲ್ಲಲ್ಲಿ ಸಣ್ಣ-ಪುಟ್ಟ ಅನಾಹುತಗಳು ಸಂಭವಿಸಿವೆ. ವ್ಯಾಪಕ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯದ ಒಳ ಹರಿವು ಹೆಚ್ಚಾಗಿದೆ. ಜಲಾಶಯದ ಗರಿಷ್ಠ ನೀರಿನ ಮಟ್ಟ 124 ಅಡಿಯಾಗಿದ್ದು, ಇಂದಿನ ನೀರಿನ ಮಟ್ಟ 85 ಅಡಿಯಾಗಿದೆ. ಒಳಹರಿವು 3856 ಕ್ಯೂಸೆಕ್ ಇದೆ. ಒಳ ಹರಿವು ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.ಮುಂಗಾರು ಚುರುಕಾಗಿರುವುದರಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ಕೃಷಿ ಚಟುವಟಿಕೆ ಗದಗೆದರಿದೆ.

ಹೈಕಮಾಂಡ್ ಮುಂದೆ ಮಾತಾಡಲಿ: ಡಿಕೆಶಿ

ಬೆಂಗಳೂರು: ಹೆಚ್ಚುವರಿ ಡಿಸಿಎಂ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತನಾಡುತ್ತಿರುವವರು, ಹೈಕಮಾಂಡ್ ನಾಯಕರ ಮುಂದೆ ಹೋಗಿ ಮಾತನಾಡಲಿ ಎಂದು ಡಿಸಿಎಂ ಡಿಕೆಶಿ ಸವಾಲು ಹಾಕಿದ್ದಾರೆ. ಮಾಧ್ಯಮಗಳು ಪ್ರಚಾರ ಮಾಡುತ್ತವೆಯೇ ಹೊರತು, ಪರಿಹಾರ ನೀಡುವುದಿಲ್ಲ. ಈ ವಿಚಾರವಾಗಿ ಮಾಧ್ಯಮಗಳ ಮುಂದೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನಾನು ಕೂಡ ಮಾಧ್ಯಮಗಳ ಮುಂದೆ ಚರ್ಚೆ ಮಾಡುವುದಿಲ್ಲ. ಯಾರು ಬೇಕಾದರೂ ಹೈಕಮಾಂಡ್ ನಾಯಕರ ಬಳಿ ಹೋಗಿ ಪರಿಹಾರ ಹುಡುಕಿಕೊಂಡು ಬರಲಿ ಎಂದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ವಿಚಾರವಾಗಿ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಸಮಯ ವ್ಯರ್ಥ ಮಾಡಬಾರದು. ಅವರಿಗೆ ಪರಿಹಾರ ಕಂಡುಕೊಳ್ಳಲು ಎಲ್ಲಿ ಹೋಗಬೇಕೋ ಅಲ್ಲಿ ಹೋಗಲಿ. ಆರೋಗ್ಯ ಸರಿಯಿಲ್ಲ ಎಂದು ವೈದ್ಯರ ಬಳಿ ಹೋದರೆ ಔಷಧಿ ನೀಡುತ್ತಾರೆ. ಅದೇ ರೀತಿ ಅವರು ಎಲ್ಲಾದರೂ ಪರಿಹಾರವನ್ನು ಹುಡುಕಿಕೊಂಡು ಹೋಗಲಿ ಎಂದು ವ್ಯಂಗ್ಯವಾಡಿದರು.

ದ.ಕ ಜಿಲ್ಲೆಯಲ್ಲಿ ರೆಡ್ ಅಲರ್ಟ್

ಬೆಂಗಳೂರು: ಕರಾವಳಿ ಭಾಗದಲ್ಲಿ ಮಳೆಯ ಅಬ್ಬರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮುಂದಿನ 24 ಗಂಟೆಗಳ ಕಾಲ ಕರಾವಳಿಯ ಜಿಲ್ಲೆಗಳಿಗೆ ರೆಡ್ ಹಾಗೂ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಉಡುಪಿ, ಉತ್ತರಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಮುಂದುವರಿಸಲಾಗಿದೆ. ಹಾಸನ ಜಿಲ್ಲೆಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆ ಬೀಳಲಿದ್ದು, ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಉಡುಪಿ, ಉತ್ತರ ಕನ್ನಡ , ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲೂ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಸಾಧಾರಣ ಮಳೆ: ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಶುಕ್ರವಾರ ಮಳೆಯಾಗುವ ಸಾಧ್ಯತೆ ಇದೆ.ಗುರುವಾರ ಬೆಳಿಗ್ಗೆ ಮೆಜೆಸ್ಟಿಕ್, ಮಲ್ಲೇಶ್ವರ, ಶೇಷಾದ್ರಿಪುರ, ರಾಜಾಜಿ ನಗರ, ಶಾಂತಿನಗರ, ಎಂಜಿ ರಸ್ತೆ ಸೇರಿದಂತೆ ನಗರದ ಹಲವೆಡೆ ಮಳೆಯಾಗಿದೆ.

ಮುಲ್ಕಿಯಲ್ಲಿ ಅತಿ ಹೆಚ್ಚು ಮಳೆ: ಮಂಗಳವಾರ ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ ಅತಿ ಹೆಚ್ಚು 30 ಸೆಂ.ಮೀ ಮಳೆ ಬಿದ್ದಿದೆ. ಉಡುಪಿ ಮತ್ತು ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ತಲಾ 21 ಸೆಂ.ಮೀ ಮಳೆಯಾಗಿದೆ.

ಬಿಎಸ್‌ವೈ ವಿರುದ್ಧ 750 ಪುಟ ದೋಷಾರೋಪ ಪಟ್ಟಿ ಸಲ್ಲಿಕೆ

← ಮೊದಲಪುಟದಿಂದ

ಪ್ರಕರಣದ ತನಿಖೆಯನ್ನು ರಾಜ್ಯ ಸರಕಾರ ಸಿಐಡಿಗೆ ನೀಡಿತ್ತು. ತನಿಖೆಗೆ ಹಾಜರಾಗುವಂತೆ ಬಿಎಸ್‌ವೈಗೆ ನೋಟಿಸ್ ಕೊಟ್ಟಿದ್ದರಿಂದ ಅವರು ಕಾಲಾವಕಾಶ ಕೇಳಿದ್ದರು. ಬಳಿಕ ತನಿಖೆಗೆ ಹಾಜರಾಗಿಲ್ಲ ಎಂದು ಸಿಐಡಿ ಅಧಿಕಾರಿಗಳು, ಅವರ ಬಂಧನದ ವಾರೆಂಟ್ ಪಡೆದಿದ್ದರು. ಬಳಿಕ ಬಿಎಸ್‌ವೈ ಮಧ್ಯಂತರ ಜಾಮೀನು ಪಡೆದಿದ್ದರು. ಜಾಮೀನು ಪಡೆದ ಬಳಿಕ ಬಿಎಸ್‌ವೈ ಕೋರ್ಟ್ ನಿರ್ದೇಶನದಂತೆ ಸಿಐಡಿ ಅಧಿಕಾರಿಗಳ ಎದುರು ತನಿಖೆಗೆ ಹಾಜರಾಗಿದ್ದರು. ಇದೀಗ ತನಿಖೆ ನಡೆಸಿರುವ ಸಿಐಡಿ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರಕಾರ ಪ್ರಾಸಿಕ್ಯೂಷನ್ ಪರವಾಗಿ ವಕಾಲತ್ತು ವಹಿಸಲು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ) ಅಶೋಕ್ ಎನ್.ನಾಯಕ್ ಅವರನ್ನು ನೇಮಿಸಿದೆ.

ಏನಿದು ಪ್ರಕರಣ?

ಫೆ.2ರಂದು ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಯಡಿಯೂರಪ್ಪ ಮನೆಗೆ ತನ್ನ 17 ವರ್ಷದ ಮಗಳ ಜತೆ ತೆರಳಿದ್ದ ಸಂದರ್ಭದಲ್ಲಿ ಬಾಲಕಿ ಜತೆ ಯಡಿಯೂರಪ್ಪ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಬೆಂಗಳೂರಿನ ಸದಾಶಿವ ನಗರ ಠಾಣೆಯಲ್ಲಿ ಮಾರ್ಚ್ 14ರಂದು ರಾತ್ರಿ ಮಹಿಳೆಯೊಬ್ಬರು ದೂರು ನೀಡಿದ್ದರು. ಆ ಹಿನ್ನೆಲೆಯಲ್ಲಿ, ಯಡಿಯೂರಪ್ಪನವರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ರಾಜ್ಯ ಸರಕಾರ ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿತ್ತು.

ಚನ್ನಪಟ್ಟಣ ಅಖಾಡಕ್ಕೆ ಸೈನಿಕನ ಪುತ್ರಿ?

← ಮೊದಲಪುಟದಿಂದ

ಆದರೆ ಇದೀಗ ಮೈತ್ರಿ ಅಭ್ಯರ್ಥಿಯಾಗಿ ಯೋಗೇಶ್ವರ್ ಸ್ಪರ್ಧಿಸಿದರೆ, ಅವರ ವಿರುದ್ಧ ನಿಶಾ ಅವರನ್ನು ನಿಲ್ಲಿಸಿದರೆ ಪಕ್ಷಕ್ಕೆ ಲಾಭವಾಗಲಿದೆ ಎನ್ನುವ ಲೆಕ್ಕಾಚಾರದಲ್ಲಿ ಈ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಪುತ್ರಿ ಅಸ್ತ್ರ ಬಳಕೆಗೆ ಸಜ್ಜಾದ ಕೈ: ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹಾಗೂ ಪುತ್ರಿ ನಿಶಾ ನಡುವೆ ಬಿರುಕು ಇರುವುದು ಈಗಾಗಲೇ ಜಗಜ್ಜಾಹೀರವಾಗಿದೆ. ಯೋಗೇಶ್ವರ್ ಮಗಳೊಂದಿಗೆ ಸರಿಯಾಗಿ ನಡೆದುಕೊಂಡಿಲ್ಲ ಎನ್ನುವ ಆರೋಪವನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ನಿಶಾ ಪರ 'ಅನುಕಂಪ' ಗಿಟ್ಟಿಸಿಕೊಳ್ಳಬಹುದು ಎನ್ನುವುದು ಕಾಂಗ್ರೆಸ್‌ನ ಕೆಲ ನಾಯಕರ ವಾದವಾಗಿದೆ. ಆದರೆ ಇನ್ನು ಕೆಲ ನಾಯಕರು, ಒಂದು ವೇಳೆ ಅಪ್ಪ-ಮಗಳನ್ನು ಇನ್ನಷ್ಟು ದೂರ ಮಾಡಿದ್ದಾರೆ ಎನ್ನುವ ಪ್ರತ್ಯಾಸ್ತ್ರ ವರ್ಕ್‌ಔಟ್ ಆದರೆ ಪಕ್ಷಕ್ಕೆ ಡ್ಯಾಮೇಜ್ ಆಗಲಿದೆ ಎನ್ನುವುದು ಕೆಲವರ ಅಭಿಪ್ರಾಯವಾಗಿದೆ. ಆದ್ದರಿಂದ ಮೈತ್ರಿ ನಾಯಕರ ನಡೆಯನ್ನು ನೋಡಿಕೊಂಡು ಅಭ್ಯರ್ಥಿಯನ್ನು ಅಂತಿಮ ಮಾಡಲು ಕಾಂಗ್ರೆಸ್ ತೀರ್ಮಾನಿಸಿದೆ ಎಂದು ತಿಳಿದುಬಂದಿದೆ.

ಜೆಡಿಎಸ್ ಹಿಂದೇಟು: ಇನ್ನು ಜೆಡಿಎಸ್‌ನ ಭದ್ರಕೋಟೆ ಎನಿಸಿರುವ ಚನ್ನಪಟ್ಟಣವನ್ನು ಮೈತ್ರಿಧರ್ಮದಲ್ಲಿ ಬಿಟ್ಟುಕೊಡುವ ಅನಿವಾರ್ಯತೆ ಸೃಷ್ಟಿಯಾದರೆ ಎನ್ನುವ ಆತಂಕದಲ್ಲಿ ಸ್ಥಳೀಯ ನಾಯಕರಿದ್ದಾರೆ. ಆದರೆ ಮೂಲಗಳ ಪ್ರಕಾರ, ಉಪಚುನಾವಣೆಯ ಮೂರು ಕ್ಷೇತ್ರಗಳ ಪೈಕಿ ಎರಡನ್ನು ಬಿಜೆಪಿಗೆ ಬಿಟ್ಟುಕೊಡಲು ಜೆಡಿಎಸ್ ಸಿದ್ಧವಿದೆ. ಆದರೆ ಚನ್ನಪಟ್ಟಣವನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದು ಬೇಡ ಎನ್ನುವ ಮಾತುಗಳನ್ನು ಜೆಡಿಎಸ್ ನಾಯಕರು ಆಡುತ್ತಿದ್ದಾರೆ. ಒಂದು ವೇಳೆ ಇದೇ ಪಟ್ಟನ್ನು ಜೆಡಿಎಸ್ ಮುಂದುವರಿಸಿದರೆ ಯೋಗೇಶ್ವರ್ ಅವರಿಗೆ ಟಿಕೆಟ್ ಕೈತಪ್ಪುವುದು ಖಚಿತ. ಈ ಹಂತದಲ್ಲಿ ಕಾಂಗ್ರೆಸ್ ಸಹ, ಪ್ಲಾನ್ ಬಿ ಮಾಡಿಕೊಂಡಿರುವ ಲೆಕ್ಕಾಚಾರದಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಇಂದು ಮೋದಿ-ಸಿದ್ದು ಭೇಟಿ

← ಮೊದಲಪುಟದಿಂದ

ಮೇಕೆದಾಟು, ಭದ್ರಾ ಮೇಲ್ದಂಡೆ, ಏಮ್ಸ್ ಸ್ಥಾಪನೆ, 18ಸಾವಿರ ಕೋಟಿ ಬಾಕಿ ಅನುದಾನ, ರೈಲ್ವೇ ಸಂಪರ್ಕಕ್ಕೆ ಹೆಚ್ಚಿನ ಆದ್ಯತೆ, ಗ್ರಾಮೀಣ ಸಡಕ್ ಯೋಜನೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಂಸತ್‌ನಲ್ಲಿ ರಾಜ್ಯದ ಪರವಾಗಿ ಪಕ್ಷಾತೀತವಾಗಿ ಧ್ವನಿ ಎತ್ತುವಂತೆ ಮನವಿ ಸಲ್ಲಿಸಿದ್ದಾರೆ. ಸಭೆಯಲ್ಲಿ ಕೇಂದ್ರದ ಸಚಿವರಾದ ಪ್ರಲ್ಹಾದ್ ಜೋಶಿ, ಎಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಸೇರಿದಂತೆ ನೂತನವಾಗಿ ಆಯ್ಕೆಯಾಗಿರುವ ಲೋಕಸಭಾ ಸದಸ್ಯರು, ಡಾ. ಸುಧಾಮೂರ್ತಿ ಸೇರಿದಂತೆ ವಿವಿಧ ರಾಜ್ಯಸಭಾ ಸದಸ್ಯರು ಭಾಗವಹಿಸಿದ್ದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ

ದೂರವಾಣಿ ಸಂಖ್ಯೆ:08182–223900 e-mail: dcfsfsmg@gmail.com

ಸಂ.ಎ6:ಬಿಯುಡಿ:ಸಾ.ಅ.ಯೋ:ಟೆಂಡರ್:02/2024–25 ದಿ: 25.06.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ)

2024–25 ನೇ ಸಾಲಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ ವಿಭಾಗದ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು ಮುಂಗಡ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರುವ ಹಾಗೂ ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಇರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಬಿಡ್‌ಗಳನ್ನು ದಿನಾಂಕ: 06/07/2024 ರಂದು 4.30 ಗಂಟೆಯೊಳಗೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ನ ಸಂಪೂರ್ಣ ಮಾಹಿತಿಯುನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. (ಕಛೇರಿ ದೂರವಾಣಿ ಸಂಖ್ಯೆ: 08182–223900)

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/130/06/24–25/161

ಕರ್ನಾಟಕ ಸರ್ಕಾರ ಉಪವಿಭಾಗೀಯ ಆಸ್ಪತ್ರೆ ಸಾಗರ

ಸಂ : NO:ಉವಿಆಸಾ/ಸಿ.ಆ.ಪೂ.ಟೆ/33/2024–25 ದಿನಾಂಕ: 26.06.2024

ಸಿದ್ದಪಡಿಸಿದ ಪಥ್ಯಾಹಾರ ಪೂರೈಕೆ ಸಂಬಂಧ ಇ–ಟೆಂಡರ್ ಪ್ರಕಟಣೆ

ಉಪವಿಭಾಗೀಯ ಆಸ್ಪತ್ರೆ ಸಾಗರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಾಗರ ಇಲ್ಲಿಗೆ ಸಿದ್ಧಪಡಿಸಿದ ಪಥ್ಯಾಹಾರ ಪೂರೈಕೆ ಪಡೆಯಲು ಅರ್ಹ ಸಂಸ್ಥೆಗಳಿಂದ two tender document system ರಂತೆ E- Procurement ಮುಖಾಂತರ ಇ–ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್‌ದಾರರು ದಿನಾಂಕ:27.06.2024 ರಿಂದ ದರಗಳನ್ನು upload ಮಾಡಬಹುದು ಹಾಗೂ ಈ ಕುರಿತು ಇಲಾಖಾ ವೆಬ್ ಸೈಟ್‌ಗೆ www.kppp.karnataka.gov.in ಲಾಗ್‌ಆನ್ ಮಾಡಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ–ಪೋರ್ಟಲ್‌ನಲ್ಲಿ ಪಡೆಯತಕ್ಕದ್ದು

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಉಪವಿಭಾಗೀಯ ಆಸ್ಪತ್ರೆ, ಸಾಗರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/125/06/24–25/162

ಕರ್ನಾಟಕ ಸರ್ಕಾರ ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿ (ಉ.ಕ) – 581401

ದೂರವಾಣಿ: 08384-229936, Email ID: pghsis@gmail.com

NO: PGHS:DIET TENDER: 01 :2024-25/135 Date: 25.06.2024

2024–25 ನೇ ಸಾಲಿಗಾಗಿ ಒಳರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರ ಹಾಗೂ ಬ್ರೆಡ್ ಸರಬರಾಜು ಮಾಡುವ ಬಗ್ಗೆ ಇ–ಟೆಂಡರ್ ಅಹ್ವಾನ

ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿ ಜಿಲ್ಲಾ: ಉತ್ತರ ಕನ್ನಡ ಇಲ್ಲಿಗೆ 2024–25 ನೇ ಸಾಲಿಗಾಗಿ ಒಳ ರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರ ಹಾಗೂ ಬ್ರೆಡ್ ಸರಬರಾಜು ಮಾಡಲು ಅರ್ಹ ಸಂಘ, ಸಂಸ್ಥೆಗಳಿಂದ ಹಾಗೂ ಅಧಿಕೃತ ಸರಬರಾಜುದಾರರಿಂದ ಇ–ಟೆಂಡರ್ ಮೂಲಕ ಟೆಂಡರ್ ಅಹ್ವಾನಿಸಲಾಗಿದೆ.

(1) ವಾರ್ಷಿಕ ಟೆಂಡರ್ ಮೊತ್ತ: ರೂ. 32.57 ಲಕ್ಷಗಳು (2) ಟೆಂಡರ್ ಪ್ರಕಟಣೆಯ ದಿನಾಂಕ: 25.06.2024 (3) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.07.2024 ಅಪರಾಹ್ನ 4.00 ಘಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.07.2024 ಅಪರಾಹ್ನ 4.30 ಘಂಟೆಯ ನಂತರ (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.07.2024 ಅಪರಾಹ್ನ 4.00 ಘಂಟೆಯ ನಂತರ ಅಥವಾ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ.

ಟೆಂಡರ್ ನಮೂನೆಗಳಿಗಾಗಿ, ಇ.ಎಮ್.ಡಿ, ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟಿನಲ್ಲಿ ನೋಡಬಹುದಾಗಿದೆ.

ಸಹಿ/– ಆಡಳಿತ ವೈದ್ಯಾಧಿಕಾರಿ, ಪಂಡಿತ ಸಾರ್ವಜನಿಕ ಆಸ್ಪತ್ರೆ, ಶಿರಸಿ (ಉ.ಕ)

DIPR/ADK/KSMCA/96/24-25 dt. 27.06.2024

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ

ಇ–ಮೇಲ್ ವಿಳಾಸ:amobag2012@gmail.com

ದೂರವಾಣಿ ಸಂಖ್ಯೆ: 08150–282210

ದಿನಾಂಕ:21.06.2024

ತಿದ್ದುಪಡಿ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಸಾರ್ವಜನಿಕ ಆಸ್ಪತ್ರೆ ಬಾಗೇಪಲ್ಲಿ ಇಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿದೆ.

ಕ್ರ ಸಂ	ಟೆಂಡರ್ ಅಧಿಸೂಚನೆ ಸಂಖ್ಯೆ	ತಿದ್ದುಪಡಿ
1	ಸಂ:ಸಾ.ಆ.ಬಾ/ನಾನ್‌ಕ್ಲಿನಿಕಲ್/01/24–25 ದಿನಾಂಕ: 03.06.2024	ಇ ಟೆಂಡರ್ ನಮೂನೆಗಳನ್ನು ಅಪ್ಲೋಡ್ ಮಾಡುವ ದಿನಾಂಕವನ್ನು ದಿನಾಂಕ: 15.07.2024 ರವರೆಗೆ ವಿಸ್ತರಿಸಿದೆ
2	ಸಂ:ಸಾ.ಆ.ಬಾ/ಗ್ರೂಪ್‌ಡಿ/02/24–25 ದಿನಾಂಕ: 03.06.2024	
3	ಸಂ:ಸಾ.ಆ.ಬಾ/ಪಥ್ಯಾಹಾರ/03/24–25 ದಿನಾಂಕ: 03.06.2024	

ನಮೂನೆಗಳನ್ನು kppp.karnataka.gov.in ಅಂತರ್ಜಾಲದಲ್ಲಿ ಅಪ್ಲೋಡ್ ಮಾಡುವುದು. ಹೆಚ್ಚಿನ ಮಾಹಿತಿಗಾಗಿ ಆಡಳಿತ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಬಾಗೇಪಲ್ಲಿ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಬಾಗೇಪಲ್ಲಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:46/ಕೆಎಸ್ಎಂಸಿಎ/2024–25

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560100.

ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸ:ಕೋ:ತಾಂ:ಶಾ:06:2024–25 ದಿನಾಂಕ: 27–06–2024

ಮರು ಟೆಂಡರ್ ಹಾಗೂ ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಾದ ಕೊಳವೆಬಾವಿ ಕೊರೆದು ಪಂಪ್ ಮೋಟಾರ್ ಅಳವಡಿಸುವ ಮರು ಟೆಂಡರ್ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ದುರಸ್ಥಿಪಡಿಸುವ ಕಾಮಗಾರಿಯನ್ನು ನಿರ್ವಹಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್‌ಗಳನ್ನು **https://kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ಈ ಕೆಳಕಂಡಂತೆ ಇದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in** ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ಅಭಿಯಂತರರಿಂದ ಪಡೆಯತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2023-24/IW/WORK_INDENT17053/CALL-2	53.75
2	DMA/2024-25/WS/WORK_INDENT18239	8.00

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: ಕ್ರ.ಸಂ. 1 ಕ್ಕೆ 04–07–2024 ರಂದು ಸಂಜೆ 5.30 ಗಂಟೆಯವರೆಗೆ ಹಾಗೂ ಕ್ರ.ಸಂ. 2 ಕ್ಕೆ 12–07–2024 ರಂದು ಸಂಜೆ 5.30 ಗಂಟೆಯವರೆಗೆ.

ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ಕೋನಪ್ಪನ ಅಗ್ರಹಾರ. **ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಕೋನಪ್ಪನ ಅಗ್ರಹಾರ.**

ವಾಸಾಸಂಇ/ವಾ.ಪ್ರ/617/ಅಡ್ವರ್ಟೋರ್/2024–25

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಕಛೇರಿ–2ನೇ ಮಹಡಿ , ಐ.ಸಿ.ಎಂ.ಸಿ.ಸಿ ಕಟ್ಟಡ, ಎಸ್.ಪಿ. ಕಛೇರಿ ಆವರಣ, ಬಿ,ಹೆಚ್,ರಸ್ತೆ, ತುಮಕೂರು–572 103

Office-2nd Floor, Integrated Command and Control Center, SP Office Premises, B.H Road, Tumkuru - 572103 Phone : 0816–2278190

E-mail : smartcitytumakuru@gmail.com. website: www.smartcitytumakuru.in. CIN:U74999KA2017PLC099774

ಸಂ:ತುಸ್ಮಾಸಿ/ಟೆಂಡರ್/ಸಿಆರ್/15/2023–24 ದಿ: 25.06.2024

ಮರು– ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಕರ್ನಾಟಕ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಮರು–ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.kppp.karnataka. gov.in - ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: 1. ತುಮಕೂರು ನಗರ ಕೇಂದ್ರ ಗ್ರಂಥಾಲಯದ 2ನೇ ಮಹಡಿಗೆ ಅಗತ್ಯವಿರುವ ಪೀಠೋಪಕರಣಗಳ ಸರಬರಾಜು ಮತ್ತು ಅಳವಡಿಕೆ. ಕಾಮಗಾರಿಯ ಮೊತ್ತ ರೂ.89.00ಲಕ್ಷಗಳು. ಇಎಂಡಿ ರೂ.1,78,000. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.07.2024. ಟೆಂಡರ್ ತೆರೆಯುವ ದಿನಾಂಕ: 02.07.2024

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/88/KSMCA/2024-25

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಕೃಷಿ ನಗರ ಧಾರವಾಡ–580005 (ಕರ್ನಾಟಕ)

ಸಂಖ್ಯೆ:ಆ.ಅ/ಕೃವಿವಿ/2024–25 ದಿನಾಂಕ: 26.06.2024

ಆಸಕ್ತಿ ಅಭಿವ್ಯಕ್ತ ಪಡಿಸುವುದು

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಇ-ಟೆಂಡರ್ ಮೂಲಕ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ನೌಕರರ ಜನರಲ್ ಪ್ರೋವಿಡೆಂಟ್ ಫಂಡ್‌ನ ನಿಧಿಯ ಹಣವು ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್ ಸೈಟ್ **https://kppp.karnataka.gov.in.** ನ್ನು ನೋಡುವುದು.

ಟೆಂಡರ ವೇಳಾಪಟ್ಟಿ

(1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **06.07.2024** ಸಾಯಂಕಾಲ 5.00 ಘಂಟೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : **08.07.2024** ಬೆಳಿಗ್ಗೆ 11.00 ಘಂಟೆ

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **080–23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದುಕೊಳ್ಳಲು ಸದಾ ವೆಬ್ ಸೈಟ್ **https://kppp.karnataka.gov.in.** ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ವಾಸಾಸಂಇ/ಧಾರವಾಡ/ಕೆಎಸ್ಎಂಸಿಎ/100/2024–25 **ಸಹಿ/– ಆಸ್ತಿ ಅಧಿಕಾರಿಗಳು**

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257 ಇ–ಮೇಲ್: belagavibuda@gmail.com

No: BUDA/PWD/E-TENDER/2024-25/758 Date: 27-06-2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್–02 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, **ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ** ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: **0831–2470342**) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: **https://kppp.karnataka.gov.in** ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ. ಗಳಲ್ಲಿ)	ಕಾಮಗಾರಿಯನ್ನು ನಿರ್ವಹಿಸುವ ಅವಧಿ
1	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದಲ್ಲಿ ರಸ್ತೆ ಅಭಿವೃದ್ಧಿ ಮಾಡುವುದು.	INDENT 19	73.55	1,48,000/-	6 ತಿಂಗಳು
2	ಬೆಳಗಾವಿ ಉತ್ತರ ಮತಕ್ಷೇತ್ರದ ನ್ಯೂ ಗಾಂಧಿ ನಗರದಲ್ಲಿ ರಸ್ತೆ ಅಭಿವೃದ್ಧಿ ಮಾಡುವುದು.	INDENT 20	46.20	93,000/-	6 ತಿಂಗಳು
3	ಬೆಳಗಾವಿ ಉತ್ತರ ಮತಕ್ಷೇತ್ರದ ಅಮನ್ ನಗರದ ಸ್ಟಾರ್ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಮಾಡುವುದು.	INDENT 21	56.00	1,12,000/-	6 ತಿಂಗಳು
4	ಬೆಳಗಾವಿ ಉತ್ತರ ಮತಕ್ಷೇತ್ರದ ಉಜ್ವಲ್ ನಗರದಲ್ಲಿ ರಸ್ತೆ ಅಭಿವೃದ್ಧಿ ಮಾಡುವುದು.	INDENT 22	95.50	1,91,000/-	6 ತಿಂಗಳು

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: **12–07–2024 ರಂದು ಸಾಯಂಕಾಲ 4.30 ಘಂಟೆವರೆಗೆ.** 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30–07–2024 ರಂದು ಸಾಯಂಕಾಲ 4.30 ಘಂಟೆವರೆಗೆ.** 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **31–07–2024 ರಂದು ಸಾಯಂಕಾಲ 5.00 ಘಂಟೆಗೆ.** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಇ–ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದಾಗಿದೆ. 5) ಯಾವ ಕಾರಣವನ್ನು ಸಹ ನೀಡದ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. 6) ಟೆಂಡರ್ ಮೊತ್ತಕ್ಕೆ ಜಿ.ಎಸ್.ಟಿ. ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ. ವಾಸಾಸಂಇ/ಬೆಳಗಾವಿ/213/ಅಡ್ವರ್ಟೋರ್/2024–25 **ಸಹಿ/– ಆಯುಕ್ತರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.**

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561 203

ದೂರವಾಣಿ : 080-29562046

ಸಂಖ್ಯೆ: DPA/TP/CLU/11/2024-25 ದಿನಾಂಕ: 27.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಬಿಐಎಪಿಎ ಪ್ರಾಧಿಕಾರದ ಮಹಾ ಯೋಜನೆಯಲ್ಲಿನ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ರೇಣುಕಮ್ಮ ಕೋಂ ಲೇಟ್॥ ಕೆ.ಪಿ. ಅಶ್ವಥಪ್ಪ	ಯಲಹಂಕ	ಹೆಸರು ಘಟ್ಟ–1	ಕೊಲುವ ರಾಯನಹಳ್ಳಿ	54/1	1–01	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ಭೂ ಉಪಯೋಗ ಬದಲಾವಣೆ ಮಾಡಿಸಿ ಅಭಿವೃದ್ಧಿಪಡಿಸಲು ಸ್ವಯಂ ಇಚ್ಛಿಸಿದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಬಡಾವಣೆಯ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ಮೂಲಭೂತ ವಸತಿ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಬಡಾವಣೆಯ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕರ್ನಾಟಕ ಸರ್ಕಾರ ಕೃಷಿ ಮಾರಾಟ ಇಲಾಖೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಜೇವರ್ಗಿ

ಅಖಂಡೇಶ್ವರ ಗಂಜ್, ಬೀದರ–ಬೆಂಗಳೂರು ಮುಖ್ಯ ರಸ್ತೆ, ಜೇವರ್ಗಿ–585310 ಜಿಲ್ಲೆ: ಕಲಬುರಗಿ

Email : apmcjewargi@gmail.com apmcjewargi@outlook.com

ಸಂ: ಕೃಮಾಇ:ಕೃಉಮಾಸ:ಜೇ:ಅಭಿವೃದ್ಧಿ:71:2024–25 ದಿನಾಂಕ:26–06–2024

:: ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ–2ನೇ ಕರೆ ::

ಕೃಷಿ ಉತ್ಪನ್ನ ಮಾರುಟ್ಟೆ ಸಮಿತಿ, ಜೇವರ್ಗಿಯ ವತಿಯಿಂದ RIDF-29ರ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಾಣಿಸಿದ ಅಭಿವೃದ್ಧಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇ–ಟೆಂಡರ್ ವೆಬ್‌ಸೈಟ್ https://kppp.karnataka.gov.in ರಲ್ಲಿ ಸ್ಪರ್ಧಾತ್ಮಕ ಐಟಂವಾರು ಟೆಂಡರ್‌ಗಳನ್ನು Standard Tender Document KW-4 (With Latest Amendments) ಷರತ್ತುಗಳನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

1) ಬಿಡ್ ಪೂರ್ವಭಾವಿ ಸಭೆ & ಟೆಂಡರ್ ತಕರಾರು ಸಮಜಾಯಿಸಿ ದಿನಾಂಕ: **04–07–2024 ಮಧ್ಯಾಹ್ನ 12:30 ಗಂಟೆಗೆ,** 2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **08–07–2024 ಸಾಯಂಕಾಲ 04:00 ಗಂಟೆಗೆ** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **09–07–2024 ಸಾಯಂಕಾಲ 04:30 ಗಂಟೆಗೆ,** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **19–07–2024 ಸಾಯಂಕಾಲ 04:00 ಗಂಟೆಗೆ (ಸಾಧ್ಯವಾದಲ್ಲಿ)**

1) ಕಾಮಗಾರಿಯ ಹೆಸರು : CONSTRUCTION OF C.C. ROAD, RCC DRAIN, YARD ELECTRIFICATION IN YADRAMI SUB MARKET YARD AND YARD ELECTRIFICATION IN MMY OF APMC JEWARGI UNDER RIDF-29 SCHEME 2023-24, 2) ಟೆಂಡರ್‌ಗಿಟ್ಟ ಮೊತ್ತ: **2,09,05,711-69,** 3) ಮುಂಗಡ ಠೇವಣಿ (EMD): 3,13,600-00, 4) ಇ–ಪ್ರೊಸೆಸಿಂಗ್ ಫೀ: As per KPPP portal, 5) ಕಾಮಗಾರಿಯ ಅವಧಿ: 175 Days (Excluding Mansoon), 6) ಗುತ್ತಿಗೆದಾರರ ವರ್ಗ KW-4 Document ನಂತೆ ಲೋ.ಇ.ಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು.

ಟೆಂಡರ್ ಪ್ರೊಸೆಸಿಂಗ್ ಫೀ ಇ–ಪೋರ್ಟಲ್‌ನ ನಿಯಮಗಳನ್ವಯ ಇದ್ದು ಟೆಂಡರ್ ಷರತ್ತು ಮತ್ತು ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ಇದ್ದು, ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ ಕಚೇರಿಯಿಂದ ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಜೇವರ್ಗಿ **ಸಹಿ/– ಆಡಳಿತಾಧಿಕಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಜೇವರ್ಗಿ**

ವಾ.ಸಾ.ಸಂ.ಇ/ಕಲಬುರಗಿ/131/ಕೆ.ಎಸ್.ಎಂ.ಸಿ.&ಎ/2024–25

ಟ್ವೀಟೂ-ಖಾರಾ

ಬಿಜೆಪಿ
ಕರ್ನಾಟಕ

ಡೋಂಗಿ INCKarnataka ಸರಕಾರ ಹಾಡಹಗಲೇ ಜನರಿಗೆ ಮಂಕುಬೂದಿ ಎರಚುತ್ತಿದೆ. ಪ್ಯಾಕೆಟ್‌ಗೆ 50 ಮಿ.ಲೀ. ಹಾಲನ್ನು ಹೆಚ್ಚಳ ಮಾಡಿದ್ದೇವೆಂದು ಬೊಗಳೆಬಿಟ್ಟ ಸಾಹೇಬರು, ಇದೀಗ ಹಳೆಯ ಪ್ಯಾಕೆಟ್ ಹಳೆಯ ದರಕ್ಕೆ ಹೆಚ್ಚುವರಿ 2 ರೂಪಾಯಿ ಸೇರಿಸಿ ಗ್ರಾಹಕರಿಂದ ವಸೂಲಿ ಮಾಡುತ್ತಿದ್ದಾರೆ.. ಒಂದು ಕಡೆ ವ್ಯಾಪಾರಿಗಳು -ಗ್ರಾಹಕರು ಬೀದಿಯಲ್ಲಿ ಹಾಲಿನ ದರ ಕುರಿತು ಕಿತ್ತಾಡಿಕೊಳ್ಳುತ್ತಿದ್ದಾರೆ.

ನರೇಂದ್ರ ಮೋದಿ
ಪ್ರಧಾನಿ

ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿಯಂದು ಅವರಿಗೆ ಗೌರವ ನಮನಗಳು. ಅವರು ದೂರದೃಷ್ಟಿ ಮತ್ತು ಆಡಳಿತಾತ್ಮಕ ಕೌಶಲ್ಯಗಳಿಗೆ ಹೆಸರುವಾಸಿಯಾದ ದಾರ್ಶನಿಕರಾಗಿದ್ದರು. ಆರ್ಥಿಕ ಹಿತಚಿಂತನೆ, ಕೃಷಿ, ನೀರಾವರಿ ಮುಂತಾದವುಗಳ ಸುಧಾರಣೆಯಲ್ಲಿ ಅವರು ಮುಂಚೂಣಿಯಲ್ಲಿದ್ದರು. ಕೆಂಪೇಗೌಡರು ಕಟ್ಟಿದ ಬೆಂಗಳೂರು ನಗರ ತನ್ನ ಚಲನಶೀಲತೆ, ಹುರುಪು ಮತ್ತು ನಾವೀನ್ಯತೆಗಾಗಿ ಜಾಗತಿಕವಾಗಿ ಮೆಚ್ಚುಗೆ ಪಡೆದಿದೆ.

ರಾಜ್ಯದ ಅಭಿವೃದ್ಧಿಯಲ್ಲಿ ಕೈಜೋಡಿಸುವಂತೆ ಸಂಸದರಿಗೆ ಸಿದ್ದು ಮನವಿ | ಕೇಂದ್ರದಿಂದ ಆಗಬೇಕಿರುವ ಹಲವು ಕಾರ್ಯಗಳಿಗೆ ಸರಕಾರಕ್ಕೆ ನೆರವಾಗಿ

ರಾಜ್ಯದ ಹಿತದೃಷ್ಟಿಗೆ ಕೆಲಸ ಮಾಡಿ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂಸದರಾಗಿರುವವರು ಕರ್ನಾಟಕದ ಹಿತದೃಷ್ಟಿಯಿಂದ ರಾಜ್ಯದ ಪರವಾಗಿ ಧ್ವನಿ ಎತ್ತಬೇಕು. ಈ ವಿಷಯದಲ್ಲಿ ಯಾರೊಬ್ಬರೂ ರಾಜಕೀಯ ಮಾಡಬಾರದು. ಈ ಸಭೆಯೂ ರಾಜ್ಯದ ಹಿತ ದೃಷ್ಟಿಯಿಂದ ಸೇರಿರುವ ಸಭೆಯಾಗಿದ್ದು, ಇದರಲ್ಲಿ ರಾಜಕೀಯ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ದೆಹಲಿಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂಸದರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ನೆಲ, ಜಲ, ಸಂಸ್ಕೃತಿ, ಸಂಪನ್ಮೂಲದ ಅಭಿವೃದ್ಧಿಗಾಗಿ ರಾಜ್ಯದ ಸಂಸದರೆಲ್ಲರೂ ಒಕ್ಕೊರಲಿನಿಂದ ಒಂದೇ ಧ್ವನಿಯಲ್ಲಿ ಪ್ರಯತ್ನಿಸುವ ಅಗತ್ಯವಿದೆ. ಕೇಂದ್ರ ಸರಕಾರದಿಂದ ಆಗಬೇಕಿರುವ ಹಲವು ಯೋಜನೆಗಳಿಗೆ ರಾಜ್ಯ ಸರಕಾರಕ್ಕೆ ನೆರವಾಗಬೇಕು ಎಂದು ಮನವಿ ಮಾಡಿದರು.

> ಭಾರತ ಬಹುತ್ವದ ದೇಶ ಎಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ಕೇವಲ ಹಿಂದೂಗಳ ರಾಷ್ಟ್ರವಾಗಲು ಸಾಧ್ಯವಿಲ್ಲ. ಎಲ್ಲಾ ಜಾತಿ, ಧರ್ಮ, ಭಾಷೆಯವರು ಇದ್ದು, ಬಹುತ್ವದ ಸಂಸ್ಕೃತಿ ಇರುವ ರಾಷ್ಟ್ರವಾಗಿದೆ. ಅಮರ್ತ್ಯಸೇನ್ ಹೇಳಿರುವುದು ಸರಿಯಿದ್ದು, ನಾವೂ ಅದನ್ನೇ ಮೊದಲಿನಿಂದಲೂ ಪ್ರತಿಪಾದಿಸುತ್ತಿದ್ದೇವೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯದ ಬಹುದಿನದ ಯೋಜನೆಯಾಗಿರುವ ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಅಗತ್ಯವಿದೆ. ಭದ್ರಾ ಯೋಜನೆ ಬಗ್ಗೆಯೂ ಪ್ರಯತ್ನ ಮುಂದುವರೆಸಬೇಕಾಗಿದೆ. ಕೇಂದ್ರದ ಹಣಕಾಸು ಸಚಿವರು, ತಮ್ಮ ಬಜೆಟ್‌ನಲ್ಲಿಯೇ ಭದ್ರಾ ಯೋಜನೆಗೆ ಸಂಬಂಧಿಸಿದಂತೆ ಘೋಷಣೆ ಮಾಡಿ ವರ್ಷ ಕಳೆದಿದೆ. ಆ ಅನುದಾನವನ್ನು ಕೊಡಿಸಬೇಕು ಎಂದು ಮನವಿ ಮಾಡಿದರು.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಲ್ಯಾಣ ಕರ್ನಾಟಕ ಹಿಂದುಳಿದಿದೆ. ಈ ಸೂಚ್ಯಂಕದಲ್ಲಿ ಏರಿಕೆಯಾಗಲು ಕಲ್ಯಾಣ ಕರ್ನಾಟಕಕ್ಕೆ ಏಮ್ಸ್ ಬರಬೇಕು. ಈಗಾಗಲೇ ರಾಯಚೂರಿಗೆ ಏಮ್ಸ್ ನೀಡಲು ಮನವಿ ಸಲ್ಲಿಸಿದ್ದೇವೆ. ಇದರ ಈಡೇರಿಕೆ ಅಗತ್ಯವಿದೆ. ಈನಿಟ್ಟಿನಲ್ಲಿ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಮನವಿ ಮಾಡಿದರು.

15ನೇ ಹಣಕಾಸು ಆಯೋಗದ ಶಿಫಾರಸು ನೀಡಲಿ: 1971 ಸೆನ್ಸಸ್ ಪರಿಗಣಿಸಿದ್ದರೆ ನಮಗೆ , ನಮ್ಮ ರಾಜ್ಯಕ್ಕೆ ಅನ್ಯಾಯವಾಗಲು ಸಾಧ್ಯವಿಲ್ಲ. 15ನೇ ಹಣಕಾಸು ಆಯೋಗದಲ್ಲಿ ಶಿಫಾರಸ್ಸು ಮಾಡಿರುವ ಮತ್ತು ಬಜೆಟ್‌ನಲ್ಲಿ ಕೇಂದ್ರ ಸರಕಾರವೇ ರಾಜ್ಯಕ್ಕೆ ಘೋಷಿಸಿರುವ ಮೊತ್ತವನ್ನು ಒದಗಿಸಿಕೊಡಬೇಕು. ಇನ್‌ಪುಟ್ ಸಬ್ಸಿಡಿಯಲ್ಲಿ ರಾಜ್ಯಕ್ಕೆ ಅನುದಾನ ಸಮಸ್ಯೆಯಾಗಿದೆ. ಸಮರ್ಪಕವಾಗಿ ಅನುದಾನ ಒದಗಿಸಬೇಕು. ಈ ಎಲ್ಲಾ ಬೇಡಿಕೆ, ಯೋಜನೆ, ಪ್ರಸ್ತಾವನೆಗಳ ಮಂಜೂರಾತಿಗೆ ಮನವಿ ಮಾಡುತ್ತೇನೆ. ಈ ಮನವಿಗಾಗಿ ಈ ಸೌಹಾರ್ದ ಸಭೆ ನಡೆಸಿದ್ದೇವೆ. ರಾಜ್ಯದ ಅಭಿವೃದ್ಧಿ ಒಂದೇ ನಮ್ಮ ಗುರಿ. ಇದರಲ್ಲಿ ರಾಜಕೀಯ, ಟೀಕೆ, ಭಾವನಾತ್ಮಕ ಆರೋಪಗಳ ಅಗತ್ಯವಿಲ್ಲ. ರಾಜ್ಯದ ಅಭಿವೃದ್ಧಿಗೆ ಸೌಹಾರ್ದಯುತವಾಗಿ ಪ್ರಯತ್ನಿಸೋಣ ಎಂದು ಮನವಿ ಮಾಡಿದರು.

ಆಗಬೇಕಿರುವ ಕೆಲಸ ಪಟ್ಟಿ ರವಾನೆ: ಸಿಎಂ

ದೆಹಲಿಗೆ ತೆರಳುವ ಮೊದಲು ಮಾತನಾಡಿದ ಸಿದ್ದರಾಮಯ್ಯ ಅವರು ದೆಹಲಿಯ ಭೇಟಿಯ ವೇಳೆ ನಮ್ಮೊಂದಿಗೆ ಸಚಿವರೂ ಜೊತೆಗೂಡಿದ್ದು, ಪ್ರಧಾನಮಂತ್ರಿ, ಭೂಸಾರಿಗೆ ಸಚಿವರು,ರೈಲ್ವೆ, ನೀರಾವರಿ, ಗೃಹ ಸಚಿವರು ಹಾಗೂ ಹಣಕಾಸು ಸಚಿವರನ್ನು ಭೇಟಿ ಮಾಡುತ್ತೇವೆ. ಗೃಹಸಚಿವರು ಭೇಟಿಗೆ ಇನ್ನೂ ಸಮಯ ನಿಗದಿ ಮಾಡಿಲ್ಲ. ಶೀಘ್ರವೇ ಮಾಡುತ್ತಾರೆ. ನಿತಿನ್ ಗಡ್ಕರಿಯವರು ಸಮಯ ನಿಗದಿ ಮಾಡಿದ್ದಾರೆ. ರಾಜ್ಯದಲ್ಲಿ ಆಗಬೇಕಿರುವ ಕೆಲಸಗಳ ಪಟ್ಟಿ ಕಳುಹಿಸಲಾಗಿದೆ. ಹೊಸ ಸರಕಾರದಿಂದ ಮಂಡಿಸಲಾಗುವ ಬಜೆಟ್ ನಲ್ಲಿ ಕರ್ನಾಟಕ ನಿರೀಕ್ಷೆ ಮಾಡುವ ಕೆಲಸಗಳ ಪಟ್ಟಿಯನ್ನು ಕಂದಾಯ ಸಚಿವರು ಈಗಾಗಲೇ ಮಂಡಿಸಿದ್ದಾರೆ ಎಂದರು.

ದೆಹಲಿಯ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂಸದರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರಿಗೆ ಹಸ್ತಲಾಘವ ನೀಡಿದರು.

ದೆಹಲಿಯ ಖಾಸಗಿ ಹೋಟೆಲ್‌ನಲ್ಲಿ ಸಿಎಂ ನೇತೃತ್ವದಲ್ಲಿ ಸಂಸದರ ಸಭೆ ನಡೆಯಿತು. ಈ ವೇಳೆ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ ಮತ್ತು ವಿ.ಸೋಮಣ್ಣ ಡಿಸಿಎಂ ಡಿ.ಕೆ.ಶಿವಕುಮಾರ್ ಇತರರು ಇದ್ದರು.

ಜವಾಬ್ದಾರಿ ನಿಭಾಯಿಸಲಿದ್ದಾರೆ ರಾಗಾ

ರಾಹುಲ್ ಗಾಂಧಿ ಹಾಗೂ ಪ್ರಧಾನಿಗಳು ಮೊದಲ ಬಾರಿಗೆ ಲೋಕಸಭಾಧ್ಯಕ್ಷರನ್ನು ಒಟ್ಟಿಗೆ ಭೇಟಿ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಪ್ರಧಾನಿಗಳು ಹಾಗೂ ಪ್ರತಿಪಕ್ಷ ನಾಯಕ ಒಟ್ಟಿಗೆ ಹೋಗಿ ಅವರ ಪೀಠದ ಮೇಲೆ ಕುಳ್ಳಿರಿಸಿ ಶುಭಾಶಯ ಹೇಳುವುದು ಮೊದಲಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಅದರಂತೆ ನಡೆದು ಕೊಂಡಿದ್ದಾರೆ. ನರೇಂದ್ರಮೋದಿ ಮೂರನೇ ಬಾರಿಗೆ ಪ್ರಧಾನಿಗಳಾಗಿದ್ದಾರೆ. ರಾಹುಲ್ ಇಡೀ ದೇಶವನ್ನು ಪಾದಯಾತ್ರೆ ಮೂಲಕ ಸುತ್ತಿದ್ದಾರೆ. ಅವರಿಗೆ ದೇಶದ ಸಮಸ್ಯೆಗಳ ಬಗ್ಗೆ ಅರಿವಿದೆ. ಈ ಸಮಸ್ಯೆಗಳನ್ನು ಪ್ರಸ್ತಾಪ ಮಾಡಿ ಜನರ ಧ್ವನಿಯಾಗಿ ಸಮರ್ಥವಾಗಿ ಅವರ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ ಎಂದು ಸಿಎಂ ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ಪ್ರಸ್ತಾಪಿಸಿದ ಪ್ರಮುಖಾಂಶ

- 18172 ಕೋಟಿ ಬರ ಪರಿಹಾರ ಕೇಳಿದ್ದೆವು. ಪೂರ್ತಿ ಬಂದಿಲ್ಲ. ಇದಕ್ಕಾಗಿ ಪ್ರಯತ್ನಿಸುವ ಅಗತ್ಯವಿದೆ.
- ರಾಜ್ಯದ ಕರಾವಳಿ ಭಾಗಗಳ ಅಭಿವೃದ್ಧಿಗಾಗಿ ಉಡಾನ್ ಯೋಜನೆಯಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಈಡೇರಿಸಬೇಕು.
- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಏರ್ ಕಾರ್ಗೋ ಕಾಂಪ್ಲೆಕ್ಸ್ ಆಗಿ ಪರಿಗಣಿಸಲು ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದರಿಂದ ರಫ್ತು ಹೆಚ್ಚಾಗಿ ಆರ್ಥಿಕ ಚಟುವಟಿಕೆ ವೇಗ ಸಿಗಲಿದೆ.
- ಮೈಸೂರು ಅಥವಾ ಹಾಸನಕ್ಕೆ ಮತ್ತೊಂದು ಐಐಟಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದು ಈಡೇರಿಸಬೇಕಾಗಿದೆ.
- ಕಸ್ತೂರಿ ರಂಗನ್ ವರದಿ ಸಂಪೂರ್ಣವಾಗಿ ತಿರಸ್ಕರಿಸಲು ಮನವಿ ಮಾಡಿದ್ದೇವೆ. ಇದನ್ನು ಕೂಡಲೇ ಅಂಗೀಕರಿಸಬೇಕು.
- ರಾಜ್ಯ ರೈಲ್ವೇ ಸಂಪರ್ಕದಲ್ಲಿ ಹಿಂದುಳಿದಿದೆ. ಆದ್ದರಿಂದ ಆದ್ಯತೆ ಮೇಲೆ ರಾಜ್ಯಕ್ಕೆ ಹೆಚ್ಚು ಅನುದಾನ ಒದಗಿಸಿ ರೈಲ್ವೇ ಸಂಪರ್ಕ ಹೆಚ್ಚಿಸಲು ಆದ್ಯತೆ ಮೇಲೆ ಹೆಚ್ಚಿನ ಅನುದಾನ ನೀಡಬೇಕು
- ಗ್ರಾಮ ಸಡಕ್ ಯೋಜನೆ ಇತರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಹಿಂದುಳಿದಿದೆ. ಇದನ್ನು ಸರಿದೂಗಿಸಬೇಕಾಗಿದೆ.

ಸಮಾಚಾರ ಸಣ್ಣದಲ್ಲ

ಹೃದಯಾಘಾತಕ್ಕೆ ಯುವತಿ ಬಲಿ

ಮಡಿಕೇರಿ: ಕೊಡಗು ಜಿಲ್ಲೆಯ ನೆಲಜಿ ಗ್ರಾಮದಲ್ಲಿ ಯುವತಿಯೊಬ್ಬಳು ಹೃದಯಾಘಾತದಿಂದ ಮೃತ ಪಟ್ಟಿರುವ ಘಟನೆ ನಡೆದಿದೆ. ಮಡಿಕೇರಿ ತಾಲ್ಲೂಕಿನ ನೆಲಜಿ ಗ್ರಾಮದ ಮಣವಟ್ಟಿರ ಪೊನ್ನಪ್ಪ ಎಂಬುವವರ ಪುತ್ರಿ ನಿಲಿಕಾ ಪೊನ್ನಪ್ಪ (24) ಮೃತ ಯುವತಿ. ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಉದ್ಯೋಗದಲ್ಲಿದ್ದ ಇವರು ಗುರುವಾರ ಬೆಳಿಗ್ಗೆ ಕರ್ತವ್ಯಕ್ಕೆ ತೆರಳಲೆಂದು ಮನೆಯಲ್ಲಿ ತಯಾರಿ ನಡೆಸುತ್ತಿದ್ದರು. ಈ ಸಂದರ್ಭ ಹೃದಯಾಘಾತಕ್ಕೊಳಗಾಗಿ ಸ್ಥಳದಲ್ಲೇ ಮೃತಪಟ್ಟರು ಎಂದು ತಿಳಿದುಬಂದಿದೆ. ಪುತ್ರಿಯನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.

ಸೋಲು ತಾತ್ಕಾಲಿಕ ಹೋರಾಟ ನಿರಂತರ

ಬೆಳಗಾವಿ: ಲೋಕಸಭಾ ಚುನಾವಣೆಯ ಸೋಲಿನಿಂದ ಯಾರೂ ಧೈರ್ಯಗೆಡುವ ಅಗತ್ಯ ಇಲ್ಲ. ಸೂರ್ಯನಿಗೂ ಗ್ರಹಣ ಹಿಡಿಯುತ್ತದೆ. ಅದು ತಾತ್ಕಾಲಿಕ ಅಷ್ಟೆ. ಸಂಘಟನೆ ಮತ್ತು ಹೋರಾಟ ನಿರಂತರವಾಗಿರಲಿದೆ. ಅದರ ಮೂಲಕ ನಮ್ಮ ಶಕ್ತಿಯನ್ನು ಮರಳಿ ಪಡೆದುಕೊಳ್ಳೋಣ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ. ಹಲಗಾದ ಸುವರ್ಣ ಗಾರ್ಡನ್ ಕಾರ್ಯಾಲಯದಲ್ಲಿ ಹಲಗಾ ಮತ್ತು ಹಿರೇಬಾಗೇವಾಡಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯ ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, ಯಾರಿಗೂ ಹಿಂಜರಿಕೆ ಬೇಡ. ನಾವು ಯಾರಿಗೂ ಮೋಸ ಮಾಡಿಲ್ಲ. ಯಾರ ಆಸ್ತಿ ಕಬಳಿಸಿಲ್ಲ, ಎಲ್ಲರ ಕೆಲಸ ಮಾಡಿಕೊಟ್ಟಿದ್ದೇನೆ, ಕ್ಷೇತ್ರದ ಜನರನ್ನು ಹೃದಯದಿಂದ ಪ್ರೀತಿಸಿದ್ದೇನೆ ಎಂದರು.

ಹನಿಟ್ರ್ಯಾಪ್‌ಗೆ ನಾನು ಒಳಗಾಗಿಲ್ಲ: ಹರೀಶ್

ಮೈಸೂರು: ನನಗೆ ಯಾರೂ ಹನಿಟ್ರ್ಯಾಪ್ ಮಾಡಲು ಸಾಧ್ಯವಿಲ್ಲ, ಯಾವುದೇ ಹನಿಟ್ರ್ಯಾಪ್‌ಗೆ ಒಳಗಾಗುವು ದಿಲ್ಲ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಹೇಳಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಲವರು ಹನಿಟ್ರ್ಯಾಪ್ ಬಗ್ಗೆ ನನ್ನ ಬಳಿ ಬಂದು ತಮ್ಮ ಕಷ್ಟ ಹೇಳಿಕೊಂಡರು. ಹೀಗಾಗಿ ಅವರ ಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಿದ್ದೇನೆ ಎಂದರು.

{ಆರ್.ಅಶೋಕ್} ಪ್ರತಿಪಕ್ಷ ನಾಯಕ

ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿವೆ. ಎಲ್ಲರ ಆರೋಗ್ಯ ಕಾಪಾಡುವ ಅಧಿಕಾರಿಗಳಿಗೆ ಡೆಂಘೀ ಬಂದಿದೆ ಎಂದರೆ ಸರಕಾರದಲ್ಲಿ ಎಷ್ಟರಮಟ್ಟಿಗೆ ಇವರು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗಲಿದೆ. ಮತ್ತೊಂದೆಡೆ, ಕಲುಷಿತ ನೀರು ಕುಡಿದು ಜನರು ಸಾವನ್ನಪ್ಪಿದ್ದಾರೆ. ಆದರೆ ನಿರ್ಲಕ್ಷ್ಯ ವಹಿಸುತ್ತಿದೆ. ಇದಕ್ಕಾಗಿ ಜನತೆ ಡೆಂಘೀ, ಕಾಲರಾಗೆ ಬಲಿಯಾಗುತ್ತಿದ್ದಾರೆ.

ಆರ್.ಡಿ. ಪಾಟೀಲ್ ಜಾಮೀನು ಅರ್ಜಿ ವಜಾ

ಕಲಬುರಗಿ: ಎಸ್.ಡಿ.ಎ ಮತ್ತು ಎಫ್.ಡಿ.ಎ ಪರೀಕ್ಷೆಗಳ ಅಕ್ರಮದ ಸೂತ್ರಧಾರ ಆರ್.ಡಿ ಪಾಟೀಲ್ ಸಲ್ಲಿಸಿದ ಜಾಮೀನು ಅರ್ಜಿ ವಜಾಗೊಂಡಿದೆ.

2023ರ ಅಕ್ಟೊಬರ್ ನಲ್ಲಿ ನಡೆದಿದ್ದ ಎಸ್‌ಡಿಎ ಮತ್ತು ಎಫ್‌ಡಿಎ ನೇಮಕ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ್ದ ಆರ್.ಡಿ ಪಾಟೀಲ್ ಸೇರಿ 10 ಮಂದಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಜಿಲ್ಲಾ ಪ್ರಧಾನ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಎಸ್. ನಾಗಶ್ರೀ ತಿರಸ್ಕರಿಸಿದ್ದಾರೆ.

ಸಿದ್ದರಾಮಯ್ಯ ದೊಡ್ಡ ಮನಸು ಮಾಡಿ ಸೀಟು ಬಿಟ್ಟುಕೊಡಲಿ: ಚಂದ್ರಶೇಖರ ಸ್ವಾಮೀಜಿ

ಡಿಕೆಶಿಗೆ ಸಿಎಂ ಸ್ಥಾನ ಕೊಡಿ: ವಿವಾದ

ಬೆಂಗಳೂರು: ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿಯೇ ಸಿಎಂ ಸ್ಥಾನವನ್ನು ಬಿಟ್ಟುಕೊಡುವಂತೆ ಒಕ್ಕಲಿಗ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿಯ ಹೇಳಿಕೆ ಇದೀಗ ವಿವಾದಕ್ಕೆ ಕಾರಣವಾಗಿದ್ದು, ಪರ-ವಿರೋಧ ಚರ್ಚೆಗೆ ಗ್ರಾಸವಾಗಿದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿಯ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ವೇದಿಕೆಯಲ್ಲಿರುವಾಗಲೇ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರು, 'ಎಲ್ಲರೂ ಮುಖ್ಯಮಂತ್ರಿಗಳಾಗಿದ್ದಾರೆ. ಡಿ.ಕೆ.ಶಿವಕುಮಾರ್ ಅರವರಿಗೆ ಅವಕಾಶ ಸಿಕ್ಕಿಲ್ಲ. ಹಾಲಿ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಟ್ಟು ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಬೇಕು' ಎಂದು ಆಗ್ರಹಿಸಿದರು.

ಈ ಹೇಳಿಕೆಯ ಬೆನ್ನಲ್ಲೇ ಸ್ವಾಮೀಜಿಗಳ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಹೈಕಮಾಂಡ್ ತೀರ್ಮಾನ

ಚಂದ್ರಶೇಖರ ಸ್ವಾಮೀಜಿಗಳ ಹೇಳಿಕೆಗೆ ಕಾರ್ಯಕ್ರಮದ ಬಳಿಕ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಿಎಂ ಅಧಿಕಾರ ಹಸ್ತಾಂತರ ಹೈಕಮಾಂಡ್‌ನ ನಿರ್ಧಾರ. ನಾವು ಪಕ್ಷದ ವರಿಷ್ಠರು ನೀಡುವ ಸೂಚನೆಯಂತೆ ನಡೆದುಕೊಳ್ಳುತ್ತೇವೆ ಎಂದರು.

ಸಿದ್ದು 10 ವರ್ಷ ಸಿಎಂ

ಸಚಿವ ಕೆ.ಎನ್. ರಾಜಣ್ಣ ಮಾತನಾಡಿ, ಮುಖ್ಯಮಂತ್ರಿ ಸ್ಥಾನದ ಬಗ್ಗೆ ಸ್ವಾಮೀಜಿ ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಸದುದ್ದೇಶದಿಂದ ಹೇಳಿದ್ದಾರೋ ದುರುದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಮುಖ್ಯಮಂತ್ರಿ ಹುದ್ದೆ ಖಾಲಿಯಿಲ್ಲ ಎಂದರು.

ಸರಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ರಾಜ್ಯದ ಬಾಕಿ ಕೈಗಾರಿಕಾ ಯೋಜನೆಗಳ ಬಗ್ಗೆ ಚರ್ಚಿಸಿದರು

13 ತಪ್ಪಿತಸ್ಥರಿಗೆ ಜೈಲುಶಿಕ್ಷೆ, ದಂಡ | ಬೆಳಗಾವಿ ಕೋರ್ಟ್ ತೀರ್ಪು

ಹೆಸ್ಕಾಂ ಅಧಿಕಾರಿ ವಿರುದ್ಧ ಸುಳ್ಳುದೂರು

ಬೆಳಗಾವಿ: ತೀವ್ರ ಕುತೂಹಲ ಮೂಡಿಸಿದ್ದ ಬೆಳಗಾವಿ ಹೆಸ್ಕಾಂ ಅಧಿಕಾರಿ ವಿರುದ್ಧದ ಸುಳ್ಳು ಅತ್ಯಾಚಾರ ಆರೋಪ ಪ್ರಕರಣದಲ್ಲಿ ಎಲ್ಲ 13 ತಪ್ಪಿತಸ್ಥರಿಗೆ 3 ವರ್ಷ 6 ತಿಂಗಳು ಜೈಲುವಾಸ ಮತ್ತು ತಲಾ 86 ಸಾವಿರ ರು. ದಂಡ ವಿಧಿಸಿ ಬೆಳಗಾವಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗುರುವಾರ ಮಹತ್ವದ ತೀರ್ಪು ನೀಡಿದೆ.

ಬೆಳಗಾವಿಯ ಹೆಸ್ಕಾಂನ ಸಹಾಯಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಬಿ.ವಿ. ಸಿಂಧು, ಹೆಸ್ಕಾಂನ ಬೆಳಗಾವಿ ವಿಭಾಗದ ಅಧೀಕ್ಷಕ ಅಭಿಯಂತರ ತುಕಾರಾಮ ಮಜ್ಜಗಿ ತನಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು 2014 ನವೆಂಬರ್ 19ರಂದು ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತುಕಾರಾಮ ಮಜ್ಜಗಿ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಆದರೆ ವಿಚಾರಣೆ ವೇಳೆ, ವಿದ್ಯುತ್ ನಿಗಮದ ಅಧಿಕಾರಿ ವಿರುದ್ಧ ಸುಳ್ಳುದೂರು ನೀಡಿದ್ದು ಸಾಬೀತಾಗಿತ್ತು.

ಸಿಕ್ಕಿಬಿದ್ದ ಹೆಸ್ಕಾಂನ ಸಿಬ್ಬಂದಿ : ಸಹಾಯಕ ಎಂಜಿನಿಯರ್ ಬಿ.ವಿ.ಸಿಂಧು, ಹೆಸ್ಕಾಂ ಸಹಾಯಕ ಮಾರ್ಗದಾಳು ನಾಥಾಜಿ ಪಾಟೀಲ, ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ಅಜಿತ್ ಪೂಜಾರಿ, ಸಹಾಯಕ ಮಾರ್ಗದಾಳು ಮಲ್ಲಸರ್ಜ ಶಹಪುರಕರ, ಕಿರಿಯ ಎಂಜಿನಿಯರ್ ಸುಭಾಷ ಹಲ್ಲೊಳ್ಳಿ, ಮಾರ್ಗದಾಳು ಈರಪ್ಪಾ ಪತ್ತಾರ, ಮೇಲ್ವಿಚಾರಕ ಮಲ್ಲಿಕಾರ್ಜುನ ರೇಡಿಹಾಳ, ಹಿರಿಯ ಸಹಾಯಕ ಭೀಮಪ್ಪ ಗೋಡಲಕುಂದರಗಿ, ಸ್ಟೇಷನ್ ಅಟೆಂಡರ್ ಗ್ರೇಡ್-2 ರಾಜೇಂದ್ರ ಹಳಿಂಗಳಿ, ಲೆಕ್ಕಾಧಿಕಾರಿ ಸುರೇಶ ಕಾಂಬಳೆ, ಲೈನ್‌ಮನ್‌ಗಳಾದ ಈರಯ್ಯ ಹಿರೇಮಠ, ಮಾರುತಿ ಪಾಟೀಲ ಹಾಗೂ ನಿವೃತ್ತ ಸಹಾಯಕಿ ದ್ರಾಕ್ಷಾಯಣಿ ನೇಸರಗಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆಂಬ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಎಲ್ಲ 13 ಮಂದಿ ದೋಷಿಗಳು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಲ್. ವಿಜಯಲಕ್ಷ್ಮೀದೇವಿ ಅವರು ಮಂಗಳವಾರ ನಿರ್ಣಾಯಕ ತೀರ್ಪು ನೀಡಿದ್ದರು.

ಸಚಿವ ಚಲುವರಾಯಸ್ವಾಮಿ ಹೇಳಿಕೆ

ಸಿಎಂ ಬದಲಾವಣೆ ಸಮಯವೂ ಬರುತ್ತದೆ

ಧಾರವಾಡ: ಯಾವ ಸಮಯದಲ್ಲಿ ಯಾರು ಸಿಎಂ ಆಗಬೇಕು ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಂಪೇಗೌಡ ಜಯಂತಿಯ ವೇದಿಕೆ ಕಾರ್ಯಕ್ರಮದಲ್ಲಿ ಚಂದ್ರ ಶೇಖರ ಸ್ವಾಮೀಜಿ ಅವರು ಸಿಎಂ ಸ್ಥಾನವನ್ನು ಡಿ.ಕೆ.ಶಿವಕುಮಾರ್‌ಗೆ ಬಿಟ್ಟುಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದಕ್ಕೆ ಪ್ರತಿಕ್ರಿಯೆ ನೀಡಿದರು. ಸಿಎಂ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಎರಡು ವರ್ಷಕ್ಕೆ ಸಿಎಂ ಬದಲಾವಣೆಯಾಗಬೇಕೋ ಒಂದು ವರ್ಷಕ್ಕೆ ಬದಲಾವಣೆಯಾಗಬೇಕೋ ಎಂಬುದು ಹೈಕಮಾಂಡ್ ವೇದಿಕೆಯಲ್ಲಿ ನಿರ್ಣಯವಾಗುತ್ತದೆ. ಇದರ ಬಗ್ಗೆ ಯಾರು ಹೇಳಿಕೆ ಕೊಟ್ಟರೂ ಅಷ್ಟೇ. ಯಾವ ಶಾಸಕರು ಹೇಳಿಕೆ ಕೊಟ್ಟರೂ ಅದು ಅವರ ವೈಯಕ್ತಿಕ ವಿಚಾರ ಎಂದು ಅವರು ಸ್ಪಷ್ಟಪಡಿಸಿದರು.

> ರಾಜ್ಯದಲ್ಲಿ ನಮಗೆ 136 ಶಾಸಕರು ಇದ್ದಾರೆ ಯಾವ ಸಮಯದಲ್ಲಿ ಯಾರು ಸಿಎಂ, ಮಂತ್ರಿಯಾಗಬೇಕೋ ಆ ಸಮಯದಲ್ಲಿ ಅದು ಆಗೇ ಆಗುತ್ತದೆ. ಚನ್ನಪಟ್ಟಣ ಉಪಚುನಾವಣೆಯನ್ನು ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಕ್ಷದವರು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ನಾವು ಕೂಡ ಉಪಚುನಾವಣೆಯನ್ನು ಅಷ್ಟೇ ಹುಮ್ಮಸಿನಿಂದ ಕಾಂಗ್ರೆಸ್ ಹಿರಿಯರೊಂದಿಗೆ ಚರ್ಚಿಸಿ ಎದುರಿಸುತ್ತೇವೆ.
> -ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಕೆಂಪೇಗೌಡರ ದಿನಾಚರಣೆಯಲ್ಲಿ ಪ್ರತಿಪಕ್ಷ ನಾಯಕ ಅಶೋಕ ಟೀಕೆ

ಮುಖ್ಯಮಂತ್ರಿಯಿಂದ ಕಾಟಾಚಾರದ ಸಭೆ

ಬೆಂಗಳೂರು: ಕೇಂದ್ರ ಸರಕಾರದೊಂದಿಗೆ ಯಾವಾಗಲೂ ಸಂಘರ್ಷ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ಸಂಸದರೊಂದಿಗೆ ಕಾಟಾಚಾರದ ಸಭೆ ನಡೆಸುತ್ತಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

> ನಾಡಪ್ರಭು ಕೆಂಪೇಗೌಡರು ಯಾರೋಬ್ಬರ ಸ್ವತ್ತಲ್ಲ. ಅವರು ಎಲ್ಲ ಸಮುದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗಿದ್ದರು. ಆದರೆ ಕಾಂಗ್ರೆಸ್ ಕೆಂಪೇಗೌಡರ ಸಮುದಾಯವನ್ನೇ ಒಂದಾಗಿರಲು ಬಿಡುತ್ತಿಲ್ಲ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಒಕ್ಕಲಿಗ ಸಮುದಾಯದ ಪ್ರಶ್ನಾತೀತ ನಾಯಕರು. ಕೆಂಪೇಗೌಡ ಜಯಂತಿಗೆ ಅವರನ್ನು ಆಹ್ವಾನಿಸದೆ ದ್ವೇಷದ ರಾಜಕಾರಣಕ್ಕೆ ವೇದಿಕೆಯನ್ನಾಗಿಸಿದೆ. ಶಾಲಾ ಪಠ್ಯಗಳಲ್ಲಿ ಹೆಚ್ಚಾಗಿ ಕೆಂಪೇಗೌಡರ ಚರಿತ್ರೆ ದಾಖಲಾದರೆ ಮಕ್ಕಳಿಗೆ ಹೆಚ್ಚು ಮಾಹಿತಿ ದೊರೆಯುತ್ತದೆ.
> -ಆರ್. ಅಶೋಕ್, ಪ್ರತಿಪಕ್ಷ ನಾಯಕ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರದ ಜತೆ ರಾಜ್ಯಸರಕಾರ ಯಾವಾಗಲೂ ಸೌಹಾರ್ದತೆ ಬೆಳೆಸಿಕೊಳ್ಳಬೇಕೇ ಹೊರತು ಹೀಗೆ ಸಂಘರ್ಷ ಮಾಡಿಕೊಳ್ಳಲು ಇದು ಭಾರತ - ಪಾಕಿಸ್ತಾನ ಅಲ್ಲ. ಕರ್ನಾಟಕದಲ್ಲಿ ಯಾವುದೇ ಪಕ್ಷ ದೀರ್ಘವಾಗಿ ಆಡಳಿತ ನಡೆಸದೆ ಬದಲಾಗುತ್ತಲೇ ಇರುತ್ತದೆ. ಕೇಂದ್ರ ಸರಕಾರ ನೀಡಿರುವ ಹಣವನ್ನೇ ಖರ್ಚು ಮಾಡದ ರಾಜ್ಯ ಸರಕಾರದ ಕ್ರಮದಿಂದ ಮುಂದೆ ಬೆಲೆ ಏರಿಕೆಗೆ ಜನ ತಯಾರಾಗಿರಬೇಕು. ಈ ಭ್ರಷ್ಟ, ದುಷ್ಟ ಸರಕಾರದ ವಿರುದ್ಧ ಹೋರಾಟ ಮಾಡಿ ಈಗಾಗಲೇ ಒಬ್ಬ ಸಚಿವರನ್ನು ಬೀಳಿಸಿದ್ದು, ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಬೀಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು. ಪೆಟ್ರೋಲ್ ದರ, ಹಾಲಿನ ದರ, ಸ್ಟಾಂಪ್ ಡ್ಯೂಟಿ, ಹೀಗೆ ಎಲ್ಲದರ ಮೇಲಿನ ಏರಿಕೆಯನ್ನು ಕಾಂಗ್ರೆಸ್ ನಾಯಕರು ಸಮರ್ಥಿಸಿಕೊಳ್ಳುತ್ತಿದ್ದು, ಬಡವರು ಕುಡಿಯುವ ಮದ್ಯದ ದರ ಏರಿಸಿ, ಶ್ರೀಮಂತರ ಮದ್ಯಗಳ ದರ ಇಳಿಕೆ ಮಾಡಿರುವ ಸರಕಾರ ಇನ್ನೂ ಅಧಿಕಾರದಲ್ಲಿ ಇದ್ದರೆ ಕರ್ನಾಟಕದ ಹಣ ಕೊಳ್ಳೆ ಹೊಡೆದು ದೆಹಲಿಗೆ ತೆಗೆದುಕೊಂಡು ಹೋಗುತ್ತದೆ. ಇವರೆಲ್ಲರೂ ಅಲಿಬಾಬ ಮತ್ತು ನಲವತ್ತು ಕಳ್ಳರು ಎಂದರು.

ಮೇಖ್ರಿ ವೃತ್ತದಲ್ಲಿ ಇರುವ ಕೆಂಪೇಗೌಡರ ಪ್ರತಿಮೆ ಬಳಿ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಡಿಸಿಎಂ ಅಶ್ವತ್ಥ್ ನಾರಾಯಣ ಚಾಲನೆ ನೀಡಿದರು.

ಯಾರು ಅರ್ಜಿ ನೀಡಿಲ್ಲ

ದೇಶಕ್ಕೆ ಅರ್ಥಶಾಸ್ತ್ರದ ಪಾಠ ಹೇಳುವ ಸಿ.ಎಂ. ಸಿದ್ದರಾಮಯ್ಯಗೆ ಹಾಲು ಹೆಚ್ಚು ಮಾಡಿ ಎಂದು ಯಾರು ಅರ್ಜಿ ನೀಡಿಲ್ಲ. 50 ಮಿಲಿ ಲೀಟರ್ ಹಾಲು ಇಳಿಕೆ ಮಾಡಿ ಎರಡು ರೂಪಾಯಿ ಕಡಿಮೆ ಮಾಡಲಿ. ಮುಖ್ಯಮಂತ್ರಿಗೆ ಸಹಾಯ ಮಾಡುವ ಬುದ್ಧಿ ಇಲ್ಲ, ಆದರೆ ದುಡ್ಡು ಹೊಡೆಯುವ ಬುದ್ಧಿ ಇದೆ. ಜನರು ಸರಕಾರಕ್ಕೆ ಕಪಾಳಕ್ಕೆ ಬಾರಿಸಬೇಕಿದ್ದು, 15 ಬಜೆಟ್ ಮಂಡಿಸಿದ ಸಿದ್ದರಾಮಯ್ಯನವರ ಅರ್ಥಶಾಸ್ತ್ರ ಇದೇ ಎಂದು ವಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು.

ಸ್ವಾಮೀಜಿ ಹೇಳಿದ್ರೆ ಸಿಎಂ ಬದಲಾವಣೆ ಮಾಡುವುದಿಲ್ಲ

ದಾವಣಗೆರೆ: ಸ್ವಾಮೀಜಿ ಹೇಳಿದ್ರೆ ಸಿಎಂ ಬದಲಾವಣೆ ಮಾಡಲು ಬರುವುದಿಲ್ಲ ಎಂದು ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಚಂದ್ರಶೇಖರ ಸ್ವಾಮೀಜಿಯವರಿಗೆ ತಿರುಗೇಟು ಕೊಟ್ಟಿದ್ದಾರೆ. ದಾವಣಗೆರೆಯಲ್ಲಿ ಚಂದ್ರಶೇಖರ ಶ್ರೀಗಳ ಸಿಎಂ ಬದಲಾವಣೆ ಕುರಿತ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸ್ವಾಮೀಜಿ ಹೇಳಿದ್ರೆ ಮುಖ್ಯಮಂತ್ರಿ ಬದಲಾವಣೆ ಅಂತ ಯಾರು ಹೇಳಿದ್ರು..? ಸಿಎಂ ಬದಲಾವಣೆ ಮಾಡಲ್ಲ, ಹೈಕಮಾಂಡ್ ಹೇಳಿದಂತೆ ಆಗುತ್ತೆ. ಸಿದ್ದರಾಮಯ್ಯ ಸಿಎಂ ಆಗಿ ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಇದಕ್ಕೆ ಹೈಕಮಾಂಡ್ ಸರಿಯಾದ ಉತ್ತರ ನೀಡುತ್ತದೆ ಎಂದರು. ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಸಚಿವರು ಬದಲಾವಣೆ ಆಗಬೇಕೆಂದು ಪದೇ ಪದೇ ಹೇಳಿಕೆ ನೀಡುತ್ತಿರುವ ವಿಚಾರವಾಗಿ ಯಾರೋ ಚಾರ್ಜ್ ಮಾಡಿ, ಹೀಗೆ ಹೇಳಿ ಅಂತಾ ಹೇಳಿರಬೇಕು ಎಂದರು.

> ಜಾತಿವಾರು ಡಿಸಿಎಂ ಕೇಳುತ್ತಿರುವ ವಿಚಾರವಾಗಿ ಪ್ರತಿಕ್ರಿಯಿಸಿ, ಅದೆಲ್ಲಾ ಸುಮ್ನೆ ಆಗಲ್ಲ, ಮಾಡಲ್ಲ. ಡಿಸಿಎಂ ಮಾಡಿದ್ದರೆ ಕಾಂಗ್ರೆಸ್ ಹೈಕಮಾಂಡ್ ಮಾಡಬೇಕು, ಸಿಎಂ ಬದಲಾವಣೆ ಆಗಬೇಕು ಅಥವಾ ಆಗಬಾರದು ಎಂಬುದನ್ನು ನಾನು ಹೇಳಲ್ಲ. ಅದಕ್ಕೆಲ್ಲ ಹೈಕಮಾಂಡ್ ಇದೆ. ಸ್ವಾಮೀಜಿ ಹೇಳಿರಬಹುದು. ಅವರು ಹೇಳಿದಂತೆ ಮಾಡೋಕೆ ಆಗುತ್ತಾ? ಹೈಕಮಾಂಡ್ ತೀರ್ಮಾನವೇ ನನ್ನ ತೀರ್ಮಾನ
> -ಶಾಮನೂರು ಶಿವಶಂಕರಪ್ಪ, ಶಾಸಕ

ಸಂಪಾದಕೀಯ

ಎಲ್‌ಕೆಜಿ-ಯುಕೆಜಿಗೆ ಅವಸರ ಬೇಡ

ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಹೆಸರಿನಲ್ಲಿ ರಾಜ್ಯ ಸರ್ಕಾರವು ಪ್ರಸಕ್ತ (2024-25) ಶೈಕ್ಷಣಿಕ ಸಾಲಿನಿಂದಲೇ 2,786 ಎಲ್‌ಕೆಜಿ-ಯುಕೆಜಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ನಿರ್ಧರಿಸಿದೆ. ಹಾಲಿ ಇರುವ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಈ ತರಗತಿಗಳನ್ನು ಆರಂಭಿಸಲು ಸರಕಾರ ಉದ್ದೇಶಿಸಿದೆ.ಮೇಲ್ನೋಟಕ್ಕೆ ಸರಕಾರದ ಈ ನಿರ್ಧಾರ ಸರಿಯಾಗಿಯೇ ಇದೆ. ರಾಜ್ಯಾದ್ಯಂತ ಪೋಷಕರಿಂದ ಎಲ್‌ಕೆಜಿ-ಯುಕೆಜಿ ತರಗತಿಗಳಿಗೆ ಬೇಡಿಕೆ ಇದೆ. ತಮ್ಮ ಮಕ್ಕಳನ್ನು ಇಂತಹ ತರಗತಿಗಳಿಗೆ ಸೇರಿಸಲೇಬೇಕೆಂಬ ಕಾರಣದಿಂದ ದುಬಾರಿ ಫೀಸು ಕೊಟ್ಟು ಖಾಸಗಿ ಶಾಲೆಗಳಿಗೆ ದಾಖಲು ಮಾಡುತ್ತಿದ್ದಾರೆ. ಸರಕಾರಿ ಶಿಕ್ಷಣ ವ್ಯವಸ್ಥೆಯ ಉಳಿವಿನ ದೃಷ್ಟಿಯಿಂದ ಎಲ್‌ಕೆಜಿ, ಯುಕೆಜಿ ಹೆಸರಿನಲ್ಲಿ ತರಗತಿಗಳನ್ನು ಆರಂಭಿಸುವುದು ಅನಿವಾರ್ಯವಾಗಿದೆ. ಆದರೆ ಇಲ್ಲಿ ಸರಕಾರದ ಮುಂದೆ ಹಲವು ಸವಾಲುಗಳಿವೆ. ಉದ್ದೇಶಿತ ಎಲ್‌ಕೆಜಿ- ಯುಕೆಜಿ ತರಗತಿಗಳಿಗೆ ಪಾಠ ಮಾಡುವವರಾರು? ಹಾಲಿ ಇರುವ ಅಂಗನವಾಡಿ ಶಿಕ್ಷಕಿಯರು ಪಾಠ ಮಾಡಲು ಮಾಡಲು ಸಮರ್ಥರೇ? ಇವರಿಗೆ ಈ ನಿಟ್ಟಿನಲ್ಲಿ ತರಬೇತಿ ನೀಡುವ ಕೆಲಸ ನಡೆಯಲಿದೆಯೇ? ಇವರ ಬದಲು ಗೌರವಧನದ ಆಧಾರದಲ್ಲಿ ಎಸ್‌ಡಿಎಂಸಿಯವರು ಶಿಕ್ಷಕಿಯರನ್ನು ನೇಮಿಸಲು ಅವಕಾಶವಿದೆಯೇ, ಈ ತರಗತಿಗಳಿಗೆ ಪಠ್ಯಕ್ರಮ ಸಿದ್ಧವಿದೆಯೇ? ಹಾಲಿ ಇರುವ ಅಂಗನವಾಡಿಗಳ ಭವಿಷ್ಯವೇನು? ಇರುವ ಒಂದೇ ಕೊಠಡಿಯಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ನಡೆಸುವ ಬಗೆ ಹೇಗೆ? ಯುಕೆಜಿಯಲ್ಲಿ ಕಲಿತ ಮಕ್ಕಳು ಮತ್ತೆ ಇಂಗ್ಲಿಷ್ ಶಾಲೆಗಳೇ ಬೇಕು ಎಂದರೆ ಎಲ್ಲಿಗೆ ಹೋಗಬೇಕು? ಹಾಲಿ ಇರುವ ಕನ್ನಡ ಮಾಧ್ಯಮ ಶಾಲೆಗಳೆಲ್ಲವನ್ನೂ ಸರಕಾರ ಆಂಗ್ಲ ಮಾಧ್ಯಮಕ್ಕೆ ಬದಲಾಯಿಸುವುದೇ? ಇಂಗ್ಲಿಷ್ ಕಲಿಕೆಗಾಗಿ ಗ್ಲೋಬಲ್ ಟೆಂಡರ್ ಕರೆದು ಯಾವುದಾದರೂ ಖಾಸಗಿ ಕಂಪನಿ ಮೂಲಕ ಶಿಕ್ಷಕರನ್ನು ನೇಮಿಸುವ ಉದ್ದೇಶವಿ ದೆಯೇ? ಇಂದಲ್ಲ, ನಾಳೆ ಇಂತಹ ಹತ್ತು ಹಲವು ಪ್ರಶ್ನೆಗಳಿಗೆ ಸರಕಾರ ಉತ್ತರ ನೀಡ ಲೇಬೇಕಿದೆ. ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನೊಳಗೊಂಡ ತಜ್ಞರ ಸಮಿತಿ ರಚಿಸಿ ಅವರ ಶಿಫಾರಸ್ಸು ಹಾಗೂ ಮಾರ್ಗಸೂಚಿಗಳ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲಿಯವರೆಗೆ ಈಗಾಗಲೇ ಮಂಜೂರಾದ 2,786 ಶಾಲೆಗಳನ್ನು ಹೊರತುಪಡಿಸಿ ಉಳಿದೆಡೆ ಎಲ್‌ಕೆಜಿ ಶಾಲೆಗಳನ್ನು ಆರಂಭಿಸುವುದಿಲ್ಲ ಎಂದು ಸರಕಾರ ತಿಳಿಸಿದೆ. ಇಲ್ಲಿ ಅವಸರದ ತೀರ್ಮಾನಗಳನ್ನು ಕೈಗೊಂಡು ಶಿಕ್ಷಣ ಕ್ಷೇತ್ರವನ್ನು ಮತ್ತಷ್ಟು ಗೊಂದಲಕ್ಕೆ ತಳ್ಳಬಾರದು. ಸರಕಾರದ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು.

ಸೊಂಪಾದಕೀಯ

ಡಿಗ್ರಿ ಬೇರೆ, ಕೋರ್ಸ್ ಬೇರೆ!!

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಂತೂ ಸಿಕ್ಕಾಪಟ್ಟೆ ಕ್ರಾಂತಿ ಆಗುತ್ತಿದೆ. ಹಳೆಯ ಕಾಲದಲ್ಲಿ ಸ್ಕೂಲು, ಕಾಲೇಜಿಗೆ ಹೋದೆ, ಬಂದೆ, ಪರೀಕ್ಷೆ ಬರೆದೆ ಪಾಸಾದೆ, ಇಷ್ಟಕ್ಕೆ ಸೀಮಿತವಾಗಿದ್ದ ವಿದ್ಯಾಭ್ಯಾಸ ಈಗ ಬೇರೆಯದ್ದೇ ಹಂತ ತಲುಪಿದೆ. ಈಗ ಶಾಲೆಗಳು ಸಾಕಾಗುತ್ತಿಲ್ಲ, ಟ್ಯೂಷನ್‌ಗಳು ಬೇಕಾಗಿವೆ. ಹಾಗೆಯೇ ಈಗ ಡಿಗ್ರಿಗಳು ಸಾಕಾಗ್ತಾ ಇಲ್ಲ, ಹೊಸ ಕೋರ್ಸ್‌ಗಳನ್ನು ಕಲಿಯಬೇಕಿದೆ. ಹಾಗಾಗಿಯೇ ಇಂದು ದೇಶದಲ್ಲಿ ಗಲ್ಲಿಗೊಂದು ಕೋಚಿಂಗ್ ಸೆಂಟರ್‌ಗಳು ಕಾಣಬರುತ್ತವೆ. ಇನ್ನು ಆನ್‌ಲೈನ್‌ನಲ್ಲೂ ಕೋರ್ಸ್‌ಗಳದ್ದೇ ಕಾರುಬಾರು. ವಿದ್ಯಾರ್ಥಿಗಳು ಇಂದು ಹೆಚ್ಚು ನಂಬಿಕೊಂಡಿರೋದು ಈ ಕೋಚಿಂಗ್ ಕ್ಲಾಸ್‌ಗಳನ್ನೇ. ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆಯೋ ಸೆಂಟರ್‌ಗಳಾಗಿವೆ. ಈಗ ಎಲ್ಲರೂ ಮುಕ್ತವಾಗಿ, ಕೆಲಸ ಸಿಗಬೇಕು ಅಂದ್ರೆ ಡಿಗ್ರಿ ಮಾಡಿದ್ರೆ ಸಾಲಲ್ಲ, ಜಾಬ್ ಓರಿಯೆಂಟೆಡ್ ಕೋರ್ಸ್ ಮಾಡಬೇಕು ಅಂತಿದ್ದಾರೆ. ಇದರ ಅರ್ಥ ಏನು ಹಾಗಾದರೆ? ನಮ್ಮ ಶಾಲಾ ಕಾಲೇಜುಗಳಲ್ಲಿ ಕೆಲಸ ಸಿಗೋಕೆ ಬೇಕಾದಂಥ ಶಿಕ್ಷಣ ಸಿಕ್ತಾ ಇಲ್ಲ ಅಂತ ತಾನೇ? ಇದು ಶಿಕ್ಷಣ ವ್ಯವಸ್ಥೆಯ ದೋಷ ತಾನೇ? ಸರಿ, ಜ್ಞಾನಾರ್ಜನೆಗಾಗಿ ಓದು ಬೇಕು, ಆದರೆ ಆ ಓದಿನಿಂದ ಬದುಕು ಕಟ್ಟಿಕೊಳ್ಳೋಕೂ ಸಾಧ್ಯ ಆಗಬೇಕು. ಕೆಲವು ಶಾಲೆ, ಕಾಲೇಜುಗಳಂತೂ ಕೇವಲ ನಾಮ್-ಕೇ-ವಾಸ್ತೇ ಆಗಿಬಿಟ್ಟಿವೆ. ನೀವು ನಂಬ್ತೀರೋ ಇಲ್ವೋ, ವಾರಕ್ಕೆ ಕೇವಲ ಎರಡು ದಿನ ಅಟೆಂಡ್ ಆದ್ರೆ ಸಾಕು, ಅಟೆಂಡೆನ್ಸ್ ಕೊಡ್ತೀವಿ, ಪರೀಕ್ಷೆ ಬರೆಯೋಕೆ ಅವಕಾಶ ಕೊಡ್ತೀವಿ ಅನ್ನೋ ಶಾಲೆಗಳೂ ಇವೆ ನಮ್ಮಲ್ಲಿ. ಅಲ್ಲಿ ಅಡ್ಮಿಟ್ ಆಗೋ ಮಕ್ಕಳು ನಿಜವಾದ ಕಲಿಕೆಗೆ ಕೋಚಿಂಗ್ ಸೆಂಟರ್‌ಗಳಿಗೆ ಹೋಗ್ತಾರೆ. ಅಲ್ಲಿಯೇ ಅವರ ವಾರವಿಡೀ ಓದು, ಬರಹ ನಡೆಯೋದು. ಈ ಶಾಲೆ ಕಾಲೇಜುಗಳೇನಿದ್ದರೂ ಕೇವಲ ಪರೀಕ್ಷೆ ಬರೆದು ಪಾಸಾಗೋಕೆ ಇರೋ ಜಾಗ ಅಷ್ಟೇ. ಒಟ್ಟಿನಲ್ಲಿ ಇಂದಿನ ವಿದ್ಯಾರ್ಥಿಗಳು, 'ಶಾಲೆ ಕಾಲೇಜಿನಾ ಮನೆ ತೊಳಿಯ, ಕೋಚಿಂಗ್ ಸೆಂಟರ್‌ಗಳೇ ಶಾಶ್ವತ ಗೆಳೆಯ' ಅಂತ 'ಗಾಳಿಪಟ 2' ಚಿತ್ರದ ಧಾಟಿಯಲ್ಲಿ ಹಾಡ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಕೃತಘ್ನತೆ ಮತ್ತು ಕೃತಜ್ಞತೆ

ಈ ಕುರಿತು ನಾನು ಬರೆಯಬೇಕೆಂದು ಅಂದುಕೊಂಡಿರುವಾಗಲೇ, 'ವಿಶ್ವವಾಣಿ' ಅಂಕಣಕಾರ, ಅಮೆರಿಕ ನಿವಾಸಿ ಶ್ರೀವತ್ಸ ಜೋಶಿ ಅವರು ತಮ್ಮ 'ಸ್ವಚ್ಛ ಭಾಷೆ ಅಭಿಯಾನ'ದಲ್ಲಿ - ಕೃತಘ್ನತೆ ಮತ್ತು ಕೃತಜ್ಞತೆ - ಬಗ್ಗೆ ಬರೆದಿದ್ದಾರೆ. 'ವಿಶ್ವವಾಣಿ' ಪತ್ರಿಕೆಯ 26 ಜೂನ್ 2024 ರ ಸಂಚಿಕೆಯ ಸಂ.ಗಮ ಪುಟದಲ್ಲಿ ಅನಿಲ್ ಕುಮಾರ್ ಎಂಬುವವರು ಬರೆದ ಕಿರು ಲೇಖನವೊಂದು ಮುಖ್ಯಮಂತ್ರಿಗೆ ಕೃತಘ್ನತೆ ಎಂಬ ತಲೆಬರಹದಲ್ಲಿ ಪ್ರಕಟವಾಗಿದೆ. ಈ ಕುರಿತು ಜೋಶಿಯವರು ಹೀಗೆ ಬರೆದಿದ್ದಾರೆ - ತಲೆಬರಹವನ್ನಷ್ಟೇ ಓದಿದರೆ, ಲೇಖಕರು ಮುಖ್ಯಮಂತ್ರಿಗೆ ಕೃತಘ್ನತೆ ಸಲ್ಲಿಸುತ್ತಿದ್ದಾರೇನೋ ಎಂದು ಭಾಸವಾಗಬೇಕು ಅಥವಾ ಮುಖ್ಯಮಂತ್ರಿಗೆ ಕೃತಘ್ನತೆ ಇದೆಯೆಂದು ಲೇಖಕರ ಅಂಬೋಣವೇನೋ ಅಂತ ಕೂಡ ಅಂದುಕೊಳ್ಳಬಹುದು. ಆದರೆ ಇಡೀ ಲೇಖನವನ್ನು ಓದಿದರೆ, ಹಾಗೇನೂ ಇಲ್ಲ, ಮುಖ್ಯಮಂತ್ರಿಯ ನಡೆಯನ್ನು ಕೊಂಡಾಡುತ್ತ ಅನಿಲ್ ಕುಮಾರ್ ಈ ಲೇಖನ ಬರೆದಿದ್ದಾರೆಂದು ತಿಳಿದುಬರುತ್ತದೆ. ಲೇಖನದ ಕೊನೆಯಲ್ಲಿ ''ತಮ್ಮ ಕಾಯ್ದೆ ಕಾನೂನುಗಳ ಮೂಲಕವೇ ದಲಿತ ಹಿಂದುಳಿದ ಅಲ್ಪಸಂಖ್ಯಾತ ಸಮುದಾಯಗಳಿಗೆ ಜನಪರ ಬದ್ಧತೆಯನ್ನು ಸಾಧಿಸಿ ತೋರಿಸುತ್ತಿರುವ ಸಂವಿಧಾನ ಪಾಲಕ ಕರ್ನಾಟಕ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರೀತಿಯಿಂದ ಕೃತಜ್ಞತೆಗಳು.'' ಎಂಬ ವಾಕ್ಯ ಇರುವುದರಿಂದ ಅನಿಲ್ ಕುಮಾರ್ ನಿಜವಾಗಿಯೂ ಮುಖ್ಯಮಂತ್ರಿಗೆ ಕೃತಜ್ಞತೆಗಳನ್ನೇ ಸಲ್ಲಿಸಿದ್ದಾರೆ ಎಂದು ಗೊತ್ತಾಗುತ್ತದೆ. ಹಾಗಾದರೆ ಆ ಲೇಖನಕ್ಕೆ ಮುಖ್ಯಮಂತ್ರಿಗೆ ಕೃತಘ್ನತೆ ಎಂಬ ಶೀರ್ಷಿಕೆ ಹೇಗೆ ಬಂತು? ಅ) ಅನಿಲ್ ಕುಮಾರ್ ಅವರು ಕೃತಜ್ಞತೆ-ಕೃತಘ್ನತೆ ನಡುವಿನ ವ್ಯತ್ಯಾಸ ಅರಿಯದೆ 'ಕೃತಘ್ನತೆ' ಪದ ಬಳಸಿರಬಹುದೇ? ಆ) ಅನಿಲ್ ಕುಮಾರ್ ಆ ಲೇಖನಕ್ಕೆ ಯಾವುದೇ ಶೀರ್ಷಿಕೆ ಬರೆದಿರಲಿಲ್ಲ ಅಥವಾ ಬೇರೊಂದು ಶೀರ್ಷಿಕೆ ಬರೆದಿದ್ದರು, ಆದರೆ ವಿಶ್ವವಾಣಿ ಪತ್ರಿಕೆಯವರೇ ಶೀರ್ಷಿಕೆ ಕೊಡುವಾಗ ಕೃತಜ್ಞತೆ-ಕೃತಘ್ನತೆ ನಡುವಿನ ವ್ಯತ್ಯಾಸ ಅರಿಯದೆ ಕೃತಘ್ನತೆ' ಪದ ಬಳಸಿರಬಹುದೇ? ಇ) ಲೇಖನವನ್ನು ಓದುಗರು ಕುತೂಹಲದಿಂದ ಓದುವಂತಾಗಲಿ ಎಂದು ಬೇಕಂತಲೇ ಲೇಖಕರು/ಪತ್ರಿಕೆಯವರು ಪ್ರಚೋದನಕಾರಿಯಾಗಿ ಶೀರ್ಷಿಕೆಯಲ್ಲಿ 'ಕೃತಘ್ನತೆ' ಪದ ಬಳಸಿರಬಹುದೇ? ಈ) ಕೃತಜ್ಞತೆ-ಕೃತಘ್ನತೆ ನಡುವಿನ ವ್ಯತ್ಯಾಸ ಓದುಗರಲ್ಲೂ ಅನೇಕರಿಗೆ ಗೊತ್ತಿರಲಿಕ್ಕಿಲ್ಲ, ಯಾವುದನ್ನು ಬಳಸಿದರೂ ಅಡ್ಡಿಯಿಲ್ಲ ಎಂಬ ಉಡಾಫೆಯಿಂದ 'ಕೃತಘ್ನತೆ' ಪದ ಬಳಕೆಯಾಗಿರಬಹುದೇ? ಉ) ರಾಜ್ಯದ ಜನತೆ ಅನಿವಾರ್ಯವಾಗಿ ಕೃತಘ್ನರಾಗಬೇಕಾದ ಕೆಲವು ಕೆಲಸಗಳನ್ನೂ ಮುಖ್ಯಮಂತ್ರಿ ಮಾಡಿರಬಹುದಾದ್ದರಿಂದ ಸತ್ಯವೆಂಬಂತೆ 'ಕೃತಘ್ನತೆ' ಪದ ಬಳಕೆಯಾಗಿರಬಹುದೇ? ಊ) ಕೃತಘ್ನತೆಯ ಸ್ವಭಾವವನ್ನು ಮುಖ್ಯಮಂತ್ರಿಯೂ ಆಗೊಮ್ಮೆ ಈಗೊಮ್ಮೆ ತೋರಿಸುವವರೇ ಆದ್ದರಿಂದ, ಸತ್ಯವೆಂಬಂತೆ 'ಕೃತಘ್ನತೆ' ಪದ ಬಳಕೆಯಾಗಿರಬಹುದೇ? ಒಟ್ಟಿನಲ್ಲಿ ಗೊಂದಲ. 'ವಿಶ್ವವಾಣಿ'ಯ ಮುದ್ರಿತ ಪ್ರತಿಯಲ್ಲಿ ಮತ್ತು ಸಂಚಿಕೆಯ ಇ-ಪೇಪರ್‌ನ ಆರಂಭಿಕ ಆವೃತ್ತಿಯಲ್ಲಿ ''ಮುಖ್ಯಮಂತ್ರಿಗೆ ಕೃತಘ್ನತೆ'' ಎಂಬ ಆಭಾಸದ ತಲೆಬರಹವೇ ಇತ್ತು. ಬಹುಶಃ ಈ ತಪ್ಪು 'ವಿಶ್ವವಾಣಿ' ಸುದ್ದಿಮನೆಯವರಿಗೂ ತಡವಾಗಿ ಗಮನಕ್ಕೆ ಬಂದಿದೆ. ಈಗ ಇ-ಪೇಪರ್‌ನಲ್ಲಿ ಲೇಖನದ ಶೀರ್ಷಿಕೆಯನ್ನು ''ಮುಖ್ಯಮಂತ್ರಿಗೆ ಕೃತಜ್ಞತೆ'' ಎಂದು ಸರಿಪಡಿಸಲಾಗಿದೆ. ಹೀಗೆ ತಪ್ಪನ್ನು ಸರಿಪಡಿಸಿಕೊಳ್ಳುವುದು ಒಳ್ಳೆಯ ಕ್ರಮ. ಆದರೆ ಈ ಕೃತಘ್ನತೆ-ಕೃತಜ್ಞತೆ ಗೊಂದಲ 'ವಿಶ್ವವಾಣಿ' ಪತ್ರಿಕೆಗಷ್ಟೇ ಸೀಮಿತವೆಂದು ನಾವು ತಿಳಿದುಕೊಳ್ಳ ಬಾರದು. ಇದು ಸರ್ವವ್ಯಾಪಿಯಾದದ್ದು. ಕೃತಘ್ನತೆ-ಕೃತಜ್ಞತೆಗಳ ವ್ಯತ್ಯಾಸ ಗೊತ್ತಿಲ್ಲದವರು, ಬರವಣಿಗೆಯಲ್ಲೂ ಮಾತಿನಲ್ಲೂ ತಪ್ಪಾಗಿ ಬಳಸುವವರು ಅನೇಕರಿದ್ದಾರೆ ಅಥವಾ, ಕೃತಜ್ಞತೆ ಎಂದು ಸರಿಯಾಗಿ ಬರೆಯಬಲ್ಲವರೂ ಅದೇ ಬರಹದಲ್ಲಿ ಬೇರೆ ತಪ್ಪುಗಳನ್ನು ಮಾಡಿರಬಹುದಾದ ಸಾಧ್ಯತೆಗಳೂ ಇರುತ್ತವೆ. ಉದಾಹರಣೆಗೆ ಇದೊಂದು ಫಲಕವನ್ನು ಗಮನಿಸಿ: ''ಹೋಟೆಲ್ ನ್ಯೂ ಗಣೇಶ್ ಪ್ರಸಾದ್. ಗ್ರಾಹಕರ ಗಮನಕ್ಕೆ: ಕಟ್ಟಡ ಕಾಮಗಾರಿ ಪ್ರಯುಕ್ತ ತಾ 28.06.2024ರಿಂದ ನಮ್ಮ ವ್ಯವಹಾರವನ್ನು ಈ ಸ್ಥಳದಲ್ಲಿ ಸ್ಥಗಿತಗೊಳಿಸಲಾಗುವುದೆಂದು ತಿಳಿಸಲು ವಿಷಾಧಿಸುತ್ತೇವೆ. ಸುಮಾರು 40 ವರುಷಗಳಿಂದ ಆಶೀರ್ವಧಿಸಿ ಸಹಕರಿಸಿದ ನಮ್ಮೆಲ್ಲ ಗ್ರಾಹಕರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಮುಂದೆಯೂ ತಮ್ಮ ಸಹಕಾರವನ್ನು ಬಯಸುವ...'' ಇದರಲ್ಲಿ ವ್ಯಕ್ತವಾದ 'ವಿಷಾಧ', 'ಆಶೀರ್ವಾಧ'ಗಳು ಪ್ರಾಣಕ್ಕಿಂತಲೂ ಮಿಗಿಲಾದವು, ಮಹಾಪ್ರಾಣದವು ಎಂದುಕೊಳ್ಳೋಣವೇ?. ಜೋಶಿಯವರು ಬರೆದಿರುವುದು ಸರಿಯಾಗಿದೆ.

ಅಮೆರಿಕದಲ್ಲಿ ಇನ್ಶೂರೆನ್ಸ್ ಸರ್ವಾಂತರ್ಯಾಮಿ



ಶಿಶಿರ ಕಾಲ

ಶಿಶಿರ್ ಹೆಗಡೆ

shishirh@gmail.com

ಇತ್ತೀಚೆಗೆ ಭವಾನಿ ರೇವಣ್ಣನವರ ಕಾರಿಗೆ ಯಾರೋ ಒಬ್ಬ ಜನಸಾಮಾನ್ಯ ಅದೆಲ್ಲಿಂದಲೋ ಬಂದು ಡಿಕ್ಕಿ ಹೊಡೆದ ಸನ್ನಿವೇಶ, ಆ ಸಮಯದಲ್ಲಿ ಸಚಿವೆ ಎಂಬ ಎಲ್ಲ ಲಜ್ಜೆ ಮರ್ಯಾದೆಗಳನ್ನು ಬಿಟ್ಟು ವ್ಯವಹರಿಸಿದ ವಿಡಿಯೋ ಟಿವಿ, ಸೋಷಿಯಲ್ ಮೀಡಿಯಾದಲ್ಲಿ ನೋಡಿಯೇ ಇರುತ್ತೀರಿ. ನಮ್ಮ ದೇಶದಲ್ಲಿ ಚಿಕ್ಕಪುಟ್ಟ ಅಪಘಾತವಾದಾಗ ಅದರಲ್ಲಿ ಇದ್ದವರು, ಇಲ್ಲದವರು, ಅಕ್ಕಪಕ್ಕದವರು ಎಲ್ಲರೂ ಬಂದು ಗಲಾಟೆಯಲ್ಲಿ ಭಾಗಿಯಾಗುವುದು, ರಾಸ್ತಾ ನ್ಯಾಯಾಲಯ ನಡೆಸುವುದು ಇತ್ಯಾದಿ ನಿಮಗೆಲ್ಲ ಗೊತ್ತಿದ್ದದ್ದೇ. ಯಾವುದೇ ಅಪಘಾತವನ್ನು ಯಾರೂ ಬಯಸುವುದಿಲ್ಲ, ಆದರೂ ಅದರಲ್ಲೊಬ್ಬರ ತಪ್ಪು ಹುಡುಕಿ ಜಗಳ, ಹೊಡೆದಾಟಕ್ಕಿಳಿಯುವುದು ಸಾಮಾನ್ಯ. ಅಮೆರಿಕದಲ್ಲಿ 33 ಕೋಟಿ ಜನಸಂಖ್ಯೆ. ಅದರಲ್ಲಿ ವಾಹನ ಚಲಾಯಿಸುವ ವಯಸ್ಸು - ಹದಿನಾರು ಮೀರಿದವರು 26 ಕೋಟಿ ಮಂದಿ. ಅಮೆರಿಕದಲ್ಲಿ ಚಲಾವಣೆಯಲ್ಲಿರುವ ಕಾರಿನ ಸಂಖ್ಯೆ 28 ಕೋಟಿ. ಅಮೆರಿಕದಲ್ಲಿ 36 ಸಾವಿರ ಅಪಘಾತ ದಿನಂಪ್ರತಿ ಸಂಭವಿಸುತ್ತದೆ. ಆದರೆ ಒಂದೇ ಅಪಘಾತದಲ್ಲಿಯೂ ಇಂತಹ ಒಂದೂ ಘಟನೆ, ಜಗಳ, ಹೊಡೆದಾಟ ನಡೆಯುವುದಿಲ್ಲ. ಆ್ಯಕ್ಸಿಡೆಂಟ್ ಮಾಡಿಕೊಂಡವರ ವಾಗ್ವಾದದ ಸೀನ್ ಇಲ್ಲವೇ ಇಲ್ಲ. ಆ್ಯಕ್ಸಿಡೆಂಟ್ ಆದ ತಕ್ಷಣ ಎರಡೂ ಕಾರಿನವರು 911 ತುರ್ತು ಸೇವೆಗೆ ಕರೆ ಮಾಡುತ್ತಾರೆ. ಆಗ ಅಂಬ್ಯುಲೆನ್ಸ್ ಅವಶ್ಯವಿದ್ದಲ್ಲಿ ಅಥವಾ ಪೊಲೀಸರು ಒಂದೆರಡು ನಿಮಿಷದಲ್ಲಿ ಬಂದುಬಿಡುತ್ತಾರೆ. ಅವರು ಎರಡೂ ವಾಹನ ಯಾವ ಕಡೆಯಿಂದ ಬಂದು ಒಂದಕ್ಕೊಂದು ತಾಗಿತು, ಇದರಲ್ಲಿ ಯಾರದ್ದು ತಪ್ಪು ಎಂದು ನಿರ್ಧರಿಸುವುದು ಪೊಲೀಸ್. ಅದಾದ ನಂತರ ತಪ್ಪಿರುವವನ ಹೆಸರು, ಅವನ ಇನ್ಶೂರೆನ್ಸ್ ವಿವರ ಪಡೆದು, ಅದೆಲ್ಲವನ್ನು ಒಂದು ಚಿಕ್ಕ ರಿಪೋರ್ಟ್ ಮಾಡಿ, ತಪ್ಪಿಲ್ಲದವನ ಕೈಗೆ ಕೊಡುತ್ತಾರೆ. ಆತ ಅದನ್ನು ಇಟ್ಟುಕೊಂಡು ಹೋಗಿ ಗಾಡಿ ದುರಸ್ತಿ ಮಾಡಿಸಿಕೊಂಡರಾಯಿತು.

ಆ್ಯಕ್ಸಿಡೆಂಟ್ ಆದಾಗ ಭಾರತದವರು ನಡೆದುಕೊಳ್ಳುವುದನ್ನು ಮತ್ತು ಅಮೆರಿಕದವರು ನಡೆದುಕೊಳ್ಳುವುದನ್ನು ಸಂಸ್ಕಾರ, ಸಾಮಾಜಿಕ ಸಭ್ಯತೆ, ಪ್ರೌಢತೆ ಇತ್ಯಾದಿ ಗುಣವಿಶೇಷಗಳನ್ನು ಜನಸಾಮಾನ್ಯರಿಗೆ ಆರೋಪಿಸಿ ಹೋಲಿಸುವುದನ್ನು ಕಂಡಿದ್ದೇನೆ. ಅಪಘಾತವೆಂದರೆ ಅದೊಂದು ನಷ್ಟ. ನಷ್ಟ ಅನುಭವಿಸಿದವನು ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದು, ಅದುವೇ ಮುಂದುವರಿದು ಜಗಳವಾಗುವುದು, ಗಾಡಿ ಓಡಿಸಲಿಕ್ಕೆ ಬರದಿದ್ದಲ್ಲಿ ಏಕೆ ಓಡಿಸಬೇಕೆಂದು ಶುರುವಾಗುವ ಜಗಳಗಳು ತಾರಕಕ್ಕೇರುವುದಿದೆ. ಅದ್ಯಾವುದೂ ಅಮೆರಿಕದಲ್ಲಿ ನಡೆಯುವುದೇ ಇಲ್ಲ. ಅಸಲಿಗೆ ಇಬ್ಬರು ಆ್ಯಕ್ಸಿಡೆಂಟ್‌ನಲ್ಲಿ ಭಾಗಿಯಾದಲ್ಲಿ ಒಬ್ಬರನ್ನೊಬ್ಬರು ಪರಸ್ಪರ ಮಾತನಾಡಿಸುವುದೇ ಇಲ್ಲ. ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಮುಖ ಮಾಡಿ ದೂರ ನಿಂತುಬಿಡುತ್ತಾರೆ. ಪೊಲೀಸು ಬಂದು ಇಂಥವರ ತಪ್ಪು ಎಂದರೆ ಮುಗಿಯಿತು. ಈ ನಾಗರಿಕ ನಡೆ ಸಾಮಾಜಿಕ ಸಭ್ಯತೆಯೇ? ಅಲ್ಲ. ಇದೆಲ್ಲದಕ್ಕೆ ಕಾರಣ ಇಲ್ಲಿರುವ ಇನ್ಶೂರೆನ್ಸ್ ವ್ಯವಸ್ಥೆ.

ತಪ್ಪು ಮಾಡದವನ ಎಲ್ಲ ನಷ್ಟವನ್ನೂ ಇನ್ನೊಬ್ಬ, ತಪ್ಪೆಸಗಿದವನ ಇನ್ಶೂರೆನ್ಸ್ ಭರಿಸಿಕೊಡುತ್ತದೆ. ಅಷ್ಟೇ ಅಲ್ಲ, ರಿಪೇರಿ ಆಗುವಷ್ಟು ಸಮಯದ ವರೆಗೆ ಬಾಡಿಗೆ ಕಾರಿನ ಖರ್ಚೂ ಅದೇ ಇನ್ಶೂರೆನ್ಸ್‌ನದು. ಇನ್ನು ತಪ್ಪೆಸಗಿದವನಿಗೂ ನಷ್ಟವಾಗಿದ್ದರೆ ಅದನ್ನು ಅವನ ಇನ್ಶೂರೆನ್ಸ್ ಭರಿಸುತ್ತದೆ. ಇದೆಲ್ಲವೂ ತಪ್ಪೆಸಗಿದವನ ಇನ್ಸುರೆನ್ಸಿಗೆ ಪಟ್ಟಿಯಾಗುತ್ತದೆ. ಅವರೋ, ತಪ್ಪೆಸಗಿದವನೆಂದರೆ ಅವನಿಂದ ಇನ್ನೂ ಹೆಚ್ಚಿನ ನಷ್ಟವಾಗುವ ಸಾಧ್ಯತೆ ಜಾಸ್ತಿ. ರಿಸ್ಕ್ ಹೆಚ್ಚು ಎಂದರೆ ಅವರ ಪ್ರೀಮಿಯಂ ಅದಕ್ಕನುಗುಣವಾಗಿ ಜಾಸ್ತಿ. ಹಾಗಾಗಿ ಆ್ಯಕ್ಸಿಡೆಂಟಿಗೆ ಕಾರಣವಾದವನ ತಿಂಗಳ ಇನ್ಶೂರೆನ್ಸ್ ಪ್ರೀಮಿಯಂ ಹೆಚ್ಚುತ್ತದೆ, ದುಪ್ಪಟ್ಟಾಗುತ್ತದೆ. ತಪ್ಪು ಮಾಡಿದವನಿಗೆ ಪೊಲೀಸ್ ದಂಡ ಒಂದು ಕಡೆಯಾದರೆ ಇನ್ನೊಂದು ಕಡೆ ಅವನ ತಿಂಗಳ ಇನ್ಶೂರೆನ್ಸ್ ಖರ್ಚು ಹೆಚ್ಚುತ್ತದೆ. ಈ ವ್ಯವಸ್ಥೆಯಿರುವುದರಿಂದ ಅಮೆರಿಕನ್ನರು ಆ್ಯಕ್ಸಿಡೆಂಟ್ ಆದಾಗ ಜಗಳವಾಡುವುದಿಲ್ಲ, ಹೊಡೆದಾಟಕ್ಕಿಳಿಯುವುದಿಲ್ಲ. ಹೊಡೆದಾಟ ಮಾಡಿದರೆ ಇಬ್ಬರ ಮೇಲೂ ಇನ್ನೊಂದು ಕೇಸ್ ಬೀಳುತ್ತದೆ. ಒಂದು ವೇಳೆ ಇಬ್ಬರದ್ದೂ ತಪ್ಪಿದ್ದರೆ, ಅಥವಾ ತಪ್ಪನ್ನು ಪೊಲೀಸ್ ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ ಅಪಘಾತದ ಖರ್ಚು ಎರಡೂ ಇನ್ಶೂರೆನ್ಸ್‌ನವರಿಗೆ. ಅಂತೆಯೇ ಇಬ್ಬರದೂ ಪ್ರೀಮಿಯಂ ಆಕಾಶಕ್ಕೇರುತ್ತದೆ.

ಇದು ಒಂದು ಉದಾಹರಣೆ. ಅಮೆರಿಕದಲ್ಲಿ ಎಲ್ಲ ವ್ಯವಹಾರ, ವ್ಯಾಪಾರಹಗಳನ್ನು ನಿರ್ದೇಶಿಸುವುದೇ ವಿಮೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಇಲ್ಲಿ ಇನ್ಶೂರೆನ್ಸ್ ಇಲ್ಲದೆ ಯಾವುದೇ ವ್ಯವಹಾರ, ವ್ಯಾಪಾರ, ಕೆಲಸ ನಡೆಯುವುದೇ ಇಲ್ಲ. ವಿಮೆ ಸರ್ವವ್ಯಾಪಿ.

ಇಷ್ಟಕ್ಕೂ ವಿಮೆಯೆಂದರೆ ಏನು? ಅಪಾಯವಿದ್ದರೆ ಅದಕ್ಕೊಂದು ಬದಲಿ ಪರಿಹಾರ. ವಿಮೆಯನ್ನು ಖರೀದಿಸು ವುದು ಅದರ ಲಾಭ ಪಡೆಯಬೇಕೆಂದಲ್ಲ, ಬದಲಿಗೆ ಅಂದುಕೊಳ್ಳದ ಅವಘಡಗಳಾದಲ್ಲಿ ಅದರಿಂದಾಗುವ ನಷ್ಟವನ್ನು ಭರಿಸುವಲ್ಲಿ ಎಲ್ಲರಿಂದ ಸಂಗ್ರಹಿಸಿದ ಹಣ ಮೂಲಕ ಮಾಡುವುದು. ಆ ಮೂಲಕ ಅವಘಡದ ನಷ್ಟವನ್ನು ನಿಭಾ ಯಿಸುವುದು. ರಿಸ್ಕ್ ಅನ್ನು ಎಲ್ಲರಿಗೂ ಸಮಪಾಲಾಗಿ ಹಂಚುವುದು. ಕಡಿಮೆ ಅವಘಡ, ಕ್ಲೈಮ್ ಆದಷ್ಟು ಅಪಾಯ ಕಡಿಮೆ, ಹೆಚ್ಚಿನವರು ಪಾಲ್ಗೊಂಡು ವಿಮೆ ಖರೀದಿಸಿದರೆ ಆಗ ವಿಮೆಯ ಖರ್ಚು ಕಡಿಮೆ.

ಅದು ಗ್ರೇಟ್ ಡಿಪ್ರೆಶನ್ ಸಮಯ. 1930 ರಲ್ಲಿ ಆರ್ಥಿಕ ಮುಗ್ಗಟ್ಟು ಎಲ್ಲ ಮಿತಿಯನ್ನು ಮೀರಿತ್ತು. ಜನರಿಗೆ ಒಮ್ಮಿಂದೊಮ್ಮೆಲೆ ಬ್ಯಾಂಕುಗಳ ಮೇಲಿನ ನಂಬಿಕೆ ಹೊರಟುಹೋಗಿತ್ತು. ಏಕೆಂದರೆ ಒಂದೊಂದೇ ಬ್ಯಾಂಕು ಸಾಲ ಮರುಪಾವತಿ ಪಡೆಯಲಾಗದೆ ಸೊರಗಿ ದಿವಾಳಿಯಾಗತೊಡಗಿತ್ತು. ಹೀಗಿರುವಾಗ ಬ್ಯಾಂಕಿನಲ್ಲಿಟ್ಟ ಹಣವನ್ನು ಜನರು ಹೊರತೆಗೆಯಲು ಶುರುಮಾಡಿದರು. ಮೊದಲೇ ಆರ್ಥಿಕ ಮುಗ್ಗಟ್ಟು, ಜನರ ಬ್ಯಾಂಕಿನ ಮೇಲಿನ ಅಪನಂಬಿಕೆ ಗಾಯದ ಮೇಲೆ ಬರೆಯ ಎಳೆದಂತಾಗಿತ್ತು. ಸ್ವತಃ ಅಮೆರಿಕದ ಅಧ್ಯಕ್ಷರೇ ಬಂದು ನಿಮ್ಮ ಹಣ ಬ್ಯಾಂಕಿನಲ್ಲಿ ಸುರಕ್ಷಿತ ಎಂದರೂ ಸಾಕಾಗಲಿಲ್ಲ. ಆಗ ಇನ್ಶೂರೆನ್ಸ್ ಒಂದನ್ನು ಜಾರಿಗೆ ತರಲಾಯಿತು. ಈ ಇನ್ಶೂರೆನ್ಸ್ ಹೊಂದಿರುವ ಬ್ಯಾಂಕುಗಳಲ್ಲಿನ ಹಣ ವೇನಾದರೂ ನಷ್ಟವಾದರೆ ಅದನ್ನು ವಿಮೆ ಹೊಂದಿಸಿಕೊಡುವ ಪದ್ಧತಿ ಜಾರಿಗೆ ಬಂತು. ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಕಳೆದ ಐವತ್ತು ವರ್ಷದಲ್ಲಿ ಒಬ್ಬನೇ ಒಬ್ಬ ಅಮೆರಿಕನ್ ಬ್ಯಾಂಕ್ ಅಥವಾ ಯಾವುದೇ ಆರ್ಥಿಕ ಸಂಸ್ಥೆಯಿಂದ ಒಂದೇ ಒಂದು ಡಾಲರ್ ನಷ್ಟ ಹೊಂದಿಲ್ಲ, ಕಳೆದುಕೊಂಡಿಲ್ಲ. ಈಗೊಂದು ವರ್ಷದ ಹಿಂದೆ ನನ್ನದೊಂದು ಡೆಬಿಟ್ ಕಾರ್ಡ್ ಕಳೆದು ಹೋಗಿತ್ತು. ನನಗೆ ಅದು ಕಳೆದದ್ದೇ ಗೊತ್ತಿಲ್ಲ. ಒಂದೆರಡು ದಿನ ಕಳೆದು ನೋಡುತ್ತೇನೆ, ಅದರಿಂದ ನೂರಾರು ಹಣದ ಪಾವತಿಯಾಗಿತ್ತು. ಅದು ಸಿಕ್ಕಿದ ವ್ಯಕ್ತಿ ಸುಮಾರು ಸಾವಿರ ಡಾಲರ್ ಹಣವನ್ನು ನನ್ನ ಖಾತೆಯಿಂದ ತೆಗೆದಿದ್ದ. ನನಗೆ ಗೊತ್ತಾದಾಕ್ಷಣ ಬ್ಯಾಂಕಿನವರಿಗೆ ಒಂದು ಫೋನ್ ಮಾಡಿದ್ದಷ್ಟೆ. ನನ್ನ ಖಾತೆಯಿಂದ ಕಳೆದ ಹಣವನ್ನೆಲ್ಲ ವಾಪಸ್ ಹಾಕಿಬಿಟ್ಟರು. ಇದು ಆ ಇನ್ಶೂರೆನ್ಸ್ ಇದ್ದದ್ದಕ್ಕೆ ನಾನು ಬಚಾವು. ಇಲ್ಲಿ ಈ ಇನ್ಶೂರೆನ್ಸ್ ಹೊಂದಿರದ ಹಣಕಾಸು ಸಂಸ್ಥೆಯ ಜೊತೆ ಯಾರೂ ವ್ಯವಹರಿಸುವುದೇ ಇಲ್ಲ.

ಕಾರಿಗೆ ವಿಮೆ ಮಾಡಿಸಿದಷ್ಟೇ ಸಹಜ ಮತ್ತು ಸಾಮಾನ್ಯ ಮನೆಯ ವಿಮೆ. ಮನೆಗೆ ಏನೇ ಹಾನಿಯಾದರೂ ಆ ವಿಮೆ ಅದನ್ನು ನಿಭಾಯಿಸುತ್ತದೆ. ಅಮೆರಿಕದಲ್ಲಿ ಇನ್ನೊಂದು ನಿಯಮವಿದೆ. ಒಂದು ವೇಳೆ ನಿಮ್ಮ ಮನೆಗೆ ಯಾರೋ ನೆಂಟರು ಬಂದರೆಂದುಕೊಳ್ಳಿ, ಅವರು ಮನೆಯೊಳಗೆ ಕಾಲು ಜಾರಿ ಬಿದ್ದರೆ, ನೋವು ಮಾಡಿಕೊಂಡರೆ ಅದನ್ನು ಭರಿಸುವುದಕ್ಕೆ ವಿಮೆ ಇರಬೇಕು. ಯಾರೋ ಒಬ್ಬ ಕೆಲಸಗಾರ ನಿಮ್ಮ ಮನೆಯೊಳಕ್ಕೆ ಏನೋ ಒಂದು ರಿಪೇರಿಗೆ ಬಂದರೆ ಅವನ ಜವಾಬ್ದಾರಿಯೂ ಇದೇ ಇನ್ಶೂರೆನ್ಸ್‌ನದು. ಅಷ್ಟೇ ಅಲ್ಲ, ಮನೆಯ ಅಂಗಳ, ಪಕ್ಕದ ಕಾಲು ದಾರಿಯಲ್ಲಿ ಜಾರಿ ಬಿದ್ದರೂ ಆ ಜವಾಬ್ದಾರಿ ಮತ್ತು ಖರ್ಚು ವಿಮೆಯದು. ಒಂದು ವೇಳೆ ವಿಮೆ ಹೊಂದಿಲ್ಲವೆಂದರೆ ಆ ಎಲ್ಲ ಖರ್ಚು ಮನೆಯ ಯಜಮಾನನದು. ಏಕೆಂದರೆ ಅಪಘಾತವಾಗಿದ್ದು ಆತನ ಖಾಸಗಿ ಜಾಗದಲ್ಲಿ.

ಈಗೊಂದು ತಿಂಗಳ ಹಿಂದೆ ಸ್ಟಾರ್ ಬಕ್ಸ್ ಕಾಫಿ ದುಕಾನಿಗೆ ಹೋಗಿದ್ದೆ. ನಾನು ಒಳ ಹೊಕ್ಕುವಾಗಲೇ ಆ ಮಳಿಗೆ ಮುಚ್ಚುವ ಸಮಯವಾಗಿತ್ತು. ಇನ್ನೊಂದು ನಿಮಿಷವಿತ್ತು. ನಾನು ಒಳ ಸೇರಿಕೊಂಡು ಕಾಫಿ ಆರ್ಡರ್ ಮಾಡುವಾಗ ಆ ಅಂಗಡಿಯ ಸಮಯ ಮುಗಿದಿತ್ತು. ಆತ ನಾವು ಇನ್ನು ಕಾಫಿ ಕೊಡಲಾಗುವುದಿಲ್ಲ ಎಂದುಬಿಟ್ಟ. ಆತ ಹೆಚ್ಚಿಗೆಯಿದ್ದ ಎಲ್ಲ ಕಾಫಿಗಳನ್ನು ಬೇಸಿನ್ನಿಗೆ ಚಲ್ಲುತ್ತಿದ್ದ. ನನಗೋ ಕಾಫಿ ಬೇಕೇ ಬೇಕಿತ್ತು. ಚಲ್ಲುವುದನ್ನೇ ಕೊಡು ಎಂದೆ. ಸರಿ ಕೊಡುತ್ತೇನೆ, ಆದರೆ ನೀವು ಅಂಗಡಿಯ ಒಳಕ್ಕೆ ಕುಡಿಯುವಂತಿಲ್ಲ, ಅಲ್ಲದೆ ಇದಕ್ಕೆ ನಾನು ಹಣ ಪಡೆಯಲಾಗುವುದಿಲ್ಲ, ಏಕೆಂದರೆ ಈಗಾಗಲೇ ಕಂಪ್ಯೂಟರೀಕೃತ ಗಲ್ಲಾ ಪಟ್ಟಿ ಲಾಕ್ ಆಗಿಬಿಟ್ಟಿದೆ ಎಂದ. ವಿಷಯ ಏನೆಂದರೆ ಆ ಅಂಗಡಿಯ ವ್ಯವಹಾರ, ಅಲ್ಲಿನ ಹಣ, ಅದರೊಳಕ್ಕೆ ಬರುವ ಗ್ರಾಹಕ, ಅವರು ಕೊಡುವ ಕಾಫಿಯಿಂದ ಆಗಬಹುದಾದ ಯಾವುದೇ ಅವಘಡ, ಅಂಗಡಿಯೊಳಕ್ಕೆ ಕಾಲು ಜಾರಿ ಬಿದ್ದರೆ ಇವು ಯಾವುವೂ ಅಂಗಡಿಯ ಸಮಯದ ನಂತರವಾದರೆ ಇನ್ಶೂರೆನ್ಸ್ ಅದಕ್ಕೆ ಜವಾಬ್ದಾರನಲ್ಲ ಎಂಬ ಒಡಂಬಡಿಕೆ. ಇದರಿಂದಾಗಿ ಸಮಯವಾದ ಒಂದೇ ಕ್ಷಣದ ನಂತರವೂ ವ್ಯವಹಾರ ನಡೆಸುವಂತಿಲ್ಲ, ನಿರ್ಬಂಧ.

ಅಮೆರಿಕದಲ್ಲಿ ಎಲ್ಲೆಲ್ಲಿ ಅಪಾಯ ರಿಸ್ಕ್ ಇದೆಯೋ ಅಲ್ಲೆಲ್ಲ ಅದಕ್ಕೊಂದು ಇನ್ಶೂರೆನ್ಸ್ ಇದೆ. ಇದರಲ್ಲಿ ಬಹುತೇಕ ವಿಮೆಗಳು ಖಡ್ಡಾಯ. ಇನ್ನು ಕೆಲವು ಐಚ್ಛಿಕ. ವಾಹನ, ಮನೆ, ಆರೋಗ್ಯ ವಿಮೆಗಳಷ್ಟೇ ಅಲ್ಲ, ಬಾಡಿಗೆ ಮನೆ ಪಡೆಯಬೇಕೆಂದರೆ ಅದಕ್ಕೂ ವಿಮೆ ಬೇಕು. ನೀವು ಯಾವುದೇ ವ್ಯವಹಾರ ನಡೆಸುತ್ತಿದ್ದೀರಿ, ನಿಮಗಾಗಿ ದುಡಿಯುವ ಕೆಲಸದವರಿದ್ದಾರೆ ಎಂದರೆ ಅವರೆಲ್ಲರ ಮೇಲೆಯೂ ವಿಮೆಯಾಗಿರಬೇಕು. ಮನುಷ್ಯನ ಹಲ್ಲು, ಕಣ್ಣು ವಿಮೆಯಿಲ್ಲದೆ ಶುಶ್ರೂಷೆ ಪಡೆಯಲು ಸಾಧ್ಯವೇ ಇಲ್ಲ. ಏಕೆಂದರೆ, ಅಲ್ಲಿನ ಆಸ್ಪತ್ರೆಗಳು ಬಲು ತುಟ್ಟಿ. ಅಮೆರಿಕದಲ್ಲಿ ಸಾಕು ಪ್ರಾಣಿಗಳ ಶುಶ್ರೂಷೆಯೂ ವಿಮೆಯಿಲ್ಲದಿದ್ದರೆ ತುಟ್ಟಿ. ಪ್ರತೀ ಬಿಲ್ಡಿಂಗು ಪ್ರವಾಹ, ಭೂಕಂಪ, ಸುಂಟರಗಾಳಿ ಮೊದಲಾದ ವಿಮೆ ಮಾಡುವುದು ಕಡ್ಡಾಯ. ಐಡೆಂಟಿಟಿ ಥೆಫ್ಟ್ ಇನ್ಶೂರೆನ್ಸ್ ಎಂದೊಂದಿದೆ. ನಿಮ್ಮ ಹೆಸರು, ವಿವರ ಕದ್ದು ಪಡೆದು ಆ ಮೂಲಕ ಹಣ ಲೂಟಿ ಮಾಡುವ ಹೊಸ ಮೋಸವಿದು. ಇದರಲ್ಲಿ ಸಿಕ್ಕಿಕೊಂಡು ಮೋಸ ಹೋದವರಿದ್ದಾರೆ. ಹಾಗಾಗಿ ಇತ್ತೀಚೆಗೆ ಬಹುತೇಕರು ಈ ವಿಮೆ ಮಾಡಿಸಿಕೊಳ್ಳುತ್ತಾರೆ. ಮದುವೆ ಇನ್ಶೂರೆನ್ಸ್ ಎಂದೊಂದಿದೆ. ಏಕೆಂದರೆ, ಮದುವೆ ದೊಡ್ಡ ಖರ್ಚಿನದಲ್ವೇ, ಹಾಗಾಗಿ ಈ ವಿಮೆ ಮಾಡಿಸಿಕೊಂಡರೆ ಒಂದು ವೇಳೆ ಕಾರಣಾಂತರದಿಂದ ಮದುವೆ ನಿಂತು ಹೋದರೆ ಅದರಿಂದಾಗುವ ಆರ್ಥಿಕ ನಷ್ಟ ಭರಿಸಲು ಇದು. ಕಂಪನಿಗಳು, ಬ್ಯಾಂಕುಗಳು, ಅಂಗಡಿಗಳು, ಹೋಟೆಲ್ಲುಗಳು, ಪಾರ್ಕುಗಳು, ವಾಹನ, ಆರೋಗ್ಯ ಹೀಗೆ ಎಲ್ಲದರಲ್ಲಿಯೂ ಎಲ್ಲೆಂದರಲ್ಲಿ ವಿಮೆ. ಆಲ್ಕೋಹಾಲ್ ಮಾರಾಟ ಮಾಡುವ ಮಳಿಗೆಗಳು ವಿಚಿತ್ರ ವಿಮೆ ಮಾಡಿಸಿಕೊಂಡಿರುತ್ತವೆ. ಅದೇನೆಂದರೆ ಅವರು ಮಾರಾಟ ಮಾಡುವ ಮದ್ಯ ಹಾಳಾಗಿ ಅಥವಾ ಅದರಿಂದಾಗಿ ಆರೋಗ್ಯ ಕೆಟ್ಟರೆ, ವಿಪರೀತವಾದರೆ, ಅವರು ಆ ಮದ್ಯದಂಗಡಿಯ ಮೇಲೆ ಕೇಸ್ ಮಾಡಿದರೆ ಎಂದು ಎಣ್ಣೆ ಇನ್ಶೂರೆನ್ಸ್ ಮಾಡಿಸಿರಬೇಕು. ಹೈನುಗಾರಿಕೆ ನಡೆಸುವವರು ಸಾಂಕ್ರಾಮಿಕ ರೋಗ, ಅಗ್ನಿ, ಮಳೆ, ಪ್ರವಾಹ ಮೊದಲಾದ ದುರಂತಗಳಿಗೆ ವಿಮೆ ಪಡೆದಿರುತ್ತಾರೆ. ಒಂದುವೇಳೆ, ಕೋಲಾ ಆರೋಗ್ಯದ ಮಿತಿಗಿಂತ ಜಾಸ್ತಿ ಪ್ರಮಾಣದ ಕಪ್ಪುಗಳಲ್ಲಿ ಮಾರುವುದಾದರೆ ಅದರಿಂದೇನಾದರೂ ಆದರೆ ಅದಕ್ಕೂ ವಿಮೆ ಪಡೆದಿರಬೇಕು.

ವಾಲ್ಮಾರ್ಟ್ ಮೊದಲಾದ ಬೃಹತ್ ಮಳಿಗೆಗಳು ಎಲ್ಲ ಸೇರಿ ಒಂದು ಎಂಬ ವಿಮೆ ಹೊಂದಿರುತ್ತವೆ. ಅಂಗಡಿ ಸುಟ್ಟು ಹೋದರೆ, ಅಂಗಡಿಯೊಳಗೆ ಯಾರಿಗಾದರೂ ಪೆಟ್ಟಾದರೆ, ನೆಲ ಒರೆಸುವಾಗ ಒದ್ದೆ ನೆಲದಲ್ಲಿ ಕಾಲು ಜಾರಿ ಬಿದ್ದರೆ, ದರೋಡೆಯಾದರೆ ಹೀಗೆ ಸಾವಿರದೆಂಟು 'ಆದರೆ' ಗಳಿಗೆಲ್ಲಕ್ಕೂ ವಿಮೆ. ವಿಮಾನ ಸ್ವಂತದ್ದಾದರೆ ಅಥವಾ ಬಾಡಿಗೆಗೆ ಪಡೆದಿದ್ದರೆ ಅದು ನಿಂತಾಗ ಒಂದು ವಿಮೆ, ಹಾರಲು ಟರ್ಮ್ಯಾಕ್‌ನಲ್ಲಿ ಓಡುವಾಗ ಒಂದು ಇನ್ಶೂರೆನ್ಸ್, ಆಕಾಶದಲ್ಲಿ ಇರುವಾಗ ಮತ್ತೊಂದು, ನೆಲಕ್ಕಿಳಿಯುವಾಗ ಮಗದೊಂದು. ಒಂದೊಂದರಲ್ಲಿ ರಿಸ್ಕ್ ಪ್ರಮಾಣಗಳು ವಿಭಿನ್ನ. ಹಾಗಾಗಿ ಪ್ರೀಮಿಯಂ ಬೇರೆ ಬೇರೆ.

ಇನ್ಶೂರೆನ್ಸ್ ಪಡೆಯದಿದ್ದರೆ ಏನಾಗುತ್ತದೆ? ಇಲ್ಲಿನ ಕಾನೂನು ಬಹಳ ಗಟ್ಟಿ. ಅಲ್ಲದೆ ನಷ್ಟ ಅನುಭವಿಸಿದವನು ಕೋರ್ಟಿಗೆ ಹೋದರೆ ಕೋರ್ಟ್ ಆತನ ಪರವಾಗಿಯೇ ನಿಲ್ಲುವುದು. ಉದ್ಯಮದ ಕೆಲಸಗಾರನೊಬ್ಬ ಗಾಯಗೊಂಡು ಕೋರ್ಟ್ ಮೆಟ್ಟಿಲೇರಿದರೆ, ಅದು ಕಂಪನಿಯ ತಪ್ಪೆಂದಾದರೆ ಅಲ್ಲಿ ವಿಮೆಯಿದ್ದರೆ ಆ ಕಂಪನಿ ಬಚಾವು. ಇಲ್ಲದಿದ್ದರೆ ಕೆಲವೊಮ್ಮೆ ಒಬ್ಬ ಕೆಲಸಗಾರನಿಗೆ ದಶಲಕ್ಷಗಟ್ಟಲೆ ಪರಿಹಾರ ಕೊಡಬೇಕಾಗುತ್ತದೆ. ಯಾವುದೋ ಕಾರ್ಖಾನೆಯಲ್ಲಿ ಅನಿಲ ಸೋರಿಕೆಯಾಯಿತೆಂದುಕೊಳ್ಳಿ, ಅಲ್ಲಿನವರೆಲ್ಲ ಕೇಸ್ ಮಾಡಿದರೆ, ವಿಮೆಯಿಲ್ಲದಿದ್ದಲ್ಲಿ ಕಂಪನಿ ಮುಚ್ಚಬೇಕಾಗುತ್ತದೆ.

ವಿಮಾ ಕಂಪನಿಗಳ ಯಶಸ್ಸು ಇರುವುದೇ ಅದರ ಗ್ರಾಹಕರಲ್ಲಿರುವ ರಿಸ್ಕ್ ಪ್ರಮಾಣ ತಗ್ಗಿಸುವಲ್ಲಿ. ಹಾಗಾಗಿ ಅಪಾಯ ಎಷ್ಟಿದೆ ಎಂಬುದರ ಮೇಲೆ ವಿಮೆಯ ಪ್ರೀಮಿಯಂ ನಿರ್ಧಾರವಾಗುತ್ತದೆ. ಅಥವಾ ಈ ವಿಮಾ ಕಂಪನಿಗಳು ಈ ಕೆಲವು ಸುರಕ್ಷಾ ಕ್ರಮಗಳನ್ನು ಕೈಗೊಂಡರೆ ನಿಮ್ಮ ರಿಸ್ಕ್ ಕಡಿಮೆಯಾಗಿ ಪ್ರೀಮಿಯಂ ತಗ್ಗುತ್ತದೆ ಎಂದು ನಿರ್ದೇಶಿಸುತ್ತವೆ. ಹೀಗೆ ಎಲ್ಲವೂ ವಿಮೆಯ ವ್ಯಾಪ್ತಿಯೊಳಕ್ಕೆ ಬರುವುದರಿಂದಾಗಿ ವಿಮಾ ಕಂಪನಿಗಳು ಇಡೀ ಸಮಾಜದ ಸುರಕ್ಷತೆಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ನಿರ್ದೇಶಿಸುತ್ತವೆ.

ಇತ್ತೀಚೆಗೊಬ್ಬ ನಟ ಜೈಲು ಸೇರಿದ ಸುದ್ದಿ ಬಂದಾಗ ಅವನನ್ನು ಹಾಕಿಕೊಂಡು ಚಿತ್ರ ನಿರ್ಮಿಸುತ್ತಿದ್ದ ನಿರ್ಮಾಪಕರು ಒಂದಿಷ್ಟು ಲಾಸ್ ಮಾಡಿಕೊಂಡರು ಎಂಬ ಸುದ್ದಿ ಬಂತಲ್ಲ, ಅಂತಹ ಸ್ಥಿತಿ ಅಮೆರಿಕದಲ್ಲಿ ನಿರ್ಮಾಣವಾಗುವುದಿಲ್ಲ. ಏಕೆಂದರೆ ಸಿನೆಮಾ ನಿರ್ಮಿಸಲು ಸಾಲ ಕೊಡುವಾಗಲೇ ಅದರಲ್ಲಿರುವ ಮುಖ್ಯ, ಬದಲಾಯಿಸಲಾಗದ ಪಾತ್ರ ನಿರ್ವಹಿಸುವ ಎಲ್ಲರ ಮೇಲೆಯೂ ವಿಮೆ ಖರೀದಿಸುವಂತೆ ನೋಡಿಕೊಳ್ಳುತ್ತವೆ. ಇದರಿಂದಾಗಿ ಯಾವುದೇ ನಟ ಮೃತನಾದಲ್ಲಿ ಅಥವಾ ಜೈಲು ಸೇರುವಂತಹ ಘಟನೆಯಾದಲ್ಲಿ ಅದರಿಂದಾಗುವ ನಷ್ಟ ಭರಿಸಲಿಕೆ ವಿಮೆ ಇರುತ್ತದೆ.

ಇಲ್ಲಿನ ಎಲ್ಲಾ ಡಾಕ್ಟರುಗಳು ಇನ್ಶೂರೆನ್ಸ್ ಹೊಂದಿರಲೇಬೇಕು. ಹೆರಿಗೆ ತಜ್ಞರಾದರೆ ಅವರು ರಿಟೈರ್ಡ್ ಆದ ಹದಿನೆಂಟು ವರ್ಷವೂ ವಿಮೆ ಹೊಂದಿರಬೇಕು. ಏಕೆಂದರೆ ಅವರು ಪ್ರಸೂತಿ ಮಾಡಿದ ಮಗು ಹದಿನೆಂಟು ವರ್ಷ ತಲುಪುವ ವರೆಗೂ ಹೆರಿಗೆ ಮಾಡಿದ ಡಾಕ್ಟರ್ ಮೇಲೆ ವೈದ್ಯಕೀಯ ನಿರ್ಲಕ್ಷ್ಯದ ಕೇಸ್ ಮಾಡಬಹುದು. ವೈದ್ಯರ ಯಾವುದೇ ನಿರ್ಲಕ್ಷ್ಯದಿಂದಾಗುವ ಅಚಾತುರ್ಯಕ್ಕೆ ಈ ಇನ್ಸುರೆನ್ಸುಗಳು ಆಪದ್ಬಾಂಧವ. ವಿಮೆ ಹೊಂದಿಲ್ಲವೆಂದರೆ ವೈದ್ಯರೇ ನಷ್ಟ ಭರಿಸಬೇಕು, ಅದೂ ಕೋಟಿಗಳ ಲೆಕ್ಕದಲ್ಲಿ. ಹಾಗಾಗಿ ವೈದ್ಯರು ದುಡಿದ ಹಣದ ದೊಡ್ಡ ಪಾಲು ವಿಮೆ ಪಾವತಿಗೆ ಹೋಗುತ್ತದೆ.

ಇಷ್ಟೆಲ್ಲ 'ವಿಮಾ'ಮಯವಾಗಿರುವಾಗ, ಇಡೀ ಸಮಾಜದ ಅಂತರ್ಯದ ನಿಯಂತ್ರಕ ವಿಮೆಯಾಗಿರುವುದರಿಂದ ಸಾಕಷ್ಟು ಫ್ರಾಡ್, ಮೋಸ ಕೂಡ ನಡೆಯುತ್ತದೆ. ನಷ್ಟದಲ್ಲಿರುವ ವ್ಯವಹಾರ-ಸ್ವಂತ ಹಾನಿ ಮಾಡಿಕೊಂಡು ವಿಮೆಯ ಹಣ ಪಡೆಯಲು ಮುಂದಾದರೆ ಅಥವಾ ಸುಳ್ಳು, ಮೋಸ ಮಾಡಲಿಕ್ಕೆ ಮುಂದಾದರೆ ಇಡೀ ವಿಮಾ ವ್ಯವಸ್ಥೆಗೆ ಹೊಡೆತ. ಇದೆಲ್ಲ ಸರಿಯಾಗಿ ನಡೆಯಬೇಕೆಂದರೆ, ವಿಮೆ ಕೈಗೆಟುಕುವಂತಿರಬೇಕೆಂದರೆ ಮೋಸದಿಂದ ಕ್ಲೈಮ್ ಮಾಡುವುದನ್ನು ಸರಕಾರ ತಡೆಗಟ್ಟಬೇಕು. ಈ ಕಾರಣಕ್ಕೆ ಇನ್ಶೂರೆನ್ಸ್ ಫ್ರಾಡ್ - ವಿಮಾ ಮೋಸಕ್ಕೆ ಕಠಿಣ ಶಿಕ್ಷೆಯಿದೆ. ಅಂದಹಾಗೆ ವಿಮಾ ಕಂಪನಿಗಳು ಮೋಸದಿಂದಾಗುವ ನಷ್ಟವನ್ನ ಭರಿಸಲೆಂದೇ ಇನ್ನೊಂದು ವಿಮೆ ಪಡೆಯುವ ರೂಢಿಯೂ ಇದೆ.

ಒಂದು ಸಮಾಜ ಸುಲಲಿತವಾಗಿ ನಡೆಯಬೇಕೆಂದರೆ, ವ್ಯವಸ್ಥಿತವಾಗಬೇಕೆಂದರೆ ಎಲ್ಲೆಲ್ಲಿ ಅಪಾಯವಿದೆಯೋ ಅಲ್ಲೆಲ್ಲ ಅದನ್ನು ಭರಿಸುವ ವ್ಯವಸ್ಥೆ ಇರಬೇಕು, ಅದಕ್ಕೆ ವಿಮೆ ಬೇಕು ಎಂಬುದು ಅಮೆರಿಕನ್ ವ್ಯವಸ್ಥೆ. ಇದೆಲ್ಲ ವಿಮಾ ಕಂಪನಿಗಳು ನಿರ್ಮಿಸಿದ್ದಲ್ಲ, ಬದಲಿಗೆ ಸರಕಾರವೇ ಇದೆಲ್ಲವನ್ನು ಮಾಡಿಕೊಂಡದ್ದು. ಅದಕ್ಕೆ ಬೇಕಾದ ಕಾನೂನನ್ನು ನಿರ್ಮಿಸಿ ಇಂತಹ ವ್ಯವಸ್ಥೆಯನ್ನು ಕಟ್ಟಿಕೊಂಡದ್ದು. ಏನೇ ಅವಘಡವಾಗಲಿ, ಅದರಿಂದಾಗುವ ನಷ್ಟ ನಾಗರಿಕನ ಬದುಕನ್ನು ಮೂರಾಬಟ್ಟೆ ಆಗಬಾರದೆನ್ನುವ ಆಶಯ. ಇಷ್ಟೊಂದು ವಿಮೆಗಳಿರುವುದರಿಂದ ಇದೆಲ್ಲದರ ಆರ್ಥಿಕ ಹೊರೆ ಆ ದೇಶದ ನಾಗರಿಕರ ಮೇಲೆಯೇ ಬೀಳುವುದು. ಇದರಿಂದ ಬದುಕು ಇನ್ನಷ್ಟು ತುಟ್ಟಿಯಾಗುವುದು. ಆದರೆ ಇಡೀ ಸಮಾಜ ಸುರಕ್ಷಿತವಾಗಿರಬೇಕೆಂದರೆ ಅದಕ್ಕೆ ಬೆಲೆ ಎಲ್ಲರೂ ಸೇರಿ ತೆರಲೇ ಬೇಕು. ಆಗ ಮಾತ್ರ ಸುರಕ್ಷಿತ ವಾತಾವರಣ ನಿಮಿಸಿಕೊಳ್ಳಲು ಸಾಧ್ಯ. ಅಷ್ಟಕ್ಕೂ ಈ ವಿಮಾ ಕಂಪನಿಗಳ ಹಣವೇನು ಇನ್ನೆಲ್ಲೋ ಹೋಗಿಬಿಡುವುದಿಲ್ಲ, ಬದಲಿಗೆ ಇನ್ನೊಂದು ರೂಪದಲ್ಲಿ ಆರ್ಥಿಕತೆಗೇ ಬಂದು ಸೇರುವುದು. ಅಯ್ಯೋ ನಷ್ಟವಾಗಿ ಹೋಯ್ತು, ಅಪಘಾತವೊಂದರಿಂದ ದಿವಾಳಿಯಾಗಿ ಬೀದಿಗೆ ಬರಬೇಕಾಯ್ತು ಎಂಬಿತ್ಯಾದಿ ಆಗದಂತೆ ತನ್ನ ನಾಗರಿಕರನ್ನು ನೋಡಿಕೊಳ್ಳುವುದು ಸರಕಾರದ್ದೇ ಕೆಲಸವಲ್ಲವೇ? ಇಂತಹ ವ್ಯವಸ್ಥೆ ನಿರ್ಮಿಸಿಕೊಂಡ ಅಮೆರಿಕ ಶ್ಲಾಘನೀಯ ಆರ್ಥಿಕ ಮಾದರಿ.

ಹಗರಣಗಳಿಗೆ ನಾಂದಿ ಹಾಡುವ ಮೊದಲು ಚಿವುಟಿ

ಮಾರು-ಕಟ್ಟೆ

ನಾರಾಯಣ ಯಾಜಿ

vveditoped@gmail.com

ಕೆಲದಿನಗಳ ಹಿಂದೆ Quant ಮ್ಯುಚುವಲ್ ನಿಧಿಯ ಕಂಪನಿಯ ಮೇಲೆ ಸೆಬಿ ದಾಳಿ ಮಾಡಿತು ಎನ್ನುವ ಸುದ್ದಿ ಬಂದಿದ್ದೇ ತಡ ಒಮ್ಮೆಲೇ ಮಾರುಕಟ್ಟೆಯಲ್ಲಿ ಹೇರಾಪೇರಿ ಪ್ರಾರಂಭವಾಯಿತು. ಕೆಲವೊಂದು ಷೇರುಗಳ ಬೆಲೆಯಲ್ಲಿ ಏರಿಳಿತ ಪ್ರಾರಂಭವಾಗಿ ದಿನದ ಕೊನೆಯಲ್ಲಿ ಏನೂ ಆಗಿಲ್ಲವೇನೋ ಎನ್ನುವಂತೆ ಸೂಚ್ಯಂಕ ತಣ್ಣಗೆ 77,341.08 ಮಟ್ಟಕ್ಕೆ ಏರಿತು. ಆದರೆ ಇದಾದ ನಂತರ ಇಷ್ಟು ದಿನ ಹೂಡಿಕೆಗೆ ಉತ್ತಮ ಫಂಡ್ ಎಂದರೆ ಅದು Quant ಎಂದು ಹೇಳುವ ಪರಿಣತರೆಲ್ಲರಿಗೆ ಇದ್ದಕ್ಕಿದ್ದಂತೆ ದೋಷಗಳೇ ಕಾಣಿಸತೊಡಗಿದವು. ಇದೊಂಥರಾ ಚುನಾವಣಾ ವಿಶ್ಲೇಷಣೆಯ ಹಾಗೆ ತಮಾಷೆಯಾಗಿತ್ತು. ಇಷ್ಟು ದಿವಸ ಕೇವಲ ಒಳಮನೆಯ ವ್ಯವಹಾರ (Inside Trader) ಎನ್ನುವ ಶಬ್ದ ಹಿಂದೆ ಸರಿದು ಹೊಸತಾದ ಶಬ್ದ Front Running ಎನ್ನುವದು ಮಾರುಕಟ್ಟೆಯಲ್ಲಿ ಹರಿದಾಡತೊಡಗಿದವು. ಅಷ್ಟಕ್ಕೂ ಷೇರು ಮಾರುಕಟ್ಟೆಯಲ್ಲಿ ಸದ್ದು ಮಾಡುತ್ತಿರುವ ಕ್ವಾಂಟ್ ಪರಸ್ಪರ ನಿಧಿಯ ಮೇಲೆ ಸೆಬಿ ದಾಳಿಮಾಡಿದ ಕಾರಣವನ್ನು ವಿಶ್ಲೇಷಿಸೋಣ.

ಭಾರತದಲ್ಲಿ 1992 ರ ತನಕ ಇದ್ದಿದ್ದು ಕೇವಲ UTI ಮ್ಯುಚುವಲ್ ಫಂಡ್ ಮಾತ್ರ. ನಂತರ ಎಲ್ಲ ರಂಗದಲ್ಲಿ ಆದ ಬದಲಾವಣೆಯ ಹಾಗೆ ಇಲ್ಲಿಯೂ ಖಾಸಗಿ ಮುಚುವಲ್ ಫಂಡ್‌ಗಳು ಬಂದವು. ಇಂದು ಒಟ್ಟೂ 44 ಫಂಡುಗಳು ವಿವಿಧ ರೀತಿಯ ಸುಮಾರು 2500 ಯೋಜನೆಗಳಲ್ಲಿ ಜನಸಾಮಾನ್ಯರ ಹಣವನ್ನು ವ್ಯವಹರಿಸುತ್ತಿವೆ. ಕೆಲವೊಂದಿಷ್ಟು ಕಂಪನಿಗಳು ಉಸಿರಾಡಲಾಗದೆ ಬೇರೆ ಕೆಲ ಕಂಪನಿಗಳ ಜತೆಗೆ ವಿಲೀನವಾಗಿವೆ. ಈ ಫಂಡ್‌ಗಳು ಒಟ್ಟೂ ಸೇರಿ ನಿರ್ವಹಿಸುತ್ತಿರುವ ಹಣದ ಮೌಲ್ಯ 58.60 ಲಕ್ಷಕೋಟಿ ರುಪಾಯಿಗಳಷ್ಟು! ಇತ್ತೀಚಿನ ದಿನಗಳಲ್ಲಿ ಎಲ್ಲರ ಬಾಯಲ್ಲಿಯೂ ಹಣವನ್ನು ಬ್ಯಾಂಕಿನಲ್ಲಿ ಇಡುವುದಕ್ಕಿಂತ ಮ್ಯೂಚುವಲ್ ಫಂಡಗಳಲ್ಲಿ ಇಡುವುದು ಒಳ್ಳೆಯದು ಎನ್ನುವ ಮಾರುಕಟ್ಟೆಯ ತಂತ್ರವನ್ನು ಚೆನ್ನಾಗಿ ಹರಡಲಾಗುತ್ತಿದೆ. ಭಾರತದ ಅರ್ಥವ್ಯವಸ್ಥೆ ಉಳಿತಾಯ ಪ್ರಧಾನವಾದದ್ದು. ಇತ್ತೀಚಿನ ದಿನಗಳಲ್ಲಿ ಬ್ಯಾಂಕಿನಲ್ಲಿ ಬಡ್ಡಿ ಕಡಿಮೆ ಇರುವ ಕಾರಣ ಷೇರುಮಾರುಕಟ್ಟೆಯಲ್ಲಿ ಹೂಡಿಕೆ ಹೆಚ್ಚಾಗುತ್ತಿದೆ. ಈ ದಿಸೆಯಲ್ಲಿ ಇರುವ ವಿಧಾನಗಳು ಒಂದೋ ಷೇರು ಮಾರುಕಟ್ಟೆಯಲ್ಲಿ ನೇರವಾಗಿ ಹೂಡಿಕೆ ಮಾಡುವುದು ಇಲ್ಲವೇ ಅದನ್ನು ಮ್ಯೂಚುವಲ್ ಫಂಡಗಳಲ್ಲಿ ತೊಡಗಿಸುವುದು. ಒಂದು ರೀತಿಯ ಹುಚ್ಚು ಆವೇಗದಲ್ಲಿ ಹಣ ಈ ರಂಗದಲ್ಲಿ ಹರಿಯುತ್ತಿದೆ. ಹಾಗಾಗಿ 2017 ರಲ್ಲಿ ಪ್ರಾರಂಭವಾದ ಕ್ವಾಂಟ್ ಮ್ಯುಚುವಲ್ ಫಂಡ್ 2019ರಲ್ಲಿ 100ಕೋಟಿ ರುಪಾಯಿಗಳಿಂದ ಶುರುವಾಗಿ, ಇಂದು 93,000 ಕೋಟಿ ರುಪಾಯಿಗಳಷ್ಟು ಸಂಪತ್ತನ್ನು ನಿರ್ವಹಿಸುತ್ತಿದೆ. ದೇಶದ ಇಪ್ಪತ್ತನೇ ಅತಿದೊಡ್ಡ ಕಂಪನಿ ಇದಾಗಿದೆ. ಹೀಗೆ ಅತ್ಯಂತ ವೇಗವಾಗಿ ಬೆಳೆದ ಹಿನ್ನೆಲೆಯನ್ನು ಗಮನಿಸಿದಾಗ ಕೆಲವೊಂದಿಷ್ಟು ಸಂಶಯಗಳು ಸಹಜವಾಗಿಯೇ ಮಾರುಕಟ್ಟೆಯಲ್ಲಿ ಹರಿದಾಡುತ್ತಿದ್ದವು. ಅದರಲ್ಲಿ ಈ ಕಂಪನಿಯ ಹೂಡಿಕೆಯ ವೈಖರಿ, ಯಾವ್ಯಾವದೋ ಹೆಸರಿಲ್ಲದ ಕಂಪನಿಯ ಷೇರುಗಳಲ್ಲಿ ಇದು ಹೂಡಿಕೆಯನ್ನು ಮಾಡುತ್ತಿತ್ತು ಎನ್ನುವ ಗಂಭೀರವಾದ ಆಪಾದನೆ ಕೇಳಿಬರುತ್ತಿತ್ತು. ಇದೀಗ ಬಂದ ವರದಿಯಂತೆ ಸುಮಾರು ಹದಿನಾಲ್ಕು ಕಂಪನಿಗಳಲ್ಲಿ ಉದಾ. Century Enka, Rossel India, Best Agro Life ಮೊದಲಾದ ಕಂಪನಿಗಳಲ್ಲಿ ಇನ್ನೂ ಬೇರೆ ಯಾರೂ ಹೂಡಿಕೆಯನ್ನು ಮಾಡಿಲ್ಲ! ಹೀಗೆ ಹೂಡಿಕೆಯನ್ನು ಮಾಡಿದ ಷೇರುಗಳು ಸುಮಾರು 30% ರಿಂದ 58% ದ ವರೆಗೂ ಏರಿಕೆಯನ್ನು ಕಂಡಿವೆ. ಇದರಿಂದ ಹೂಡಿಕೆದಾರರಿಗೂ ಖುಷಿಯಾಗಿ ಕ್ವಾಂಟ್ ಎಂದರೆ ದುಡ್ಡಿನ ಮಳೆ ಎನ್ನುವ ವಾತಾವರಣ ಸೃಷ್ಟಿಯಾಗಿತ್ತು. ಇದರ ಸ್ಥಾಪಕ ಸಂದೀಪ ಟಂಡನ್ ಈಚೆಗೆ ಕೆಲದಿನಗಳ ಹಿಂದೆ ಸಂದರ್ಶನವೊಂದರಲ್ಲಿ ಹರ್ಷದ್ ಮೆಹ್ತಾನ ಹಗರಣದ ಹೊತ್ತಿಗೆ ನಾನು ಕಾಲೇಜಿಗೆ ಹೋಗುತ್ತಿದ್ದೆ. ಆಗಲೇ ನನಗೆ ಮಾರುಕಟ್ಟೆಯ ಹೂಡಿಕೆಯ ಕುರಿತು ಆಸಕ್ತಿ ಮೂಡಿತ್ತು. ಏನೋ ಸರಿ ಇಲ್ಲ ಎಂದು ತಿಳಿದ ತನ್ನ ತಂದೆಯ ಮತ್ತು ಚಿಕ್ಕಪ್ಪನ ಷೇರುಗಳನ್ನು ಕೂಡಲೇ ಮಾರಾಟಮಾಡುವಂತೆ ತಿಳಿಸಿದೆ. ನಂತರ ಒಮ್ಮೆಲೇ ಮಾರುಕಟ್ಟೆ ಸುಮಾರು 20% ಏರಿ ಒಮ್ಮೆಲೇ ಪತಾಳಕ್ಕೆ ಕುಸಿಯಿತು. ಅದಾದ ನಂತರ ನನ್ನ ತಂದೆ ಮತ್ತು ಚಿಕ್ಕಪ್ಪ ತಮ್ಮ ಹಣವನ್ನು ನನ್ನ ಕೈಗೆ ಕೊಟ್ಟು ನಿರ್ವಹಿಸಲು ಹೇಳಿದರು. ಅದಾದ ಮೇಲೆ ನಾನು ಹಿಂದೆ ನೋಡಿಲ್ಲ ಎಂದಿದ್ದ. ಅಲ್ಲಿಂದ ಪ್ರಾರಂಭವಾದ ಆತನ ಹೂಡಿಕೆ ನಂತರ ಜನಸಾಮಾನ್ಯರ ಜೇಬಿನವರೆಗೆ ತಲುಪಿದ್ದು ವರ್ತಮಾನದ ಸತ್ಯ. ಈಗ ಸೆಬಿ ಕ್ವಾಂಟ್ ಮ್ಯೂಚುವಲ್ ಫಂಡ್ ತನಿಖೆಗೆ ಮುಂದಾಗಿರುವುದು ಏಕೆಂದರೆ, ಈ ಸಂಸ್ಥೆ ಅಥವಾ ಇದಕ್ಕೆ ಸಂಬಂಧಿಸಿದ ವ್ಯಕ್ತಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಗೋಸ್ಕರ ಸೆಬಿಯ ಕಟ್ಟಳೆಗಳನ್ನು ಮೀರಿ, ಕಾನೂನು ಬಾಹಿರವಾಗಿ ಮಾರುಕಟ್ಟೆಯಲ್ಲಿ ವ್ಯವಹಾರವನ್ನು ಮಾಡಿದ್ದಾರೆ, ಅದರ ಜತೆಗೆ ಮುಂದೋಡುವಿಕೆ ಮಾಡಿದ್ದಾರೆ ಎನ್ನುವ ಗಂಭೀರ ಆರೋಪ ಈ ಕಂಪನಿಯ ಮೇಲೆ ಬಂದಿದೆ.

ಈ ಪರಸ್ಪರ ನಿಧಿಗಳು ಅಥವಾ ಮ್ಯೂಚುವಲ್ ಫಂಡಿನವರು ಹೂಡಿಕೆದಾರರಿಂದ ಹಣವನ್ನು ಸಂಗ್ರಹಿಸುತ್ತಾರೆ. ಅದನ್ನು NFO- New Fund Offer ಎನ್ನುತ್ತಾರೆ. ಉದಾಹರಣೆಗೆ ನಿಫ್ಟಿ -50 ರಲ್ಲಿ ನೋಂದಣಿಯಾದ ಷೇರುಗಳ ಮೇಲೆ ಹಣ ಹೂಡುತ್ತೇವೆ ಎನ್ನುವ ಯೋಜನೆಗೆ ಹೂಡಿಕೆದಾರರಿಂದ ಹಣಸಂಗ್ರಹಿಸುತ್ತಾರೆ ಎಂದುಕೊಳ್ಳೋಣ. ಹೀಗೆ ಸಂಗ್ರಹಿಸಿದ ಹಣವನ್ನು ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಷೇರು ಖರೀದಿ ಮತ್ತು ಮಾರಾಟಕ್ಕಾಗಿ ಉಪಯೋಗಿಸುತ್ತಾರೆ. ಯಾವಯಾವ ಷೇರುಗಳನ್ನು ಕೊಳ್ಳಬೇಕೆಂದು ತೀರ್ಮಾನಿಸಲು ನಿಪುಣರಾದ ಆರ್ಥಿಕ ತಜ್ಞರು ಅಲ್ಲಿ ಇರುತ್ತಾರೆ. ಪ್ರತೀ ಕಂಪನಿಯ ಏರಿಳಿತ, ಮಾರುಕಟ್ಟೆಯಲ್ಲಿನ ಅದರ ಪ್ರಭಾವ, ಆ ಕಂಪನಿಯ ಘನತೆ ಇವೆಲ್ಲವುದನ್ನು ನೋಡಿ ವ್ಯವಹಾರಕ್ಕೆ ಇಳಿಯುತ್ತಾರೆ. ಉದಾಹರಣೆಗೆ ಎ ಎನ್ನುವ ಕಂಪನಿಗೆ ಯಾವುದೋ ಒಂದು ಕಾಂಟ್ರಾಕ್ಟ್ ಸಿಕ್ಕುವ ಹಂತದಲ್ಲಿದೆ. ಅದರಿಂದ ಅದರ ವ್ಯವಹಾರ ಇನ್ನು ಕೆಲವೇ ವರ್ಷಗಳಲ್ಲಿ ದುಪ್ಪಟ್ಟಾಗಲಿದೆ. ಲಾಭದ ಪ್ರಮಾಣವೂ ಗಣನೀಯವಾಗಿ ಹೆಚ್ಚಲಿದೆ. ಅವುಗಳನ್ನು ಖರೀದಿಸಲಿ ಇದೀಗ ಸರಿಯಾದ ಸಮಯ ಎನ್ನುವುದನ್ನು ಈ ತಂಡ ನಿರ್ಧರಿಸುತ್ತದೆ. ವಿಶ್ಲೇಷಣೆಗೆ ಬೇಕಾದ ಮಾಹಿತಿಯನ್ನು ಎಐ ತಂತ್ರಜ್ಞಾನ ಮತ್ತಿತರ ಅತ್ಯುತ್ತಮ ಸಾಫ್ಟ್‌ವೇರ್ ಉಪಯೋಗಿಸುತ್ತಾರೆ. ಮ್ಯೂಚುವಲ್ ಫಂಡ್ ನಮ್ಮ ನಿಮ್ಮ ಹಾಗೇ ನೂರು ಅಥವಾ ಸಾವಿರದ ಲೆಕ್ಕದಲ್ಲಿ ಷೇರುಗಳನ್ನು ಖರೀದಿ ಮಾಡುವುದಿಲ್ಲ. ಇದರಲ್ಲಿ ಹತ್ತು ಇಪ್ಪತ್ತು ಕೋಟಿಗಳಿಗಿಂತಲೂ ಮಿಗಿಲಾದ ವ್ಯವಹಾರವನ್ನು ಮಾಡುತ್ತವೆ. ವಿಷಯ ತುಂಬಾ ಗೌಪ್ಯವಾಗಿರಬೇಕು. ಹೊರಗಡೆ ಯಾವ ಷೇರುಗಳನ್ನು ವ್ಯವಹರಿಸುತ್ತೇವೆ ಎಂದು ಗೊತ್ತಾಗಬಾರದು. ಈ ಗುಟ್ಟು ತಿಳಿದ ಅವರಲ್ಲೇ ಒಬ್ಬನೋ ಅಥವಾ ಇನ್ನಿತರರೋ ಸೇರಿ ಆ ಫಂಡ್ ಖರೀದಿ ಮಾಡುವುದಕ್ಕಿಂತ ಮೊದಲೇ ತಾವು ವೈಯಕ್ತಿಕವಾಗಿ ಖರೀದಿಮಾಡಿಬಿಡುತ್ತಾರೆ. ಯಾವಾಗ ಈ ಮ್ಯೂಚುವಲ್ ಫಂಡ್ ಆ ಶೇರನ್ನು ಖರೀದಿ ಮಾಡುತ್ತದೆಯೋ ಆಗ ಸಹಜವಾಗಿ ಆ ಶೇರಿನ ಮಾರುಕಟ್ಟೆಯ ಬೆಲೆ ಜಾಸ್ತಿಯಾಗುತ್ತದೆ. ಮೊದಲೇ ಮುಂದೋಡಿನಲ್ಲಿ ಖರೀದಿಸಿದವ ಈಗ ಅದನ್ನು ಮಾರಾಟ ಮಾಡುತ್ತಾನೆ. ಅದರಿಂದ ಅವನಿಗೆ ಹೇರಳವಾದ ಲಾಭದೊರೆಯುತ್ತದೆ. ಅದೇರೀತಿ ಫಂಡ್ ಒಂದು ತನ್ನಲ್ಲಿದ್ದ ಬಿ ಶೇರನ್ನು ಮಾರಾಟಮಾಡಬೇಕೆಂದು ನಿರ್ಧರಿಸಿದರೆ ಅದೇ ವ್ಯಕ್ತಿ ಅಥವಾ ಗುಂಪು ಕಂಪನಿ ಮಾರಾಟಮಾಡುವ ಮೊದಲೇ ತಮ್ಮಲ್ಲಿರುವ ಶೇರನ್ನು ಮಾರಿಬಿಡುತ್ತಾರೆ. ಮ್ಯೂಚುವಲ್ ಫಂಡ್ ಯಾವುದೇ ಶೇರನ್ನು ಖರೀದಿಸಲಿ ಅಥವಾ ಮಾರಾಟ ಮಾಡಲಿ, ಅದರ ಮೌಲ್ಯದಲ್ಲಿ ಏರಿಳಿತವಾಗುತ್ತದೆ. ಫಂಡ್‌ಗಳಿಸುವ ಲಾಭಾಂಶ ಕಡಿಮೆಯಾಗುತ್ತದೆ. ಇದನ್ನೇ ಸ್ಟಾಕ್ ಮಾರುಕಟ್ಟೆಯ ಭಾಷೆಯಲ್ಲಿ ಫ್ರಂಟ್ ರನ್ನಿಂಗ್ ಎನ್ನುತ್ತಾರೆ.

ಇದರ ಪರಿಣಾಮ? ವೆಚ್ಚದ ಮೇಲೆ ಪರಿಣಾಮ ಮತ್ತು ಈ ನಿಧಿಗಳ ನಿವ್ವಳ ಆಸ್ತಿಯ ಮೌಲ್ಯ ಕಡಿಮೆಯಾಗುತ್ತದೆ. ಲಕ್ಷಾಂತರ ಸಣ್ಣ ಹೂಡಿಕೆದಾರರು ತಮ್ಮ ಹಣವನ್ನು ಇಂತಹ ಪರಸ್ಪರ ನಿಧಿಗಳಲ್ಲಿ ತೊಡಗಿಸುತ್ತಾರೆ. ಫಂಡುಗಳು ಹೂಡಿಕೆದಾರರಿಂದ ನಿರ್ವಹಣಾ ವೆಚ್ಚವನ್ನು ಪಡೆದುಕೊಳ್ಳುತ್ತವೆ. ಅವುಗಳ ಖರೀದಿಯ/ಮಾರಾಟದ ಏರಿಳಿತದಿಂದ ಅವರಿಗೆ ಸಿಗಬೇಕಾದ ನಿವ್ವಳ ಮೌಲ್ಯ ಕಡಿಮೆಯಾಗುತ್ತದೆ. ಇಲ್ಲಿ ಪರಸ್ಪರ ನಿಧಿಗಳು ಹಣದ ಮಾಲೀಕರಲ್ಲ, ಅವು ಹೂಡಿಕೆದಾರರ ಟ್ರಸ್ಟಿಗಳು. ನಮ್ಮ ನಿಮ್ಮಂತಹ ಜನಸಾಮಾನ್ಯರಲ್ಲಿ ಸಂಪತ್ತನ್ನು ಹೆಚ್ಚಿಸಿಕೊಡುತ್ತೇವೆ ಎನ್ನುವ ಭರವಸೆಯೊಂದಿಗೆ ಇದರಲ್ಲಿ ಹೂಡಿಕೆಯನ್ನು ಮಾಡಿರುತ್ತಾರೆ. ಇದೆ ಮುಂದುವರಿದು ಅಪರಾತಪರಾ ಆದಲ್ಲಿ ಮುಂದೊಂದು ದಿನ ಅನೇಕ ಹಣಕಾಸು ಸಂಸ್ಥೆಗಳು ಠೇವಣಿದಾರರಿಗೆ ವಂಚಿಸಿದಂತೆ ಇಲ್ಲಿಯೂ ಆಗಬಹುದು. ಇಂತಹ ವ್ಯವಹಾರ ಅಕ್ರಮ ಮತ್ತು ಕಾನೂನೂ ಬಾಹಿರ. ಈ ಎಲ್ಲ ಆಪಾದನೆಗಳೂ ಕ್ವಾಂಟ್ ಕಂಪನಿಯ ಮೇಲಿದೆ. ಹಾಗಾಗಿ ಸೆಬಿ ಇದೀಗ ತನ್ನ ತನಿಖೆಯನ್ನು ಪ್ರಾರಂಭಿಸಿದೆ. ಇಂತಹ ವಾಮಮಾರ್ಗವನ್ನು ಪ್ರಾರಂಭದಲ್ಲಿಯೇ ಚಿವುಟಿಹಾಕದೇ ಇದ್ದರೆ ಮತ್ತೊಂದು ದೊಡ್ಡ ಆರ್ಥಿಕ ಹಗರಣಗಳಿಗೆ ನಾಂದಿ ಹಾಡಬಹುದು.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸೊಳ್ಳೆಗಳಿಂದ ದೂರ ಇರಿ

ರಾಜ್ಯದಲ್ಲಿ ಮುಂಗಾರು ಹಿನ್ನಲೆಯಲ್ಲಿ ನೀರು ನಿಂತು ಸೊಳ್ಳೆಗಳ ಉತ್ಪತ್ತಿ ದ್ವಿಗುಣಗೊಳ್ಳುತ್ತಿದೆ. ಇದರಿಂದ ಡೆಂಗ್ಯು ಪ್ರಕರಣಗಳ ಸಂಖ್ಯೆ ಉಲ್ಬಣಗೊಂಡಿದೆ. ಕಳೆದ ಇಂತಹ ಪ್ರಕರಣದ ಸಂಖ್ಯೆಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ವಿಷಯ. ರಾಜ್ಯ ಸರಕಾರ ಡೆಂಘೀ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕ್ರಮವಹಿಸಿದ್ದರೂ, ಕಳೆದ ವರ್ಷಗಳಿಗೆ ಹೋಲಿಸಿದರೆ ಹೆಚ್ಚಾಗಿ ರಾಜ್ಯದಲ್ಲಿ ಈವರೆಗೆ 5,374 ಪ್ರಕಣಗಳು ದಾಖಲಾಗಿದ್ದು, ಐದು ಮಂದಿ ಮೃತಪಟ್ಟಿರುವುದು ಆತಂಕಕಾರಿ ವಿಷಯವಾಗಿದೆ. ಡೆಂಘೀ ಪ್ರಕರಣ ಹೆಚ್ಚಾಗಲು ಮಳೆಯ ನೀರು ಮನೆಯ ಸುತ್ತಮುತ್ತಲಿನ ಟೈರ್, ಹೂವಿನ ಕುಂಡ, ಗುಂಡಿಗಳಲ್ಲಿ ಸಂಗ್ರಹವಾಗುವುದರಿಂದ ಈಡಿಸ್ ಈಜಪ್ಟಿ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಲು ಕಾರಣವಾಗುತ್ತದೆ. ಆದ್ದರಿಂದ ಸಾರ್ವಜನಿಕರು ತಮ್ಮ ಆರೋಗ್ಯದ ಕುರಿತು ಕಾಳಜಿ ವಹಿಸಬೇಕು. ಸರಕಾರ ಶೀಘ್ರವಾಗಿ ಈ ಕುರಿತು ಕಾರ್ಯ ಪ್ರವೃತ್ತವಾಗಬೇಕು ಮತ್ತು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಬೇಕು ಹಾಗೂ ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು, ಎನ್.ಎಸ್.ಎಸ್ ವಿದ್ಯಾರ್ಥಿಗಳು ಹಾಗೂ ಮತ್ತಿತರ ಸ್ವಯಂ ಸೇವಕರು ಮನೆ-ಮನೆಗೂ ಹೋಗಿ ಜನರಲ್ಲಿ ಡೇಂಘೀ ಜ್ವರದ ಕುರಿತು ಅರಿವು ಮೂಡಿಸುವ ಕಾರ್ಯ ಮಾಡಬೇಕು ಅಂದಾಗ ಮಾತ್ರ ನಾವು ಆರೋಗ್ಯಯುತವಾಗಿರಲು ಸಾಧ್ಯ.

-ಶಿಲ್ಪಾ ಪವಾರ ವಿಜಯಪುರ

ಭಕ್ತರ ಆಶೀರ್ವಾದವಿರುತ್ತದೆಯೇ?

ರಾಜ್ಯ ಸಾರಿಗೆ ಸಚಿವ ರಾಮಲಿಂಗರೆಡ್ಡಿಯವರ ಉಚಿತ ಬಸ್ ಪ್ರಯಾಣದ ಕಾರಣ ರಾಜ್ಯದ ಜನಪ್ರಿಯ ದೇವಾಲಯಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ ಭಕ್ತರ ಸಂಖ್ಯೆ ಅಧಿಕರವಾಗಿರುವುದು ಹಾಗೂ ಕಾಣಿಕೆ ಹುಂಡಿಗಳು ತುಂಬಿತುಳುಕುತ್ತಿರುವುದು ಸಂತಸದ ಸಂಗತಿಯಾಗಿದೆ. ಜನಪ್ರಿಯ ದೇವಾಲಯಗಳ, ಪುಣ್ಯಕ್ಷೇತ್ರಗಳ, ಸುತ್ತಮುತ್ತಲಿನ ಪ್ರದೇಶಗಳ ಸ್ಥಳೀಯರಿಗೆ ವ್ಯಾಪಾರದ ಉದ್ಯೋಗ, ಸಿಕ್ಕಿರುವುದು ಸಂತಸದ ಸಂಗತಿಯಾಗಿದೆ. ಇದರ ಜೊತೆಗೆ ಈ ಜುಲೈನಿಂದ ರಾಜ್ಯ ಸಾರಿಗೆ ಸಚಿವರು ಭಾರತ್ ಗೌರವ್ ದಕ್ಷಿಣ ತೀರ್ಥಕ್ಷೇತ್ರಗಳ ರಿಯಾಯಿತಿ ರೈಲು ಪ್ರವಾಸ ಯೋಜನೆ ಹಿರಿಯ ನಾಗರಿಕರಲ್ಲಿ, ಮಹಿಳಾ ಭಕ್ತರಲ್ಲಿ ಖುಷಿ ಮೂಡಿಸಿದೆ. ಸಾರಿಗೆ ಸಚಿವರ ಈ ಉಚಿತ ರಿಯಾಯಿತಿ ರೈಲು, ಬಸ್ ಪ್ರಯಾಣದ ಯೋಜನೆಗಳ ಪುಣ್ಯದ ಫಲದಿಂದ ಸಾರಿಗೆ ಸಚಿವರು ಮುಂದಿನ ದಿನಗಳಲ್ಲಿ ರಾಜ್ಯದ ಸಿಎಂ ಆಗುವ ಡಿಸಿಎಂ ಆಗುವ, ಮಗಳಿಗೆ ಒಳ್ಳೆಯ ರಾಜಕೀಯ ಭವಿಷ್ಯ ಸಿಗಲಿ ಎನ್ನುತ್ತಿರುವ ದೊಡ್ಡ ಸಂಖ್ಯೆಯ ಸಾರಿಗೆ ಭಕ್ತರ ಆಶೀರ್ವಾದ, ಭಗವಂತನ ವರದಿಂದ ಸಾರಿಗೆ ಸಚಿವರು ಸಿ.ಎಂ. ಆಗುವ ದಿನಗಳು ದೂರ ಇಲ್ಲ ಎನ್ನುವ ಭಕ್ತರ ಕನಸು ನಿಜವಾಗುವುದೇ?

-ಮಂಜುಳಾ ರಾಮಶೇಷ ಹುಲಿಮಂಗಲ

ಭಟ್ಟರ್ ಸ್ಕಾಚ್

● **ರಂಗ ರಾಮಾನುಜ, ಮೇಲುಕೋಟೆ**
ಭಟ್ರೇ, ಕುಮಾರಣ್ಣನ ನಾಟಿ ಕೃಷಿ ಆಸಕ್ತಿ ತಿಳಿದಿದ್ದರೂ, ಅದನ್ನು ಕೊಡದೇ ಅವರ ಕೈಗೆ ಕಬ್ಬಿಣ ಹಿಡಿಸಿದ್ದು ಸರಿಯಾ?
– ಅವರ ಕೈಗೆ ಏನೇ ಹಿಡಿಸಿದರೂ ನಾಟಿ ಮಾಡ್ತಾರೆ ಎಂದು ಮೋದಿ ಅಂದುಕೊಂಡಿರಬಹುದಾ?!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ರೇವಣ್ಣ ಫ್ಯಾಮಿಲಿ ಕುರಿತು ಸಾಕ್ಷ್ಯ ಚಿತ್ರ ನಿರ್ಮಿಸಿದರೆ ಹೇಗಿರುತ್ತೆ?
– ಅನ್ ಇಂಟೆರೆಸ್ಟಿಂಗ್!

● **ಆವಿಕ್ ಗೊಂದಿಮನೆ, ಕಡೂರು**
ಭಟ್ರೇ, ದರ್ಶನ್ ಜೈಲಿನಲ್ಲಿರುವುದನ್ನು ನೋಡಲು ಆಗ್ತಾ ಇಲ್ಲವಲ್ಲ?
– ರೇಣುಕಾಸ್ವಾಮಿಗೆ ಚಿತ್ರಹಿಂಸೆ ಕೊಟ್ಟು ಕೊಲೆಯಾಗಿದ್ದನ್ನೂ ನೋಡಲು ಆಗ್ತಾ ಇಲ್ಲ!

● **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಹದಿನೈದು ವರ್ಷ ಶಿಕ್ಷಣ ಮುಗಿಸಿ ಕೆಲಸಕ್ಕೆ ಸೇರಿದ್ರೆ 15 ಸಾವಿರ ಸಂಬಳ ಕೊಡ್ತೀವಿ ಅಂತಾರಲ್ಲ?
– ಇನ್ನು ಹದಿನೈದು ವರ್ಷ ಬಿಟ್ಟು ಬರ್ತೀನಿ ಅಂತ ಹೇಳಬೇಕಿತ್ತು!

● **ರುಕ್ಕು, ಚಾಮರಾಜಪೇಟೆ**
ಕಾಲೇಜ್ ಹುಡುಗಿಯರನ್ನು ಸಪ್ಪೆಯಾಗಿ ರೇಗಿಸುವ ಇಂದಿನ ಹುಡುಗರು 'ನಾಗರಹಾವು' ಚಿತ್ರದ ಅಂಬರೀಷ್ ಜಲೀಲ್ ಪಾತ್ರವನ್ನು ಏಕೆ ಅನುಕರಿಸುತ್ತಿಲ್ಲ?
– ಆ ರೇಂಜಿಗೆ ಹೋದರೆ, 'ರೇಣುಕಾಸ್ವಾಮಿ' ಅಂತ ಅಂದುಕೊಂಡ್ರೆ?!

● **ಎಂ. ಪರಮೇಶ್ವರ, ಮದ್ದಿಹಳ್ಳಿ**
ಸಾರ್, ಖಳನಾಯಕನನ್ನು ಬಿಡಿಸಲು ಆಗದೇ ಅಳುತ್ತಿರುವ ಆ ಸಚಿವ ಯಾರು?
– ಈ ಕುರಿತು ಆ ಸಚಿವರನ್ನು ಕೇಳಿದ್ರೆ ಕಣ್ಣೊರೆಸಿಕೊಳ್ಳೋದೇ?!

● **ಉಮೇಶ್ ಎಂ. ಶಿರಾ, ರಾಮನಗರ**
ಭಟ್ರೇ, ಗಂಡ–ಹೆಂಡತಿ ನಡುವೆ ಜಗಳ ಆದಾಗ ಹೆಂಡತಿ ಬಾಯಿಂದ ಬರುವ ಮೊದಲ ಶಬ್ದ ಯಾವುದು?
– ಅದ್ಯಾವ ಶಬ್ದವೇ ಆದರೂ, ಗಂಡ ಕಿವಿಗೊಡುವುದಿಲ್ಲವಲ್ಲ?!

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಯಾಕೋ ಜಸ್ಟ್ ಪಾಸ್ ಅಂತ ಕೇಳಿದ್ರೆ 'ಇನ್ನೆಲ್ಲ ಫೇಲು, ನಾನೇ ಮೇಲು' ಅಂತ ವಿದ್ಯಾರ್ಥಿಯೊಬ್ಬ ಹೇಳ್ತಾನಲ್ಲ?
– ತನ್ನ ಸಾಧನೆಯನ್ನೂ ಹೇಳಿಕೊಳ್ಳಬಾರದು ಅಂತ ನಿರೀಕ್ಷಿಸುವುದು ತಪ್ಪಲ್ಲವೇ, ಗುರುನಾರಾಯಣ?!

● **ಅಲಮೇಲು, ಮೇಲುಕೋಟೆ**
ಭಟ್ರೇ, ನಿಮ್ಮ ಅಭಿಮಾನಿಯಾದ ನಾನು 'ವಿ ಭಟ್ ಸಂಘಟನೆ' ಹುಟ್ಟುಹಾಕೋಣ ಅಂತಿದ್ದೇನೆ. ಏನಂತೀರಿ?
– ಮಾಜಿ ಪ್ರೇಯಸಿಯರೆಲ್ಲ ಒಟ್ಟಾದರೆ ಕಷ್ಟ!

ಹಾಡಿ ಹಕ್ಕಲು ಹೊಲಗಳ ಸಾಂಗತ್ಯದಲ್ಲಿ

ಶಶಾಂಕಣ

ಶಶಿಧರ ಹಾಲಾಡಿ
shashidhara.halady@gmail.com

ನಮ್ಮೂರಿನ ಕನ್ನಡದಲ್ಲಿ ಒಂದು ಗಾದೆಯಿದೆ 'ಕನ್ನಡ ಭಾಷೆಗೆ ಹನ್ನೆರಡು ಅರ್ಥ!' ತಮ್ಮ ಭಾಷಾಪ್ರಭೇದವನ್ನು ಅವರವರೇ ತುಸು ಅಭಿಮಾನದಿಂದ, ಅದೇ ಕಾಲದಲ್ಲಿ ತುಸು ತಮಾಷೆಗೂ ಒಡ್ಡಿಕೊಳ್ಳುತ್ತಾ ಆಡುವ ಗಾದೆಯಿದು. ಕರಾವಳಿಯ ಒಂದೆರಡು ತಾಲೂಕುಗಳಲ್ಲಿ ಆಡುವ ಈ ಭಾಷಾ ಪ್ರಭೇದವನ್ನು 'ಕುಂದಗನ್ನಡ' ಎಂದು ಕರೆಯುವುದಿದೆ. ವರ್ಷಕ್ಕೆ ನಾಲ್ಕು ತಿಂಗಳುಗಳ ಕಾಲ ಮಳೆ ಸುರಿಯುತ್ತಿದ್ದು, ಆ ದಿನಗಳಲ್ಲಿ ನದಿ, ತೋಡು, ಹಳ್ಳ, ಕೊಳ್ಳಗಳು ಹರಿಯುವ ನೀರಿನಿಂದ ತುಂಬಿದ್ದು, ಸುತ್ತಲಿನ ಪ್ರದೇಶದುದ್ದಕ್ಕೂ ಹಲವು ದ್ವೀಪ ಸದೃಶ ಭಾಗಗಳು ನಿರ್ಮಾಣಗೊಳ್ಳುತ್ತಿದ್ದ ಕಾಲದಲ್ಲಿ, ಕೆಲವೇ ಮೈಲು ದೂರ ಚಲಿಸಿದರೂ, ಭಾಷೆಯ ಬಳಕೆಯಲ್ಲಿ ಸ್ವಲ್ಪ ವ್ಯತ್ಯಾಸ ಕಾಣಿಸುತ್ತಿದ್ದ ಕಾಲದಲ್ಲಿ, ಸುತ್ತಲಿನ ಮತ್ತು ಘಟ್ಟದ ಮೇಲಿನ ಕನ್ನಡದ ವೈವಿಧ್ಯತೆಯನ್ನು ಕಮಡು, ಜನರ ಬಾಯಲ್ಲಿ ಬಂದ ಗಾದೆ ಅದು. ಈಗಲೂ, ಅಂದರೆ, ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ನದಿಗಳಿಗೆ, ತೋಡುಗಳಿಗೆ ಹಲವಾರು ಸೇತುವೆಗಳು ನಿರ್ಮಾಣಗೊಂಡ ನಂತರವೂ, ಈ ಗಾದೆಯು ತನ್ನ ಅರ್ಥವನ್ನು ಉಳಿಸಿಕೊಂಡಿದೆ.

ಇದಕ್ಕೆ ಪೂರಕವಾಗಿ ನಮ್ಮೂರಿನ ಕನ್ನಡದಲ್ಲಿರುವ 'ಹಾಡಿ' ಎಂಬ ಪದವನ್ನೇ ನೋಡೋಣ. 'ನಮ್ಮ ಮನೆಯ ಸುತ್ತಲೂ ಹಾಡಿ' ಎಂದು ನಮ್ಮೂರಿನ ಹಲವರು ಹೇಳುವುದು ಸಹಜ. ಹಾಡಿ, ಹಕ್ಕಲುಗಳ ನಡುವೆಯೇ ಸಣ್ಣ ಗಾತ್ರದ ಗದ್ದೆಬೈಲುಗಳನ್ನು ರೂಪಿಸಿ, ಅಲ್ಲೇ ಬತ್ತ ಬೆಳೆಯುತ್ತಾ, ಪ್ರಕೃತಿಯ ನಡುವೆ ದೂರ ದೂರದಲ್ಲಿ ಮನೆ ಕಟ್ಟಿಕೊಂಡು, ಬದುಕು ರೂಪಿಸಿಕೊಂಡವರು ನಮ್ಮ ಪ್ರದೇಶದವರು. ಕನ್ನಡನಾಡಿನ ಇತರ ಕೆಲವು ಭಾಗದವರಿಗೆ 'ಹಾಡಿ' ಎಂದರೆ 'ಮನೆ!'. ಆದ್ದರಿಂದ, 'ನಮ್ಮ ಮನೆಯ ಸುತ್ತಲೂ ಹಾಡಿ' ಎಂಬ ಮಾತು ಅವರಿಗೆ ವಿಚಿತ್ರ ಅರ್ಥವನ್ನೂ ಕೊಡಬಹುದು! ನಮ್ಮೂರಿನವರು ಆಡುವ ಭಾಷೆಯಲ್ಲಿ ಹಾಡಿ ಎಂದರೆ ಹದವಾದ ಕಾಡು ಎಂಬರ್ಥ. ಇಂತಹ ಭಾಷಾ ಪ್ರಯೋಗಗಳಿಂದಾಗಿಯೇ, 'ಕನ್ನಡ ಭಾಷೆಗೆ ಹನ್ನೆರಡು ಅರ್ಥ' ಎಂಬ ಗಾದೆ ಸೃಷ್ಟಿಯಾಗಿರಬಹುದು.

ನಿಜ, ನಮ್ಮ ಹಿಂಭಾಗದಲ್ಲಿ ಹಾಡಿ ಇದೆ, ಎದುರಿನ ಗಡ್ಡೆ ಬೈಲು ದಾಟಿ ನಡೆದರೆ, ಅಲ್ಲೂ ಹಾಡಿಯಿದೆ. ಪಶ್ಚಿಮ ದಿಕ್ಕಿಗೆ ಸುಮಾರು ಎರಡು ಫರ್ಲಾಂಗ್ ನಡೆದರೆ, ಸೊಪ್ಪಿನಅಣೆಯ ದೊಡ್ಡ ಹಾಡಿ ಇದೆ. ದೊಡ್ಡ ದೊಡ್ಡ ಮರಗಳು ಬೆಳೆದಿರುವ, ನಾನಾ ಪ್ರಭೇದದ ಸಸ್ಯ ವರ್ಗ ತುಂಬಿರುವ ಪ್ರದೇಶವೇ ಹಾಡಿ. ನಮ್ಮ ಮನೆ ಮುಂಭಾಗದ ಹಾಡಿಯಲ್ಲಿ ಬೋಗಿ ಮರಗಳು ಜಾಸ್ತಿ; ಅದರಲ್ಲೂ ಎರಡು ವಿಧ – ಕಿರಿ ಎಲೆಯ ಕಿರಾಲು ಬೋಗಿ ಮತ್ತು ದೊಡ್ಡ ಎಲೆಯ ಹಿರಾಲು ಬೋಗಿ. ಇದರ ಜತೆ, ಅಂಡಾರು, ನೇರಳೆ, ಸಳ್ಳೆ, ಬಾಗಾಳು ಮತ್ತು ಇತರ ಹಲವು ಪ್ರಭೇದದ ಮರಗಳೂ ಇಲ್ಲಿವೆ (ಇದ್ದವು). ಹಾಡಿಯಲ್ಲಿ ಮರಗಳ ದಟ್ಟಣೆ ಜಾಸ್ತಿ; ಹಳೆಯ ಮರಗಳು ತುಂಬಿದ ಹಾಡಿಯ ನೆಲದ ಮೇಲೆ, ಸೂರ್ಯನ ಕಿರಣ ಬೀಳದೆಯೂ ಇರಬಹುದು. ಹಸಿರೆಲೆಗಳ ಚಪ್ಪರವನ್ನೇ ಹೊದ್ದಿರುವ ಈ ಹಾಡಿಯ ಕ್ಯಾನೊಪಿಯನ್ನು ಆಶ್ರಯಿಸಿ, ಮಂಗ, ಬುಕ್ಕ, ಹರ್ಗ, ಬರ್ಕ, ಮೊಲ, ಹಾವು ಮೊದಲಾದ ಪ್ರಾಣಿಗಳು ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತವೆ. ಕೆಲವು ಹಾಡಿಗಳಲ್ಲಿ ಹುಲಿ, ಜಿಂಕೆ, ಕುರ್ಕ, ನಾಯಿಕುರ್ಕಗಳೂ ಹಿಂದೆ ಇದ್ದವು. ಹಲವು ಹಕ್ಕಿಗಳ ಆಶ್ರಯತಾಣವಿದು. ಮೂರು ನಾಲ್ಕು ಪ್ರಭೇದದ ಗೂಬೆಗಳ ಮನೆಯೂ ಹೌದು. ನಮ್ಮ ಮನೆಯ ಹಿಂಭಾಗದ ಹಾಡಿಯಲ್ಲಿ, ಮೀನು ಗೂಬೆ, ದೊಡ್ಡ ಕೊಂಬಿನ ಗೂಬೆ, ಚಿಟ್ಟ ಗೂಬೆಯನ್ನು ನಾನು ಕಂಡಿದ್ದುಂಟು. ಹರನ ಗುಡ್ಡೆಯ ಹತ್ತಿರದಲ್ಲಿರುವ, ಇನ್ನಷ್ಟು ದಟ್ಟವಾದ ಹಾಡಿಯಲ್ಲಿ ಫಾರೆಸ್ಟ್ ಈಗಲ್ ಔಲ್‌ನ ಇರವನ್ನು ಗುರುತಿಸಿದ್ದುಂಟು. ಮನೆಯಿಂದ ಕೆಲವೇ ಅಡಿಗಳಷ್ಟು ದೂರದಲ್ಲಿಯೂ ಇರಬಹುದಾದ ಹಾಡಿಯಲ್ಲಿ ವಾಸಿಸುತ್ತಿದ್ದ ಇಷ್ಟೊಂದು ಪ್ರಾಣಿ, ಪಕ್ಷಿಗಳ ನಡುವೆಯೇ ಬದುಕನ್ನು ಬ್ಯಾಲೆನ್ಸ್ ಮಾಡಿಕೊಳ್ಳಬೇಕಾದ ಅನಿವಾರ್ಯತೆ ನಮ್ಮ ಹಳ್ಳಿಗರದ್ದು.

ಇಂತಹ ಹಾಡಿಯು ಹಲವು ಬಾರಿ, ಬತ್ತದ ಗದ್ದೆಗೆ ಲಗತ್ತಾಗಿರುತ್ತಿದ್ದ ಕುಮಕಿ ಪ್ರದೇಶವೂ ಹೌದು – ಆದ್ದರಿಂದ, ಕುಮ್ಕಿಯಲ್ಲಿ ಬೆಳೆದ ಮರ ಗಿಡಗಳ ಮೇಲೆ ಆ ಗದ್ದೆಯ ಮಾಲಿಕರ ಭಾಗಶಃ ಮಾಲಿಕತ್ವ – ತಮ್ಮ ಹಾಡಿಯ ಆಯ್ದ ಮರಗಳನ್ನು ಕಡಿದು ಮಾರುವ ಅವಕಾಶ ಅವರಿಗಿದೆ. ಅಂತಹ ಅನುಮತಿ ಪತ್ರದ ಮರೆಯಲ್ಲಿ, 'ಹಾಡಿ ಕಡಿಯುವ' ವ್ಯವಹಾರ ಬೆಳೆದು, ಹಳೆಯ ಮತ್ತು ಕೆಲವೇ ಮರಗಳನ್ನು ಅಧಿಕೃತವಾಗಿ ಕಡಿಯುವುದರ ಜತೆಯಲ್ಲೇ, ಇದ್ದ ಬದ್ದ ಎಲ್ಲಾ ಸಸ್ಯಸಂಕುಲವನ್ನು ಕಡಿದು ಸಾಗಿಸುವ 'ಹಾಡಿ ಕಡಿಯುವ ಕಂತ್ರಾಟುದಾರರು' ತಮ್ಮ ಕೆಲಸವನ್ನು ನಿರಾತಂಕವಾಗಿ ಮಾಡಿದ್ದರಿಂದ, ಹಳೆಯ ಮರಗಳಿಂದ ತುಂಬಿರುವ ಹಾಡಿಯೇ ಕಣ್ಮರೆಯಾಗುವ ಸ್ಥಿತಿ ಇಂದು ಹಲವೆಡೆ ಎದುರಾಗಿದೆ. ಈಚಿನ ದಶಕಗಳಲ್ಲಿ ಅಂತಹ ಅಪಾರ ವೈವಿಧ್ಯದ ಹಾಡಿಗಳು, 'ಅಕೇಶಿಯಾ ಹಾಡಿ'ಯ ವೇಷ ಧರಿಸಿದ್ದರಿಂದ, ತೀವ್ರ ಎನಿಸುವ ಪರಿಸರ ಸಮಸ್ಯೆಯೂ ಉದ್ಭವವಾಗಿದ್ದು, ಅದರ ಕುರಿತಾದ ಚರ್ಚೆಯ ವ್ಯಾಪ್ತಿಯನ್ನು ಈ ಬರಹ ಹೊಂದಿಲ್ಲ. ಏಕೆಂದರೆ, ಹಾಡಿ–ಹೊಲ–ಹಕ್ಕಲು ಎಂಬ ಪದಗಳ ಅಂತರಂಗವನ್ನು ಇನ್ನಷ್ಟು ಬಗೆಯುವುದಿದೆ.

ನಮ್ಮೂರಿನ ನುಡಿಗಟ್ಟು, ಮಾತುಗಳಲ್ಲಿ 'ಹೊಲ', 'ಹೊಲಕ್ಕೆ ಹೋಗು' ಎಂಬ ಪದಗಳಿಗೆ ತುಸು ಭಯಮಿಶ್ರಿತ ಪ್ರಭಾವಳಿ ಇದೆ. ಕನ್ನಡ ನಾಡಿನ ಬಯಲು ಸೀಮೆಯವರಿಗೆ ಹೊಲ ಎಂದರೆ, ರಾಗಿ, ಜೋಳ ಬೆಳೆಯುವ ಜಾಗ ಎನಿಸಿದರೆ, ನಮ್ಮೂರಿನ ಭಾಷೆಯಲ್ಲಿ 'ಹೊಲ' ಎಂದರೆ, ಭಾರೀ ದಟ್ಟವಾದ, ಸಣ್ಣಗೆ ಹೆದರಿಕೆ ಹುಟ್ಟಿಸುವ ಕಾಡು. ಹಾಡಿಗೂ, ಹೊಲಕ್ಕೂ ಸ್ಪಷ್ಟ ವ್ಯತ್ಯಾಸವಿದೆ. ದೊಡ್ಡ ಮರಗಳೂ ಇರಬಹುದಾದ ಹಾಡಿಯು ಸಾಮಾನ್ಯವಾಗಿ ಊರಿನ ಸರಹದ್ದಿನಲ್ಲಿರುತ್ತದೆ; ಆದರೆ, ಭಯಂಕರ ಕಾಡು ತುಂಬಿರುವ ಹೊಲವು ಊರಿಂದ ಬಹುದೂರದಲ್ಲಿರಬಹುದು. 'ಹೊಲ' ಎಂದ ಕೂಡಲೇ ತುಸು ಭಯಮಿಶ್ರಿತ ಅನುಭವ; ದಟ್ಟ ಕಾಡು, ಮುಳ್ಳು ಗಿಡಗಳ ಪೊದೆಗಳು ತುಂಬಿರಬಹುದಾದ ಹೊಲದಲ್ಲಿ ಎಕರೆಗಟ್ಟಲೆ ಕಾಡು ಇರುತ್ತದೆ; ಎಷ್ಟೋ ಹೊಲಗಳ ಒಳಭಾಗಕ್ಕೆ ಸಾಗಲು ದಾರಿಯೂ ಇಲ್ಲದೇ ಇರಬಹುದು. ಹುಲಿ, ಚಿರತೆ, ಬರ್ಕ, ಜಿಂಕೆ, ಕಾಡುಕೋಣ, ಕಾನುಕುರಿ, ಕಾಡು ಹಂದಿ ಮೊದಲಾದ ಪ್ರಾಣಿಗಳ ಜತೆಯಲ್ಲೇ, ಜನರ ಕಲ್ಪನೆಯ ಕೂಸುಗಳೂ ಆಗಿರಬಹುದಾದ ಕೆಲವು ಪ್ರಾಣಿಗಳು ಮತ್ತು ದೆವ್ವ ಭೂತಗಳು ಇಲ್ಲಿ ವಾಸಿಸುತ್ತವೆ. ಹೆಡೆಯಲ್ಲಿ ಕೂದಲು ಇರುವ ಕಾಳಿಂಗ ಸರ್ಪ, ಜನರನ್ನು ತನ್ನ ಕೊಂಬೆಗಳಿಂದ ಹಿಡಿದು ತಿನ್ನುವ ಬೋಳು ಮರ, ಅಕಸ್ಮಾತ್ ತಾಗಿದರೆ ತೀವ್ರ ಜ್ವರ ಬಂದು ಜೀವವನ್ನೇ ತೆಗೆಯಬಲ್ಲ ಬಳ್ಳಿ – ಇಂತಹ ಹಲವು ಕಾಲ್ಪನಿಕವೂ ಆಗಿರಬಹುದಾದ ವಿಸ್ಮಯಗಳ ಆಗರವೇ ಈ ಹೊಲ. ಹೊಲಗಳಲ್ಲಿ ನಾನಾ ರೀತಿಯ ದೆವ್ವಗಳು, ಭೂತಗಳು ಇವೆ ಎಂದು ನಮ್ಮ ಹಳ್ಳಿಯ ಜನರು ತಿಳಿದಿದ್ದರು. ಹಿಂದಿನ ಶತಮಾನಗಳಲ್ಲಿ ಹೊಲದಲ್ಲಿ ಏನೇ ಕುಕೃತ್ಯ ನಡೆದರೂ, ಹೊರಜಗತ್ತಿಗೆ ತಿಳಿಯದೇ ಇರಬಹುದಾದಂತಹ ಸ್ಥಿತಿ. ಉದಾಹರಣೆಗೆ, ನಮ್ಮ ಹಳ್ಳಿಯಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ 'ಗುಮ್ಮೊಲ' (ಗುಮ್ಮ ಹೊಲ) ಎಂಬ ಪ್ರದೇಶದಲ್ಲಿರುವ ಜಲಪಾತದ ಬಳಿ, ಹಿಂದೆ ಕೊಲೆಗಳು ನಡೆಯುತ್ತಿದ್ದುದು ಸಾಮಾನ್ಯ ಎಂಬ ತಿಳಿವಳಿಕೆ ಇತ್ತು.

ಹಳ್ಳಿಗಳಿಂದ ಬಹುದೂರದಲ್ಲಿರಬಹುದಾದ ಹೊಲಗಳಲ್ಲಿನ ಕಾಡಿನ ದಟ್ಟಣೆಯು ಜನಸಾಮಾನ್ಯರಿಗೂ ವಿಸ್ಮಯ ಮತ್ತು ಭಯಗಳನ್ನು ಹುಟ್ಟಿಸುವ ತಾಣ. ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಹಲವು ಹೊಲಗಳಿದ್ದವು; ಈಚಿನ ದಶಕಗಳಲ್ಲಿ ಹೊಲಗಳ ನಡುವೆ ರಸ್ತೆಗಳು ನಿರ್ಮಾಣಗೊಂಡದ್ದರ ಜತೆಜತೆಯಲ್ಲೇ, ಅಲ್ಲಿನ ಮರಗಳನ್ನು ಕೆಲವರು ಕಡಿದು ಸಾಗಿಸಿದ್ದರಿಂದ, ಹೊಲಗಳ ಮೇಲಿದ್ದ ಭಯ ಕಡಿಮೆಯಾಗಿದೆ. ಅಂತಹ ದಟ್ಟ ಕಾಡು ಬೆಳೆದಿರುವ ಜಾಗಗಳನ್ನು ಈಚಿನ ದಶಕಗಳಲ್ಲಿ ರಬ್ಬರು ತೋಟವನ್ನಾಗಿಯೂ ಪರಿವರ್ತಿಸಲಾಗಿದ್ದು, ಅದರಿಂದಾಗಿ ವಾಣಿಜ್ಯ ಚಟುವಟಿಕೆಗೆ ಅವಕಾಶವಾಗಿದೆ, ಉದ್ಯೋಗ ಸೃಷ್ಟಿಗೂ ಹೇತುವಾಗಿದೆ ಮತ್ತು ಅದೇ ಕಾಲದಲ್ಲಿ ಪರಿಸರ ನಾಶಕ್ಕೂ ದಾರಿಯಾಗಿದೆ. ಹೊಲಗಳನ್ನು ಕಾಪಾಡಿದರೆ, ನಮ್ಮ ಪರಿಸರದ ಆರೋಗ್ಯವನ್ನು ಕಾಪಾಡಿದಂತೆ, ಕಾಲದಿಂದ ಕಾಲಕ್ಕೆ ಮಳೆಯಾಗಲು ಹೊಲಗಳಲ್ಲಿರುವ ಲಕ್ಷಾಂತರ ಮರಗಳ ಸಹಕಾರ ಅಗತ್ಯ; ನಮ್ಮೂರಿಗೆ ಮಾತ್ರವಲ್ಲ, ಘಟ್ಟ ಮೇಲಿನ ಪ್ರದೇಶಗಳಿಗೆ ಮಳೆಯಾಗಲು, ಹೊಲಗಳು ಹೊರಬಿಡುವ ನೀರಾವಿಯು ತುಂಬಾ ಅಗತ್ಯ. ಈಚಿನ ದಶಕಗಳಲ್ಲಿ ನಮ್ಮ ಸೀಮೆಯ ಹೊಲಗಳ ನಿಧಾನ ನಾಶವು ಮತ್ತೊಂದೇ ಆಯಾಮದ ಚರ್ಚೆಗೆ ದಾರಿಮಾಡಿಕೊಡುತ್ತದೆ. ಇರಲಿ, ಈಗ ಈ ಬರಹದ ವ್ಯಾಪ್ತಿಗೊಳಪಡುವ ಹಕ್ಕಲಿನೊಳಗೆ ಕಣ್ಣು ಹಾಯಿಸೋಣ.

ನಮ್ಮ ಮನೆಯ ಹಿಂದೆ ಹಾಡಿ ಇದೆ ಎಂದೆನಲ್ಲ, ಅದಕ್ಕೆ ಒತ್ತಿಕೊಂಡಂತೆ, ಅದಕ್ಕೂ ಮೊದಲೇ ಸಿಗುವುದು ಹಕ್ಕಲು. ಎಷ್ಟೋ ಬಾರಿ ಹಾಡಿ, ಹಕ್ಕಲುಗಳು ಒಂದಕ್ಕೊಂದು ಬೆರೆತು, ಹಾಲು–ಜೇನಿನಂತಿರುತ್ತವೆ ಎಂದು ಹೇಳಬಹುದಾದರೂ, ಅದು ತುಸು ಕ್ಲೀಷೆಯ ಮಾತಾದೀತು. ಸಣ್ಣ ಗಾತ್ರದ ಮರಗಳು, ಬಳ್ಳಿಗಳು, ಬಿಳಲುಗಳು ಇರುವ ಜಾಗ ಹಕ್ಕಲು; ಹಕ್ಕಲಿನಲ್ಲಿ ಪುಟ್ಟ ಪುಟ್ಟ ಸಮತಟ್ಟು ಜಾಗವೂ ಇರಬಹುದು– ಅಲ್ಲಿ ಮಳೆಬಿದ್ದಾಗ ಹಸಿರು ಹುಲ್ಲು ಹುಟ್ಟುವುದರಿಂದ, ದನಕರುಗಳ ಮೇಯುವ ಜಾಗವೂ ಆದೀತು. ಹಾಡಿ–ಹಕ್ಕಲುಗಳ ವ್ಯತ್ಯಾಸವನ್ನು ಗುರುತಿಸಲು ಅಲ್ಲೆಲ್ಲಾ ಓಡಾಡಿದ ಅನುಭವವೂ ಅಗತ್ಯ. ಒಂದಂತೂ ಸ್ಪಷ್ಟ – ಹಕ್ಕಲಿನಲ್ಲಿ ಬೃಹದಾಕಾರದ ಮರಗಳಿರುವುದು ಕಡಿಮೆ. ಮಧ್ಯಮ ಗಾತ್ರದ ಮರಗಳೇ ಜಾಸ್ತಿ; ಹಕ್ಕಲುಗಳು ಸಾಮಾನ್ಯವಾಗಿ ಮನೆಗೆ ಹತ್ತಿರವಾಗಿರುತ್ತವೆ. ಹಕ್ಕಲಿನ ಮರಗಿಡಗಳನ್ನು ಕಡಿಯದೇ, ಹಾಗೆಯೇ ಬಿಟ್ಟರೆ, ಒಂದೆರಡು ದಶಕಗಳಲ್ಲಿ ಅಲ್ಲಿ ಒಂದು ಹಾಡಿ ಇರುತ್ತದೆ.

ಮಳೆ ಬಿದ್ದ ಒಂದೆರಡು ವಾರಗಳಲ್ಲಿ (ಸಾಮಾನ್ಯವಾಗಿ ಜೂನ್–ಜುಲೈ) ಸಿಗುವ ನೇರಳೆ ಹಣ್ಣು ಮತ್ತು ಸಳ್ಳೆ ಹಣ್ಣುಗಳನ್ನು ತಿನ್ನಲು ಹಕ್ಕಲು ಪ್ರಶಸ್ತವಾದ ತಾಣ; ಕೈಗೆಟಕುವ ಎತ್ತರದಲ್ಲಿ ಆ ಹಣ್ಣುಗಳು ಧಂಡಿಯಾಗಿ ಸಿಗುತ್ತವೆ. ಬೇಸಗೆಯಲ್ಲಿ ಮುರಿನ ಹಣ್ಣು, ಕಾಟು ಮಾವಿನ ಹಣ್ಣುಗಳು, ಹೆಬ್ಬಲಸಿನ ಹಣ್ಣು, ಜುಳ್ಕನ ಹಣ್ಣುಗಳು ಹಕ್ಕಲಿನಲ್ಲೇ ಸಿಗುವುದು ಜಾಸ್ತಿ. ಈ ರೀತಿಯ ಗಿಡಗಳು ಹಾಡಿಯಲ್ಲೂ ಇರಬಹುದಾದರೂ, ಅವು ಅಲ್ಲಿ ಎತ್ತರವಾಗಿರುವುದರಿಂದ, ಮಕ್ಕಳ ಕೈಗೆ ಸಿಗುವುದು ಕಷ್ಟ. ಹಕ್ಕಲಿನ ಇನ್ನೊಂದು ವಿಶೇಷವೆಂದರೆ, ಮಧ್ಯಮ ಗಾತ್ರದ ಮರಗಳಿರುವುದರಿಂದ, ಪಕ್ಷಿವೀಕ್ಷಣೆ ಇಲ್ಲಿ ಸುಲಭ. ನಮ್ಮ ಮನೆಯ ಹಿಂಭಾಗದ ಹಕ್ಕಲಿನಲ್ಲಿನ ಒಂದು ಪುಟ್ಟ ಕಂಕುಳು ಮರವನ್ನು (ದಾಲ್ಚಿನ್ನಿ ಮರದ ಸಂಬಂಧಿ) ಏರಿ ಕುಳಿತು, ನಾನು ಡಿಗ್ರಿ ಪರೀಕ್ಷೆಗೆ ಓದುವ ನೆಪ ಮಾಡಿಕೊಂಡು ಬೆಳಗಿನಿಂದ ಮಧ್ಯಾಹ್ನದ ತನಕ ಅಲ್ಲಿದ್ದು, ಹಲವು ಪ್ರಭೇದದ ಹಕ್ಕಿಗಳನ್ನು ಗುರುತಿಸಿದ್ದುಂಟು. ಹಕ್ಕಲಿನಲ್ಲಿ ಬಿದ್ದ ಮರಗಿಡಗಳ ಕೊಂಬೆಗಳನ್ನು ಆರಿಸಿ, ಒಲೆ ಉರಿಸುವ ಪರಿಪಾಠ ಹಿಂದೆ ಇತ್ತು.

ದನಕರುಗಳು ಹಕ್ಕಲಿನಲ್ಲಿ ಬೆಳೆದ ಹಸಿರು ಹುಲ್ಲನ್ನು ಮೇಯುವುದು ತೀರಾ ಸಾಮಾನ್ಯ ದೃಶ್ಯ; ಹುಲ್ಲಿನ ಜತೆಯಲ್ಲೇ, ಅಲ್ಲಿನ ಇತರ ಗಿಡಗಳ ಕುಡಿಗಳನ್ನೂ ಅವು ತಿಂದು ಬರುವುದರಿಂದಾಗಿ, ಅಲ್ಲಿ ಮೆಂದ ಹಸುವಿನ ಹಾಲು ಬಹಳ ರುಚಿ. ಮಲೆನಾಡು ಗಿಡ್ಡ ಪ್ರಭೇದದ ಆ ಹಸುಗಳು ಕೊಡುತ್ತಿದ್ದುದು ತೀರಾ ಕಡಿಮೆ ಹಾಲು – ಸರಾಸರಿ ಎರಡು ಸಿದ್ದೆ. (ಸುಮಾರು ಅರ್ಧ ಲೀಟರ್). ಆದರೆ, ಅದರ ರುಚಿ, ಅದರಿಂದ ತಯಾರಿಸಿದ ಮಜ್ಜಿಗೆಯ ರುಚಿ ಬೇರೆಲ್ಲೂ ಕಾಣೆ. ಪ್ರಕೃತಿಯಲ್ಲಿ ಸಹಜವಾಗಿ ಬೆಳೆದ ಹುಲ್ಲಿನಿಂದಲೇ, ಆ ಹಾಲಿಗೆ ಅಷ್ಟು ರುಚಿ ಎಂಬುದಕ್ಕೆ ಆಗಾಗ ನಮಗೆ ಪುರಾವೆಯೂ ದೊರಕುತ್ತಿತ್ತು. ಅಕಸ್ಮಾತ್ ಹಸು ಕಾಸಾನು ಕುಡಿ ತಿಂದು ಬಂದ ದಿನ, ಹಾಲು ಕುಡಿದರೆ ಕಹಿ ರುಚಿ! ಏಕೆಂದರೆ, ಕಾಸಾನು ಅಥವ ಕಾಸರ್ಕನ ಎಲೆಯು ತೀರಾ ಎಂದರೆ ತೀರಾ ಕಹಿ; ಬೇರೇನೋ ಎಲೆಯ ಕುಡಿ ತಿನ್ನುವಾಗ ಕಾಸಾನು ಕುಡಿಯನ್ನೂ ಸೇರಿಸಿ ಹಸು ತಿಂದಾಗ, ಅದು ನೀಡುವ ಹಾಲು ಸಹ ಕಹಿಯಾಗುತ್ತದೆ ಎಂಬುದು ಅಚ್ಚರಿಯೂ ಹೌದು!

ಇಂತಹ ವೈವಿಧ್ಯಮಯ ಹಕ್ಕಲಿನ ಬೆರಗುಗಳು ಹಲವು; ನಮ್ಮೂರಿನ ಹಾಡಿ, ಹಕ್ಕಲು, ಹೊಲಗಳ ನಡುವೆ ಓಡಾಡುವ ಅನುಭವವೇ ಅನನ್ಯ; ಹಸಿರಿನ ಸುವಾಸನೆಯನ್ನು ಹೀರುತ್ತಾ ಹಕ್ಕಲಿನ ನಡುವೆ ಬರಿಗಾಲಿನಲ್ಲಿ ನಡೆಯುವ ಅನುಭೂತಿಯು, ನನ್ನ ಮನದಲ್ಲಿ ಗಾಢವಾದ ಸಕಾರಾತ್ಮಕ ಹೆಜ್ಜೆಗುರುತುಗಳನ್ನು ಉಳಿಸಿಬಿಟ್ಟಿದೆ.

ನ್ಯಾಯ ದೀವಿಗೆ

ವಸಂತ್ ಗಿಳಿಯಾರ್

ಬದಲಾಗುತ್ತಿದೆ ಭಾರತ

ಭಾರತೀಯ ನ್ಯಾಯ ಸಂಹಿತೆ, ನವಭಾರತದ ಕಾನೂನು ಪರಿಭಾಷೆಗೆ ಹೊಸ ಮೌಲ್ಯವನ್ನು, ಹೊಸ ಶಕ್ತಿಯನ್ನು ತುಂಬಬಲ್ಲಕಾಯಿದೆ. ಜುಲೈ ಒಂದರಿಂದಲೇ ಅದರ ಅನುಷ್ಠಾನ ನಡೆಯಲಿದೆ ಎನ್ನುವುದಾಗಿ ಕೇಂದ್ರದ ಸಚಿವಾಲಯ ಹೇಳುತ್ತಿದೆ. ಭಾರತೀಯ ನ್ಯಾಯ ಸಂಹಿತ, ಭಾರತೀಯ ಸುರಕ್ಷಾ ಸಂಹಿತ, ಭಾರತೀಯ ಸಾಕ್ಷಿ ಅಧಿನಿಯಮ್ ಎನ್ನುವ ಮೂರೂ ವಿಭಾಗದಲ್ಲಿಯೂ ಮಹತ್ತರವಾದ ಬದಲಾವಣೆಗಳು ಇದರಲ್ಲಿದೆ. ಕೇಂದ್ರದ ಗೃಹಮಂತ್ರಿ ಅಮಿತ್ ಶಾ ರೂಪಿಸಿದ ಈ ಬದಲಾವಣೆ ಅಪರಾಧಿಗಳು ಸುಲಭವಾಗಿ ಬಚಾವ್ ಆಗುವ ಎಲ್ಲ ಅವಕಾಶವನ್ನೂ ತಲೆಕೆಳಗೆ ಮಾಡಲಿದೆ.

ಬದಲಾದ ಮೂರೂ ಕಾಯ್ದೆಗಳ ಅನುಷ್ಠಾನ ಪ್ರಾರಂಭದಲ್ಲಿ ಕೊಂಚ ಗೊಂದಲವನ್ನ ಉಂಟು ಮಾಡಬಹುದು. ಹಳೆಯ ಕಾನೂನಿಗೆ ಬದಲಾಗಿ ಹೊಸ ಕಾನೂನು ಪಾಲನೆ ಪೊಲೀಸರಿಗೂ, ನ್ಯಾಯಮೂರ್ತಿಗಳಿಗೂ, ನ್ಯಾಯವಾದಿಗಳಿಗೂ ಅಧ್ಯಯನಕ್ಕೆ ತೊಡಗಿಸಬಹುದು. ಕೇಂದ್ರ ಸರಕಾರವೇ ರಾಜ್ಯಮಟ್ಟದಲ್ಲಿ ಅದಕ್ಕಾಗಿ ತರಭೇತಿ ಸೌಲಭ್ಯವನ್ನು ಒದಗಿಸುತ್ತಿದೆ. ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ ಅದಕ್ಕಾಗಿ ಈಗಾಗಲೇ ತರಬೇತಿಯನ್ನೂ ಪ್ರಾರಂಭ ಮಾಡಿಯಾಗಿದೆ. ಅದರ ಜೊತೆಗೇ ನ್ಯಾಯಾಂಗ ಅಕಾಡಮಿಗಳು, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಯಲಗಳು ಕೂಡ ಇದಕ್ಕಾಗಿ ತರಬೇತಿ ನಿಡುತ್ತವೆ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಅಡಿಯಲ್ಲಿ ಅಪರಾಧದ ಸ್ವರೂಪವನ್ನು ಅವಲಂಬಿಸಿ ಸಾಮಾನ್ಯ ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಪೊಲೀಸ್ ಕಸ್ಟಡಿಯನ್ನು ಹದಿನೈದು ದಿನದಿಂದ ತೊಂಬತ್ತು ದಿನಗಳ ತನಕ ಹೆಚ್ಚಿಸಲಾಗಿದೆ ಎನ್ನಲಾಗುತ್ತಿದೆ.

ಭಾರತೀಯ ನ್ಯಾಯ ಸಂಹಿತಾ ಒಟ್ಟು 358 ವಿಭಾಗಗಳನ್ನ ಹೊಂದಿರುತ್ತದೆ, ಈ ಮಸೂದೆಗೆ ಒಟ್ಟು ಇಪ್ಪತ್ತು ಹೊಸ ಅಪರಾಧವನ್ನೂ ಸೇರಿಸಲಾಗಿದೆ, ದಂಡದ ಮತ್ತು ಶಿಕ್ಷೆಯ ಸ್ವರೂಪವನ್ನೂ ಬದಲಿಸಲಾಗಿದೆ, ಕೆಲವು ಪ್ರಕರಣಗಳಿಗೆ ಕಠಿಣವಾದ ಕಾಯ್ದೆಗಳಿವೆ, ಅದೆಲ್ಲವೂ ಕಟ್ಟುನಿಟ್ಟಿನಲ್ಲಿ ಅನುಷ್ಠಾನಗೊಳ್ಳುತ್ತದೆ ಹೇಗೆಂದರೆ ವಕೀಲರಿಗೆ ಹಿಂದಿನ ತೀರ್ಪುಗಳ ಆಧಾರದಲ್ಲಿ ವಾದ ಮಾಡಲು ಅವಕಾಶ ಸಿಗುವುದು ಕಷ್ಟ. ಕುತೂಹಲಕಾರಿ ಸಂಗತಿ ಎಂದರೆ ಆರು ಸಾಮಾನ್ಯ ಪ್ರಕರಣದಲ್ಲಿ ಕಮ್ಯೂನಿಟಿ ಸರ್ವೀಸ್ ತರಹದ ಶಿಕ್ಷೆಗಳಿವೆ. ರಸ್ತೆಯಲ್ಲಿನ ಕಸ ಎತ್ತುವುದು, ರಸ್ತೆ ಗುಡಿಸುವುದು, ವಾಹನ ನಿರ್ವಹಣೆ ಮಾಡುವುದು ಇಂಥಹ ಹಲವು ಕೆಲಸಗಳನ್ನ ಅಪರಾಧಿಯಿಂದ ಮಾಡಿಸುವ ಶಿಕ್ಷೆಗಳೂ ಇದರಲ್ಲಿದೆ.

ಅದೇ ರೀತಿಯಲ್ಲಿ ಭಾರತೀಯ ನಾಗರೀಕ ಸಂಹಿತೆಯಲ್ಲಿ 531 ವಿಭಾಗಗಳಿವೆ. ಆ ಮಸೂದೆಯಲ್ಲಿ ಒಟ್ಟು 177 ನಿಬಂಧನೆಗಳನ್ನು ಬದಲಿಸಲಾಗಿದೆ ಎನ್ನಲಾಗುತ್ತಿದೆ. ಅಂದರೆ ತಿದ್ದುಪಡಿ ತರಲಾಗಿದೆ, ದಂಡದ ಮೊತ್ತವನ್ನ ಮತ್ತು ಶಿಕ್ಷೆಯ ಅವಧಿಯನ್ನ ಹೆಚ್ಚಿಸಲಾಗಿದೆ. ಹಿಂದೆಲ್ಲ ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದ ಅಪರಾಧಿಗಳಿಗೆ ಇನ್ನುಮುಂದೆ ಸುಲಭದಲ್ಲಿ ಬಚಾವ್ ಆಗೋದು ಕಷ್ಟ ಕಷ್ಟ. ಇಲ್ಲಿ ಆಡಿಯೋ, ವಿಡಿಯೋ ಸಾಕ್ಷಿಗಳನ್ನೂ ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಭಾರತೀಯ ಸಾಕ್ಷಿ ಅಧಿನಿಯಮ ಮಸೂದೆಯಿಂದ ಒಟ್ಟು 14 ವಿಭಾಗಗಳನ್ನು ರದ್ದುಮಾಡಲಾಗಿದೆ. ಅದರಲ್ಲಿ ಒಟ್ಟು ಇಪ್ಪತ್ತನಾಲ್ಕು ನಿಬಂದನೆಗಳನ್ನು ಬದಲಾಯಿಸಲಾಗಿದೆ. ಬ್ರಿಟೀಷ್ ಕಾನೂನುಗಳನ್ನೇ ನೆಚ್ಚಿಕೊಂಡು ಇಲ್ಲಿಯ ತನಕವೂ ಆಡಳಿತ ನಡೆಸಿದ್ದ ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಯ ನವಯುಗ ಆರಂಭಗೊಳ್ಳುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ದೇಶದ್ರೋಹದ ಮಾತಾಡುತ್ತಿದ್ದವರಿಗೆ, ಇದೆಲ್ಲವೂ ಬಿಸಿ ತುಪ್ಪವಾಗಲಿದೆ. ಇಲ್ಲಿಯ ತನಕದ ಕಾನೂನಿನ ಪರಿಭಾಷೆಯೇ ಬೇರೆ, ಇನ್ನು ಮುಂದಿನ ಅಪರಾಧಗಳಲ್ಲಿ ಕಾನೂನು ಪರಿಗಣಿಸುವ ಕ್ರಮಗಳೇ ಬೇರೆ. ಇಷ್ಟು ದಿನಗಳ ಕಾಲ ಸಣ್ಣ ಪ್ರಕರಣವಾಗಿ ಪರಿಗಣಿಸಲ್ಪಡುತ್ತಿದ್ದದ್ದು ಇನ್ನು ಮುಂದೆ ಗಂಭೀರ ಪ್ರಕರಣವೂ ಆದೀತು.

ಹಲವಾರು ಸಂದರ್ಭದಲ್ಲಿ ನಮ್ಮ ದೇಶದ ಕಾನೂನು ಸರಿ ಇಲ್ಲ ಎಂದೇ ಕಾನೂನು ಮಾತಾಡುತ್ತಿದ್ದವರಿಗೆ ಇದು ಸರಿಯಾದ ಕಾಯ್ದೆ ಅಂತಲೂ ಅನ್ನಿಸಬಹುದು. ಪೊಲೀಸ್ ಇಲಾಖೆಗೂ ಇದರಿಂದ ಸರ್ಜರಿಯಾಗಲಿದೆ, ಎಲ್ಲಕ್ಕಿಂತಲೂ ಮುಖ್ಯವಾಗಿ ಭ್ರಷ್ಟಾಚಾರಕ್ಕೆ ದೊಡ್ಡ ಬ್ರೇಕ್ ಹಾಕಬಹುದಾಗಿದೆ. ವಕೀಲರ ಹೊರತು ಪಡಿಸಿ ಠಾಣೆಯ ಮೆಟ್ಟಿಲು ಹತ್ತುವುದೂ ಕಠಿಣ ಎನ್ನುವ ಪರಿಸ್ಥಿತಿ ಬಂದರೂ ಬಂದೀತು!

ಈ ಹೊಸ ಕಾನೂನಿನ ಬಗ್ಗೆ ಎಲ್ಲಿಯೂ ಹೆಚ್ಚು ಚರ್ಚೆ ನಡೆಯುತ್ತಿಲ್ಲ, ಪತ್ರಿಕೆಗಳೂ ದೊಡ್ಡ ಮಟ್ಟದಲ್ಲಿ ಗಮನ ಹರಿಸಿಲ್ಲ, ಸುದ್ದಿ ವಾಹಿನಿಗಳು ಬೇರೆಯದೇ ಚರ್ಚೆಯಲ್ಲಿದೆ. ಮೋದಿ ಸರಕಾರ ಮೂರನೆ ಬಾರಿ ಅಧಿಕಾರಕ್ಕೆ ಬಂದ ಬೆನ್ನಲ್ಲೇ ಹೊಸದೊಂದು ಮಹತ್ವಪೂರ್ಣವಾದ ಹೆಜ್ಜೆ ಇರಿಸಿ ಮುನ್ನಡೆಯುತ್ತಿದೆ. ಇದು ದೇಶದ ಕಾನೂನಿನ ಗಟ್ಟಿತನಕ್ಕೆ ಇನ್ನಷ್ಟು ಪುಷ್ಠಿ ನೀಡುವುದಂತೂ ಸತ್ಯ.

ಶಿಶುವಿನ ರೀತಿಯಲ್ಲೇ ಸಸಿಗಳನ್ನು ಪೋಷಿಸೋಣ

ಅಭಿಮತ

ಮರಿಲಿಂಗೇಗೌಡ ಮಾಲಿಪಾಟೀಲ್
vveditoped@gmail.com

ಉತ್ತರ ಭಾರತದಲ್ಲಿ ಪ್ರಕೃತಿ ಎಚ್ಚರಿಕೆಯ ಘಂಟೆ ಬಾರಿಸಿದೆ. ಕೇಳಿಸಿಕೊಂಡು ಎಚ್ಚೆತ್ತುಕೊಳ್ಳುವ, ತಿದ್ದಿಕೊಂಡು ನಡೆಯುವ ಬುದ್ಧಿ ಮನುಷ್ಯರಿಗೆ ಇರಬೇಕಷ್ಟೇ.

ಕಾದ ಕಾವಲಿಯಂತಾದ ಉತ್ತರ ಭಾರತದಲ್ಲಿ ಬಿಸಿಲಿನ ಬೇಗೆಗೆ ಜನರು ಕಂಗೆಟ್ಟಿದ್ದಾರೆ. ಮಾರ್ಚ್ 1ರಿಂದ ಜೂನ್ 18ರ ನಡುವೆ ಬಿಸಿಲಿನ ಆಘಾತಕ್ಕೆ 114 ಜನರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ವರದಿಗಳು ಹೇಳುತ್ತಿವೆ. ತೀವ್ರ ತಾಪಮಾನ ಏರಿಕೆಯಿಂದ 40,000ಕ್ಕೂ ಅಧಿಕ ಜನರು ಅಸ್ವಸ್ಥಗೊಂಡು ಚಿಕಿತ್ಸೆ ಪಡೆದಿದ್ದಾರೆ ಎಂಬ ಮಾಹಿತಿಯನ್ನೂ ಈ ವರದಿಗಳು ಹೊರಹಾಕಿವೆ. ಕರ್ನಾಟಕ ಉತ್ತರ ಭಾಗದಲ್ಲಿಯೂ ಬಿಸಿಲ ಝಳಕ್ಕೆ ಜನರು ಬಸವಳಿದಿರುವುದು ವಾಸ್ತವದ ಚಿತ್ರಣವನ್ನು ಎದುರಿಗಿಟ್ಟಿದೆ. ಪರಿಸ್ಥಿತಿಗೆ ತಕ್ಕಂತೆ ಅನಿವಾರ್ಯ ಕ್ರಮಗಳನ್ನು ಕೈಗೊಳ್ಳದಿದ್ದರೆ ಪಶ್ಚಾತ್ತಾಪ ಪಡುವ ದಿನಗಳು ದೂರವಿಲ್ಲ.

ವನಮಹೋತ್ಸವದ ಪ್ರಸ್ತುತತೆ

ಜುಲೈ ಮೊದಲ ವಾರದಲ್ಲಿ ಭಾರತದಲ್ಲಿ ವನಮಹೋತ್ಸವ ಅಂದರೆ ಮರಗಳ ಹಬ್ಬವನ್ನು ಆಚರಿಸಲಾಗುತ್ತದೆ. PLANT A TREE TODAY FOR BETTER TOMORROW ಎನ್ನುವ ಸ್ಲೋಗನ್ ಜತೆಗೆ ಆಚರಿಸಲಾಗುವ ವನಮಹೋತ್ಸವ ಮರಗಳ ಮತ್ತು ಅರಣ್ಯದ ಸಂರಕ್ಷಣೆಯ ಮಹತ್ವದ ಅರಿವನ್ನು ಜನರಿಗೆ ಮೂಡಿಸುತ್ತದೆ. ಇಂದು ನೆಡುವ ಒಂದು ಸಸಿ ಒಳ್ಳೆಯ ಭವಿಷ್ಯವನ್ನು ನಮಗಾಗಿ ನಿರ್ಮಿಸುತ್ತದೆ ಎನ್ನುವ ಸತ್ಯವನ್ನು ವನಮಹೋತ್ಸವ ತೆರೆದಿಡುತ್ತದೆ.

ಮರಗಳಿಲ್ಲದೆ ಮನುಷ್ಯನಿಲ್ಲ. ಭೂಮಿಯ ಮೇಲಿನ ಕಾರ್ಬನ್‌ನ ಪ್ರಮಾಣವನ್ನು ತಗ್ಗಿಸುವ ಶಕ್ತಿ ಮರಗಳಿಗಿದೆ. ಕಳೆದ 3 ವರ್ಷಗಳಲ್ಲಿ ವಿಶ್ವದ ತಾಪಮಾನ 1.5 ಡಿಗ್ರಿ ಸೆಂಟಿಗ್ರೇಡ್ ಅಧಿಕವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಬಿಸಿಗಾಳಿಯ ಪ್ರಮಾಣ ಹೆಚ್ಚಾಗುತ್ತಿದ್ದು, ಜೀವವೈವಿಧ್ಯತೆ ಹಾಳಾಗುತ್ತಿದೆ. ಇದೆಲ್ಲದಕ್ಕೂ ಪರಿಹಾರವೆಂದರೆ ಅರಣ್ಯ ಸಂರಕ್ಷಣೆ ಒಂದೇ ಆಗಿದೆ.

ಸಾಧಾರಣವಾಗಿ ಶಿಕ್ಷಕರು ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ವಿದ್ಯಾರ್ಥಿಗಳಿಗೆ ಪರಿಸರದ ಮಹತ್ವವನ್ನು ತಿಳಿಸುತ್ತಾರೆ. ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಪ್ರಾಥಮಿಕ ಶಾಲೆಗಳಲ್ಲಿ ವನಮಹೋತ್ಸವ ಆಚರಿಸಲಾಗುತ್ತದೆ. ಒಂದಷ್ಟು ಗುಂಡಿಗಳನ್ನು ತೋಡಿ, ಗಿಡಗಳನ್ನು ನೆಟ್ಟು ಅದನ್ನು ಪೋಷಿಸಿ ಬೆಳೆಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗುತ್ತದೆ. ಬಾಲ್ಯದಲ್ಲಿಯೇ ಅರಣ್ಯದ ಮಹತ್ವವನ್ನು ತಿಳಿಸುವ ವಿಧಾನ ಸ್ವಾಗತಾರ್ಹ. ಜತೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು, ಮಂತ್ರಿ ಮಹೋದಯರು ಗಿಡಗಳನ್ನು ನೆಟ್ಟು ವನಮಹೋತ್ಸವ ಆಚರಿಸುತ್ತಾರೆ. ಬಿಸಿಲಿನ ಹೊಡೆತಕ್ಕೆ ಜನರು ತತ್ತರಿಸುವ ಹಿನ್ನೆಲೆಯಲ್ಲಿ ಇದೆಲ್ಲ ಅಪೇಕ್ಷಣೀಯ!

ಆರಂಭಿಕ ಶೂರತ್ವ!

ಆದರೆ ಹೀಗೆ ನೆಟ್ಟ ಗಿಡಗಳು ಏನಾಗುತ್ತಿವೆ? ಗಿಡಗಳು ಬೆಳೆದಿವೆ ಎಂದು ಯಾರಾದರೂ ಖಚಿತಪಡಿಸಿಕೊಳ್ಳುತ್ತಾರಾ? ವಿದ್ಯಾರ್ಥಿಗಳು ಮುಂದೆ ತಮ್ಮ ಪತ್ಯ ಚಟುವಟಿಕೆಗಳಲ್ಲಿ ಮುಳುಗಿ ಹೋಗುತ್ತಾರೆ. ಮಂತ್ರಿ ಮಹೋದಯರು ಮುಂದಿನ ವನಮಹೋತ್ಸವದ ಸಂದರ್ಭದಲ್ಲಿ ಕಳೆದ ವರ್ಷ ನೆಟ್ಟ ಗುಂಡಿಯಲ್ಲಿಯೇ ಈ ವರ್ಷವೂ ಇನ್ನೊಂದು ಸಸಿ ನೆಡುತ್ತಾರೆ ಎನ್ನುವುದು ಕಟುವಾದರೂ ಸತ್ಯ. ಹೀಗಾಗಿ ವನಮಹೋತ್ಸವ ಎನ್ನುವುದು ಆಚರಣೆಯಲ್ಲಿ ಇದೆಯೇ ಹೊರತು ಅನುಸರಣೆಯಲ್ಲಿ ಇಲ್ಲ ಎಂಬ ಮಾತನ್ನು ತೀವ್ರ ವಿಷಾದದಿಂದ ಹೇಳಬೇಕಾಗುತ್ತದೆ. ಗಿಡವನ್ನು ನೆಡುವುದು ಕೇವಲ ಆಡಂಬರಕ್ಕಷ್ಟೇ ಹೊರತು ಗಿಡಗಳ ಮಹತ್ವ ಅಂತರಂಗಕ್ಕೆ ಅರಿವಾಗದೇ ಇದ್ದಾಗ ಇಂಥಹದೆಲ್ಲ ಘಟಿಸುತ್ತವೆ ಎನ್ನುವುದು ವಿಪರ್ಯಾಸದ ಸಂಗತಿ.

ವಾತಾವರಣದ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಅರಣ್ಯಗಳು ತೀವ್ರಗತಿಯಲ್ಲಿ ನಾಶವಾಗುತ್ತಿವೆ ಎನ್ನುವುದು ಗಾಬರಿ ಹುಟ್ಟಿಸುವ ಸತ್ಯ. ಕಳೆದ ಒಂದು ದಶಕದಲ್ಲಿ ಶೇ.16ರಷ್ಟು ಅರಣ್ಯ ನಾಶ ಭಾರತದಲ್ಲಿ ಆಗಿದೆ ಎನ್ನುವುದು ಕಳವಳ ಹುಟ್ಟಿಸುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಗಣಿಗಾರಿಕೆಯ ನೆಪದಲ್ಲಿ ಅವ್ಯಾಹತವಾಗಿ ಅರಣ್ಯಭಕ್ಷಣೆ ನಡೆದಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸಮತೋಲವನ್ನು ಕಾಪಾಡಲು, ಅರಣ್ಯರಕ್ಷಣೆ ಅನಿವಾರ್ಯವಾಗಿದೆ. ಹೀಗಾಗಿ ವನಮಹೋತ್ಸವವನ್ನು ಪ್ರಾಮಾಣಿಕವಾಗಿ ಆಚರಿಸುವುದು ಕಾಲದ ಅಗತ್ಯವಾಗಿದೆ.

ಇರುವುದೊಂದೇ ಭೂಮಿ!

ಸದ್ಯಕ್ಕಂತೂ ನಮಗೆ ಇರುವುದು ಒಂದೇ ಭೂಮಿ. ಈ ಭೂಮಿಯ ಮೇಲಿನ ತಾಪಮಾನ ಏರಿಕೆ ಧ್ರುವ ಪ್ರದೇಶದಲ್ಲಿ ಮಂಜುಗಡ್ಡೆಗಳನ್ನು ಕರಗಿಸುತ್ತದೆ. ಆ ಮೂಲಕ ಸಮುದ್ರದ ನೀರಿನ ಮಟ್ಟ ಏರಲಿದೆ ಎನ್ನುವುದು ವಿಜ್ಞಾನಿಗಳು ನೀಡಿರುವ ಎಚ್ಚರಿಕೆ. ಈ ಭೂಮಿಯನ್ನು ಉಳಿಸಿಕೊಳ್ಳಬೇಕಿದ್ದರೆ ತಾಪಮಾನವನ್ನು ನಿಯಂತ್ರಿಸುವುದು ಅನಿವಾರ್ಯ. ಅದಕ್ಕಾಗಿ ಮರಗಳನ್ನು ಉಳಿಸಿ, ಅರಣ್ಯಗಳನ್ನು ಬೆಳೆಸುವುದು ಮಾನವನ ಜವಾಬ್ದಾರಿಯೇ ಆಗಿದೆ.

ಅರಣ್ಯಗಳು ನಮಗೆ ಯಾಕೆ ಬೇಕು? ಎನ್ನುವ ಪ್ರಶ್ನೆಗೆ ಒಂದು ನಿಮಿಷ ಯೋಚಿಸಿದರೂ ಉತ್ತರ ಹೊಳೆಯುತ್ತದೆ. ಕೆಲವು ದಶಕಗಳಷ್ಟು ಹಿಂದಕ್ಕೆ ಹೋದರೆ ನಾವು ಪತ್ಯದಲ್ಲಿ ಓದುವ ವಾತಾವರಣದ ವಿಷಯಕ್ಕೂ ವಾಸ್ತವಕ್ಕೂ ಹೊಂದಾಣಿಕೆ ಆಗುತ್ತಿತ್ತು. ಮಳೆ, ಚಳಿ ಮತ್ತು ಬೇಸಿಗೆ ಕಾಲಗಳು ನಾಲ್ಕು ತಿಂಗಳುಗಳಂತೆ ವರ್ಷದಲ್ಲಿ ಹಂಚಿಕೆ ಆಗುತ್ತಿತ್ತು. ಈಗ ಹಾಗೆ ಇದೆಯಾ ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳಬೇಕಿದೆ. ವರ್ಷದ 10 ತಿಂಗಳಲ್ಲಿ ಮಳೆ ಬರುತ್ತದೆ. ಮಳೆಗಾಲ ಯಾವುದೆಂದೇ ಗೊತ್ತಾಗುವುದಿಲ್ಲ ಎಂದು ಜನರು ಆಡಿಕೊಳ್ಳುವುದು ಸಾಮಾನ್ಯವಾಗಿದೆ. ಅತಿವೃಷ್ಟಿ, ಅನಾವೃಷ್ಟಿಗಳು ಜನರ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಕಾಲ ಕೆಟ್ಟಿದೆ ಎಂದು ಜನರು ಹೇಳುತ್ತಿದ್ದಾರಾದರೂ ಮನುಜನ ಸ್ವಯಂಕೃತ ಅಪರಾಧಕ್ಕೆ ಪ್ರಕೃತಿ ಕೊಡುತ್ತಿರುವ ಶಿಕ್ಷೆ ಇದು ಎಂದು ತಿಳಿಯಲು ಹೆಚ್ಚಿನ ಬುದ್ಧಿವಂತಿಕೆಯೇನೂ ಬೇಕಾಗಿಲ್ಲ. ಎಷ್ಟೇ ಮಳೆ ಬಂದರೂ ಅರಣ್ಯ ಪ್ರದೇಶಗಳು ನೀರನ್ನು ಹಿಡಿದಿಟ್ಟುಕೊಳ್ಳುತ್ತಿದ್ದುದರಿಂದ ಪ್ರವಾಹದ ದೃಶ್ಯಗಳು ಕಡಿಮೆ ಇರುತ್ತಿತ್ತು. ಈಗ ಅರಣ್ಯಗಳೇ ಕಡಿಮೆಯಾಗಿವೆ. ಬಾನಿನಿಂದ ನೀರಿನ ಮಳೆ ನೇರವಾಗಿ ಹರಿಯತೊಡಗುತ್ತದೆ. ನದಿ ಪಾತ್ರಗಳಲ್ಲಿ ಒತ್ತುವರಿ ಮಾಡಿ ನಿರ್ಮಿಸಿದ ವಸತಿ ಪ್ರದೇಶಕ್ಕೆ ನೀರು ಪ್ರವಾಹಸದೃಶವಾಗಿ ನುಗ್ಗುತ್ತದೆ. ಇದರಲ್ಲಿ ಯಾರದು ತಪ್ಪು? ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಮನುಷ್ಯ–ಪ್ರಾಣಿ ಸಂಘರ್ಷ

ಅರಣ್ಯದ ಪ್ರಾಣಿಗಳು ಆಹಾರಕ್ಕಾಗಿ ನಾಡಿಗೆ ನುಗ್ಗುವುದು ಸರ್ವೇ ಸಾಮಾನ್ಯವಾಗಿದೆ. 'ನಾವು ನಿಮ್ಮ ಪ್ರದೇಶಕ್ಕೆ ನುಗ್ಗುತ್ತಿಲ್ಲ, ನೀವೇ ನಮ್ಮ ಪ್ರದೇಶವನ್ನು ಅತಿಕ್ರಮಿಸುತ್ತಿದ್ದೀರಿ' ಎಂದು ಪ್ರಾಣಿಗಳು ಆರೋಪಿಸುವಂಥ ಪೋಸ್ಟ್‌ಗಳು ಫೇಸ್‌ಬುಕ್‌ನಲ್ಲಿ ಕಾಣಿಸಿಕೊಂಡಾಗಲಾದರೂ ಮನುಷ್ಯರು ಚಿಂತಿಸಲು ಆರಂಭಿಸಬೇಕು. ನಮ್ಮ ಅಗತ್ಯಗಳಿಗೆ ಅರಣ್ಯಗಳನ್ನು ಕತ್ತರಿಸುವಾಗ ಕಾಡಿನಲ್ಲಿ ಜೀವಿಗಳಿವೆ, ಆ ಜೀವಿಗಳಿಗೆ ಅರಣ್ಯವೇ ಆಶ್ರಯ. ಅಲ್ಲಿ ನಾವು ಹಸ್ತಕ್ಷೇಪ ಮಾಡಿದರೆ ವನ್ಯಜೀವಿಗಳು ಏನು ಮಾಡಬೇಕು ಎಂದು ಪ್ರಶ್ನಿಸಿಕೊಳ್ಳದಿರುವಷ್ಟು ಮನುಷ್ಯ ತನ್ನ ಸಂವೇದನೆಯನ್ನು ಕಳೆದುಕೊಂಡಿದ್ದಾನೆ. ಪರಿಣಾಮವಾಗಿ ಪ್ರಾಣಿಗಳು ಆಹಾರಕ್ಕಾಗಿ ನಾಡಿಗೆ ನುಗ್ಗುವ ವಿದ್ಯಮಾನಗಳು ದಿನನಿತ್ಯ ವರದಿಯಾಗುತ್ತಿವೆ. ನಮ್ಮ ಹಕ್ಕುಗಳನ್ನು ಇತರರು ಅತಿಕ್ರಮಿಸಿದಾಗ ಮನುಷ್ಯರು ಪ್ರತಿಭಟಿಸಬಹುದು. ನ್ಯಾಯಾಲಯದ ಮೆಟ್ಟಿಲೇರಿ ಪರಿಹಾರ ಪಡೆಯಬಹುದು. ಆದರೆ ಮೂಕಜೀವಿಗಳು ಏನು ಮಾಡಬೇಕು? ಎಲ್ಲಕ್ಕಿಂತ ಹೆಚ್ಚಾಗಿ ವನ್ಯಮೃಗಗಳಿಗೆ ಸಮಸ್ಯೆ ಉಂಟಾದರೂ ಅದು ಅಂತಿಮವಾಗಿ ಮನುಷ್ಯ ತಾನೇ ಎದುರಿಸಬೇಕಾದ ಸಮಸ್ಯೆ ಎನ್ನುವುದನ್ನು ಮೊದಲು ಅರಿಯಬೇಕು. ನಿಸರ್ಗ ಎನ್ನುವುದು ಒಂದು ಸರಪಳಿ. ಒಂದು ಕೊಂಡಿ ಕಿತ್ತುಬಂದರೂ ಸರಪಳಿ ಉಳಿಯಲಾರದು. ನಿಸರ್ಗವನ್ನು ಅದು ಇರಬೇಕಾದಂತೆ ಕಾಪಾಡುವುದು ನಮ್ಮದೇ ಜವಾಬ್ದಾರಿ.

ಇಷ್ಟಕ್ಕೂ ಈ ಭೂಮಿಯ ಮೇಲಿದ್ದ ಅರಣ್ಯಗಳಲ್ಲಿ ಮರಗಳನ್ನು ಮೊದಲಿಗೆ ನೆಟ್ಟವರು ಯಾರು? ಮನುಷ್ಯ ಎನ್ನುವ ಜೀವಿ ಉಗಮವಾಗುವುದಕ್ಕೂ ಮೊದಲೇ ಭೂಮಿಯ ಮೇಲೆ ಅರಣ್ಯವಿತ್ತು. ಭೂಮಿಯ ಮೇಲಿನ ಅರಣ್ಯಗಳು ಮನುಷ್ಯನ ಹಿತಕ್ಕಾಗಿಯೇ ಉದ್ಭವವಾಗಿದ್ದವು. ಅವುಗಳ ನಿರ್ಮಾಣದಲ್ಲಿ ಮನುಷ್ಯನ ಪಾತ್ರ ಏನೂ ಇಲ್ಲ. ಆದರೆ ನಮ್ಮ ಹಿತಕ್ಕಾಗಿಯೇ ಇರುವುದನ್ನು ನಾಶ ಮಾಡುವುದರಲ್ಲಿ ಮಾತ್ರ ಮನುಷ್ಯನಿಗೆ ಸರಿಸಾಟಿ ಯಾರೂ ಇಲ್ಲ.

ಜವಾಬ್ದಾರಿ ಅರಿಯೋಣ

ತಡವಾಗಿಯಾದರೂ ಎಚ್ಚೆತ್ತುಕೊಳ್ಳಬೇಕಾದ ಸಮಯ ಬಂದಿದೆ. ಪ್ರಕೃತಿ ಮನುಷ್ಯನಿಗೆ ಪಾಠ ಕಲಿಸುತ್ತಿದೆ. ಆದರೆ ಕಲಿಯುವ ಅಗತ್ಯ, ಜವಾಬ್ದಾರಿ ಎರಡೂ ನಮ್ಮದೇ. ಹೆಚ್ಚುತ್ತಿರುವ ಬಿಸಿಗಾಳಿಯಾಗಲಿ ಭೀಕರ ಮಳೆಯಾಗಲಿ ಹವಾಮಾನ ವೈಪರೀತ್ಯವಾಗಲಿ ನಮ್ಮದೇ ಅವಿವೇಕದ ಫಲ ಎನ್ನುವುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಿದೆ. ಪರಿಸ್ಥಿತಿಯನ್ನು ಸುಧಾರಿಸುವ ಅವಕಾಶ ನಮ್ಮ ಕೈಯಲ್ಲಿಯೇ ಇದೆ. ಅದನ್ನು ಉಪಯೋಗಿಸಿಕೊಳ್ಳಬೇಕು.

ನಾವು ನೆಟ್ಟು ಬೆಳೆಸುವ ಒಂದೊಂದು ಮರವೂ ಮನುಷ್ಯನ ಬದುಕಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ. ನೆಟ್ಟ ಸಸಿ ಒಂದೆರಡು ವರ್ಷ ಜೀವದಿಂದ ಇರುವಂತೆ ನೋಡಿಕೊಂಡರೆ ಸಾಕು, ಆಮೇಲೆ ಆ ಸಸಿ ಮರವಾಗಿ ಬೆಳೆದು ನೂರಾರು ವರ್ಷಗಳ ಕಾಲ ಮನುಜನ ಬದುಕಿಗೆ ಆಸರೆಯಾಗಿ ನಿಲ್ಲುತ್ತದೆ. ಹೂ, ಹಣ್ಣುಗಳನ್ನು ನೀಡುತ್ತದೆ. ಪ್ರಾಣಿ ಪಕ್ಷಿಗಳಿಗೆ ಬದುಕಿಗೆ ಆಶ್ರಯ ನೀಡುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ನಿಸರ್ಗದ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ.

ಬೆಂಗಳೂರಿನಲ್ಲಿಯೇ ಪರಿಶೀಲಿಸಿದರೂ ಮರಗಳನ್ನು ಸಂರಕ್ಷಿಸುವಂತ ಐಐಎಸ್ಸಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ಜಾಲಹಳ್ಳಿಯಂಥ ಪ್ರದೇಶಗಳನ್ನು ಪ್ರವೇಶಿಸುತ್ತಿದ್ದಂತೆಯೇ ತಂಪಿನ ಅರಿವಾಗುತ್ತದೆ. ಮಳೆ ಬೀಳುತ್ತಿರುವಾಗ ಮರಗಳ ಅಡಿಯಲ್ಲಿ ನಡೆದು ಹೋಗುವುದು ಎಂಥ ಅನಿರ್ವಚನೀಯವಾದ ಆನಂದವನ್ನು ನೀಡುತ್ತವೆ ಎನ್ನುವುದು ಅನುಭವಿಸಿದವರಿಗೇ ವೇದ್ಯ. ಅಭಿವೃದ್ಧಿಗೆ ಕಾಂಕ್ರೀಟ್ ಕಟ್ಟಡಗಳು, ರಸ್ತೆಗಳು ಅಗತ್ಯವಾಗಿರಬಹುದು.ಆದರೆ ಮನುಷ್ಯರು ನೆಮ್ಮದಿಯಿಂದ ಬದುಕಬೇಕಿದ್ದರೆ ವೃಕ್ಷಗಳು ಅನಿವಾರ್ಯ. ವನಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ನಮ್ಮ ಜವಾಬ್ದಾರಿಯನ್ನು ನೆನಪಿಸಿಕೊಳ್ಳೋಣ. ಜಾಗ ಮತ್ತು ಅವಕಾಶ ಇರುವವರು ಒಂದು ಸಸಿಯನ್ನು ನೆಟ್ಟು ಪೋಷಿಸುವುದನ್ನು ಕರ್ತವ್ಯ ಎಂದುಕೊಳ್ಳಬೇಕು ಶಿಶುವೊಂದನ್ನು ಪೋಷಿಸಿದಷ್ಟೇ ಜತನದಿಂದ ಸಸಿಯೊಂದನ್ನೂ ಪೋಷಿಸಬೇಕು. ವನಮಹೋತ್ಸವ ಆಚರಣೆಗಷ್ಟೇ ಸೀಮಿತವಾಗದಿರಲಿ, ಕಾಲದ ಅಗತ್ಯಕ್ಕೆ ಮನುಷ್ಯನ ಪ್ರತಿಸ್ಪಂದನೆಯಾಗಲಿ.

(ಲೇಖಕರು: ಹವ್ಯಾಸಿ ಬರಹಗಾರರು)

ಪ್ರಸ್ತುತ

ಕೆ.ವಿ.ವಾಸು

ಉಪಮುಖ್ಯಮಂತ್ರಿ–ಏನು? ಎತ್ತ?

ರಾಜ್ಯದಲ್ಲಿ ಮತ್ತೆ ಮೂರು ಉಪಮುಖ್ಯಮಂತ್ರಿಗಳ ಹುದ್ದೆಗಳನ್ನು ಸೃಷ್ಟಿಸಬೇಕೆಂದು, ಮೂವರು ಮಂತ್ರಿಗಳನ್ನು ಒಳಗೊಂಡಂತೆ ಕೆಲವು ಕಾಂಗ್ರೆಸ್ ನಾಯಕರು ಕಾಂಗ್ರೆಸ್ ವರಿಷ್ಠ ಮಂಡಳಿಯನ್ನು ಆಗ್ರಹ ಪಡಿಸುತ್ತಿರುವುದು ಮಾಧ್ಯಮಗಳಲ್ಲಿ ವರದಿ ಯಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ ಡಿ.ಕೆ. ಶಿವಕುಮಾರ್

ಉಪಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಾತಿ, ಸಮುದಾಯ ಮತ್ತು ಪ್ರಾದೇಶಿಕತೆಯ ಸಮತೋಲನವನ್ನು ಕಾಪಾಡಿಕೊಳ್ಳಲು, ಕೆಲವು ಪ್ರಬಲ ಸಮುದಾಯಗಳ ಮಂತ್ರಿಗಳಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕೆಂಬ ಬೇಡಿಕೆ ಹೆಚ್ಚುತ್ತಿದೆ.

ವಾಸ್ತವವಾಗಿ, ಉಪಮುಖ್ಯಮಂತ್ರಿ ಹುದ್ದೆಯ ಬಗ್ಗೆ ನಮ್ಮ ಸಂವಿಧಾನದಲ್ಲಿ ಯಾವುದೇ ರೀತಿಯ ಉಲ್ಲೇಖವಿಲ್ಲವಾದರೂ, ಅದೊಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ವೀರಪ್ಪ ಮೊಯಿಲಿಯವರು 1992 ರಲ್ಲಿ ಮುಖ್ಯಮಂತ್ರಿಯಾದ ಸಂದರ್ಭ, ಆಗ ಆ ಹುದ್ದೆಗೆ ಪ್ರಬಲ ಪೈಪೋಟಿ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರನ್ನು ಸಮಾಧಾನ ಪಡಿಸಲು ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಲಾಯಿತು. ಅಲ್ಲಿಂದೀಚೆಗೆ ಬಿ.ಎಸ್.ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪ, ಆರ್.ಅಶೋಕ ಉಪಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಉಪ ಮುಖ್ಯಮಂತ್ರಿಗಳಿಗೆ ಯಾವುದೇ ರೀತಿಯ ವಿಶೇಷ ಅಧಿಕಾರವಿಲ್ಲ. ಆದರೂ ಸಚಿವ ಸಂಪುಟದಲ್ಲಿ ಅವರ ಸ್ಥಾನ ಎರಡನೆಯದಾಗಿರುತ್ತದೆ. ಮುಖ್ಯಮಂತ್ರಿಗಳ ಅನುಪಸ್ಥಿತಿಯಲ್ಲಿ ಅವರು ಸಚಿವ ಸಂಪುಟದ ಸಭೆ ನಡೆಸಬಹುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಅವರು ಹಂಗಾಮಿ ಮುಖ್ಯಮಂತ್ರಿಯಾಗಿ ಕೂಡ ಕಾರ್ಯ ನಿರ್ವಹಿಸಬಹುದು. ಈ ಹಿಂದೆ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ವೈ.ಎಸ್.ಜಗನ್ ರೆಡ್ಡಿ, ಮೂವರು ಉಪ ಮುಖ್ಯಮಂತ್ರಿಗಳನ್ನು ನೇಮಕ ಮಾಡಿಕೊಂಡಿದ್ದರು.

ಮಹಾರಾಷ್ಟ್ರ, ದೆಹಲಿ ಮುಂತಾದ ರಾಜ್ಯಗಳಲ್ಲಿ ಕೂಡ ಉಪ ಮುಖ್ಯಮಂತ್ರಿಗಳಿದ್ದಾರೆ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಡಿ.ಕೆ. ಶಿವಕುಮಾರ್ ಮಾತ್ರ ಉಪ ಮುಖ್ಯಮಂತ್ರಿಯಾಗಿದ್ದಾರೆ. ಈಗ ಮತ್ತೆ ಇಬ್ಬರು ಸಚಿವರನ್ನು ಆ ಹುದ್ದೆಗೆ ತಂದರೆ, ಡಿ ಕೆ ಶಿವಕುಮಾರ್ ರವರ ಪ್ರಾಬಲ್ಯ ಕುಂದಬಹುದು. ಅವರನ್ನು ಮಣಿಸಲು ಹೆಚ್ಚಿನ ಸಂಖ್ಯೆಯ ಉಪ ಮುಖ್ಯಮಂತ್ರಿಗಳ ನೇಮಕಾತಿಗೆ ಕಾಂಗ್ರೆಸ್ ಪಕ್ಷದಲ್ಲೇ ಕೂಗು ಎದ್ದಿದೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಈ ವಿಚಾರದಲ್ಲಿ ಯಾವ ನಿಲುವು ತೆಗೆದುಕೊಳ್ಳುತ್ತದೆ ಎಂಬುದು ಕುತೂಹಲಕಾರಿಯಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:9, Issue:186

ಸಮಾಚಾರ ಸಣ್ಣದಲ್ಲ

ನೌಕರಿಗಾಗಿ ಪಾಕ್‌ಗೆ ಹೋದರೆ ಶತ್ರುವಲ್ಲ

ಕೊಚ್ಚಿ: ಭಾರತದ ನಾಗರಿಕನೊಬ್ಬ ಉದ್ಯೋಗ ಅರಸಿ ಪಾಕಿಸ್ತಾನಕ್ಕೆ ಹೋದರೆ ಆತ ದೇಶದ 'ಶತ್ರು' ಎಂದಾಗುವುದಿಲ್ಲ ಎಂದು ಕೇರಳ ಹೈಕೋರ್ಟ್ ಹೇಳಿದೆ. ಪಾಕ್‌ನಲ್ಲಿ ಕೆಲಸ ಮಾಡಿದ್ದ ಕಾರಣಕ್ಕೆ ಭಾರತದಲ್ಲಿನ ಅವರ ಆಸ್ತಿಯನ್ನು ಶತ್ರು ಆಸ್ತಿ ಕಾಯ್ದೆ-1968ರಡಿ ಜಪ್ತಿ ಮಾಡಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿದೆ. ಮಲಪ್ಪುರಂ ನಿವಾಸಿ ಉಮರ್ ಕೋಯಾ ಎಂಬವರು ತಮ್ಮ ತಂದೆಯ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತಿಲ್ಲ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾ.ವಿಜು ಅಬ್ರಹಾಂ, ಪಾಕ್‌ನಲ್ಲಿ ಕೆಲಸ ಮಾಡಿದ ಕಾರಣಕ್ಕೆ ಭಾರತೀಯ ವ್ಯಕ್ತಿ ಶತ್ರುವಾಗುವುದಿಲ್ಲ. ಕುಂಜಿ ಕೋಯಾ ಅವರ ಆಸ್ತಿಯನ್ನು ಶತ್ರು ಆಸ್ತಿ ಎಂದು ಪರಿಗಣಿಸಲಾಗದು ಎಂದು ತೀರ್ಪು ನೀಡಿದೆ. ಕೇರಳ ರಾಜ್ಯದಲ್ಲಿ 68 ಆಸ್ತಿಗಳನ್ನು ಕಸ್ಟೋಡಿಯನ್ ಆಫ್ ಎನಿಮಿ ಪ್ರಾಪರ್ಟಿ ಫಾರ್ ಇಂಡಿಯ ಕಾಯ್ದೆಯಡಿ ಪಟ್ಟಿ ಮಾಡಲಾಗಿದೆ.

ಕಾಲೇಜು ವಸ್ತ್ರಸಂಹಿತೆ ಸರಿ ಎಂದ ಬಾಂಬೆ ಹೈ

ಮುಂಬೈ: ಶೈಕ್ಷಣಿಕ ಸಂಸ್ಥೆಗಳ ವಸ್ತ್ರಸಂಹಿತೆಯಿಂದ ವಿದ್ಯಾರ್ಥಿಯ ಮೂಲ ಹಕ್ಕಿನ ಉಲ್ಲಂಘನೆಯಾಗದು ಎಂದು ಅಭಿಪ್ರಾಯಪಟ್ಟ ಬಾಂಬೆ ಹೈಕೋರ್ಟ್, ಮುಂಬೈ ಕಾಲೇಜು ವಿದ್ಯಾರ್ಥಿಗಳು ವಸ್ತ್ರಸಂಹಿತೆ ಜಾರಿ ಪ್ರಶ್ನಿಸಿ ಸಲ್ಲಿಸಿದ್ದ ತಕರಾರು ಅರ್ಜಿಯನ್ನು ತಿರಸ್ಕರಿಸಿದೆ. ಹಿಜಾಬ್, ಬುರ್ಖಾ, ನಖಾಬ್, ಸ್ಟೋಲ್ಸ್, ಕ್ಯಾಪ್ ಮತ್ತು ಬಗೆಬಗೆ ಬ್ಯಾಡ್ಜ್ ಧರಿಸುವುದನ್ನು ನಿಷೇಧಿಸುವ ಹಾಗೂ ವಸ್ತ್ರಸಂಹಿತೆ ಜಾರಿಗೊಳಿಸುವ ಮುಂಬೈನ ಎನ್.ಜಿ.ಆಚಾರ್ಯ, ಡಿ.ಕೆ.ಮರಾಠೆ ಕಾಲೇಜುಗಳ ನಿರ್ಧಾರದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ ಎಂದು ಪೀಠ ಹೇಳಿದೆ. ಕಾಲೇಜು ಆಡಳಿತ ಕ್ರಮ ಧರ್ಮ ಆಚರಣೆ ಹಾಗೂ ಖಾಸಗಿತನ, ವೈಯಕ್ತಿಕ ಆಯ್ಕೆಯ ಮೂಲ ಹಕ್ಕುಗಳ ಉಲ್ಲಂಘನೆ ಎಂದು ಕೆಲ ವಿದ್ಯಾರ್ಥಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಸಂಸ್ಥೆಯಲ್ಲಿ ಶಿಸ್ತು ಪಾಲನೆಗಾಗಿ ಕಾಲೇಜು ಆಡಳಿತ ಮಂಡಳಿ ಜಾರಿಗೆ ತರುವ ವಸ್ತ್ರಸಂಹಿತೆ ಕಾಲೇಜಿನ ಹಕ್ಕು-ಅಧಿಕಾರ. ಇದು ಎಲ್ಲಾ ಜಾತಿ, ಧರ್ಮದ ವಿದ್ಯಾರ್ಥಿಗೂ ಅನ್ವಯ ಎಂದು ಹೇಳಿದ ನ್ಯಾ.ಎ.ಎಸ್.ಚಂದೂರ್‌ಕರ್ ಮತ್ತು ನ್ಯಾ.ರಾಜೇಶ್ ಪಾಟೀಲ್ ಅವರ ಪೀಠ, ವಿದ್ಯಾರ್ಥಿಗಳ ಅರ್ಜಿಯನ್ನು ತಿರಸ್ಕರಿಸಿದೆ.

ಬಾಹ್ಯಾಕಾಶದಲ್ಲೇ ಉಳಿದ ಸುನೀತಾ

ವಾಷಿಂಗ್ಟನ್ ಡಿಸಿ: ಸದ್ಯ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ(ಐಎಸ್‌ಎಸ್) ಇರುವ ವಿಜ್ಞಾನಿಗಳಾದ ಸುನೀತಾ ವಿಲಿಯಮ್ಸ್ ಹಾಗೂ ಬ್ಯಾರಿ

ವಿಲ್‌ಮೋರ್ ಭೂಮಿಗೆ ಮರಳುವುದು ತಡವಾಗುತ್ತಿದೆ. ಕಾರಣ ತಾಂತ್ರಿಕ ದೋಷ! ಬಾಹ್ಯಾಕಾಶ ವಿಜ್ಞಾನಿಗಳನ್ನು ಕರೆತರಲು ಹೊರಡಬೇಕಿದ್ದ ಸ್ಟಾರ್ ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಪದೇ ಪದೇ ತಾಂತ್ರಿಕ ದೋಷ ಕಂಡು ಬರುತ್ತಿರುವ ಹಿನ್ನೆಲೆ ವಿಜ್ಞಾನಿ ಗಳಿಬ್ಬರೂ ಭೂಮಿಗೆ ಮರಳುವುದು ಯಾವಾಗ ಎಂಬುದಕ್ಕೆ ಸ್ಪಷ್ಟ ಉತ್ತರ ಸಿಗುತ್ತಿಲ್ಲ. ವಿಜ್ಞಾನಿಗಳು ಭೂಮಿಗೆ ಮರಳುವ ದಿನಾಂಕವನ್ನು ಜೂ.26ರಿಂದಲೂ 'ನಾಸಾ' ಮತ್ತೆ ಮತ್ತೆ ಮುಂದೂಡುತ್ತಿದೆ. ಸುನೀತಾ ಮತ್ತು ಬ್ಯಾರಿ ಜೂ.5ರಂದು ಐಎಸ್‌ಎಸ್ ತಲುಪಿ ದ್ದರು. ಸ್ಟಾರ್ ಲೈನರ್ ಬಾಹ್ಯಕಾಶ ನೌಕೆಯಲ್ಲಿ ಹೀಲಿ ಯಂ ಸೋರಿಕೆ ಹಾಗೂ ಪ್ರೊಪೆಲೆಂಟ್ ವಾಲ್ವ್ ಚಲನೆಯಲ್ಲಿ ಸಮಸ್ಯೆಯಾಗಿರುವ ಕಾರಣ ಬಾಹ್ಯಾಕಾಶ ನೌಕೆಯ ಸಂಚಾರವನ್ನು ಗುರುವಾರ ಮತ್ತೆ ಮುಂದೂಡಲಾಗಿದೆ. ಸುನೀತಾ ವಿಲಿಯಮ್ಸ್ ಭಾರತ ಮೂಲದವರು ಎಂಬುದು ಉಲ್ಲೇಖಾರ್ಹ.

ಜು.8ರಿಂದ ಪ್ರಧಾನಿ ಮೋದಿ ರಷ್ಯಾ ಭೇಟಿ

ದೆಹಲಿ: ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ

ದಿನಗಳಲ್ಲಿ ವಿದೇಶ ಪ್ರವಾಸ ಆರಂಭಿಸಿದ್ದಾರೆ. ಇಟಲಿಗೆ ಮೊದಲ ಪ್ರವಾಸ ಕೈಗೊಂಡ ಮೋದಿ, ಜು.8ರಂದು ರಷ್ಯಾ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಭೇಟಿ ಭಾರತ- ರಷ್ಯಾ ಸಂಬಂಧ ಮತ್ತಷ್ಟು ಬಲಗೊಳಿಸಲಿದೆ. ಉಭಯ ರಾಷ್ಟಗಳ ನಾಯಕರೂ ರಕ್ಷಣಾ ಕ್ಷೇತ್ರ, ಅನಿಲ ಮತ್ತಿತರೆ ವಿಚಾರಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ರಷ್ಯಾ-ಉಕ್ರೇನ್ ಯುದ್ಧ ಸನ್ನಿವೇಶದಲ್ಲಿ ಭಾರತ ಉತ್ತಮ ಮಧ್ಯಸ್ಥಿಕೆಗಾರನಾಗಿ ಕಾಣುತ್ತಿರುವುದರಿಂದ ಪ್ರಧಾನಿ ಮೋದಿ ಅವರ ಈಗಿನ ಭೇಟಿಗೆ ಮಹತ್ವ ಬಂದಿದೆ. ಇದಕ್ಕೂ ಮುನ್ನ ಪ್ರಧಾನಿ ಮೋದಿ 2022ರಲ್ಲಿ ಉಜ್ಬೇಕಿಸ್ತಾನದಲ್ಲಿ ನಡೆದ ಶಾಂಘೈ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೇಟಿಯಾಗಿದ್ದರು.

{ ಪ್ರಿಯಾಂಕಾ ವಾದ್ರಾ } ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಸಂಸತ್ತಿನಲ್ಲಿ 'ಜೈ ಸಂವಿಧಾನ' ಎಂದು ಕೂಗಬಾರದೇ? ಆಡಳಿತ ಪಕ್ಷದ ಸಂಸದರು ಸದನದಲ್ಲಿ ಅಸಂವಿಧಾನಿಕ ಪದಗಳನ್ನು ಬಳಸಿದಾಗ ಅದನ್ನು ತಡೆಯದೇ ಸುಮ್ಮನಿದ್ದರು. ಆದರೆ, ಪ್ರತಿಪಕ್ಷಗಳ ಸದಸ್ಯರು 'ಜೈ ಸಂವಿಧಾನ' ಎಂದು ಘೋಷಣೆ ಮೊಳಗಿಸಿದಾಗ ಆಕ್ಷೇಪಿಸಿರುವುದು ಸರಿಯೇ? ಚುನಾವಣೆ ಸಂದರ್ಭ ಮುನ್ನೆಲೆಗೆ ಬಂದಿದ್ದ ಸಂವಿಧಾನದ ವಿರೋಧ ಈಗ ಸಂಸತ್ತಿನೊಳಗೇ ಹೊಸರೂಪ ಪಡೆದುಕೊಂಡಿದೆ.

18ನೇ ಲೋಕಸಭೆ: ಜಂಟಿ ಅಧಿವೇಶನ ಮೊದಲ ಭಾಷಣ | ನೀಟ್-ನೆಟ್, ತುರ್ತು ಪರಿಸ್ಥಿತಿ, ಆರ್ಥಿಕ ಸ್ಥಿತಿ ಪ್ರಸ್ತಾಪ | ಸ್ಪಷ್ಟ ಬಹುಮತದ ಸತತ 3ನೇ ಸರಕಾರ ಎಂದು ಬಣ್ಣನೆ

ಇಡೀ ವಿಶ್ವ ಗಮನ ಭಾರತದತ್ತ: ರಾಷ್ಟ್ರಪತಿ ದ್ರೌಪದಿ ಮುರ್ಮು

ದೆಹಲಿ: 18ನೇ ಲೋಕಸಭೆಯ ಜಂಟಿ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಗುರುವಾರ ಭಾಷಣ ಮಾಡಿ, ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸಿಕೊಂಡರು, ನೀಟ್-ನೆಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರಗಳನ್ನೂ ಪ್ರಸ್ತಾಪಿಸಿ, ಸರಕಾರ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು. ಅಲ್ಲದೇ, 70 ವರ್ಷದ ಹಿರಿಯರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆಯಲ್ಲಿ ಉಚಿತ ಚಿಕಿತ್ಸೆ ಸೌಲಭ್ಯವನ್ನೂ ಪ್ರಕಟಿಸಿದರು.

18ನೇ ಲೋಕಸಭೆ ರಚನೆ ಬಳಿಕ ಲೋಕಸಭೆ-ರಾಜ್ಯಸಭೆ ಜಂಟಿ ಸದನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮೊದಲ ಭಾಷಣ ಇದಾಗಿದೆ.

'ಇದು ವಿಶ್ವದ ಅತಿ ದೊಡ್ಡ ಚುನಾವಣೆ. ಭಾರತದಲ್ಲಿ 3ನೇ ಬಾರಿಗೆ ಸ್ಪಷ್ಟ ಬಹುಮತದ ಸರಕಾರ ರಚನೆಯಾಗಿದೆ. ಇಡೀ ವಿಶ್ವವೇ ಭಾರತವನ್ನು ಗಮನಿಸುತ್ತಿದೆ. ಮಹಿಳೆಯರು ಅತ್ಯಧಿಕ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ. ವಿಕಸಿತ

ಭಾರತ ಸಂಕಲ್ಪದ ಮೇಲೆ ಜನರು ವಿಶ್ವಾಸವಿಟ್ಟಿದ್ದಾರೆ' ಎಂದು ಗಮನ ಸೆಳೆದರು.

18ನೇ ಲೋಕಸಭೆ ಜನರ ಕಲ್ಯಾಣಕ್ಕೆ ಶ್ರಮಿಸಲಿದೆ. 18ನೇ ಲೋಕಸಭೆ ಮೈಲುಗಲ್ಲು ಸ್ಥಾಪಿಸಲಿದೆ. ಈ ಬಾರಿ ಜನರ ಕಲ್ಯಾಣಕ್ಕೆ ಬಜೆಟ್ ಮಂಡಿಸಲಾಗುತ್ತದೆ. ಬಜೆಟ್ ಸಾಮಾನ್ಯರ ಒಳಿತು- ಅಭಿವೃದ್ಧಿ ನೆರವಾಗಲಿದೆ ಎಂದು ಹೇಳಿ ಭರವಸೆ ಭಾವ ಮೂಡಿಸಲೆತ್ನಿಸಿದರು.

ಭಾರತ ಆರ್ಥಿಕತೆಯಲ್ಲಿ 5ನೇ ಸ್ಥಾನಕ್ಕೇರಿದ್ದು, 3ನೇ ಸ್ಥಾನಕ್ಕೇರುವ ಗುರಿ ಹೊಂದಿದೆ. ಹಲವು ಸವಾಲುಗಳ ಮೆಟ್ಟಿ ಭಾರತ ಗುರಿಯತ್ತ ಮುನ್ನುಗ್ಗುತ್ತಿದೆ. ಕರೋನಾ ಮತ್ತಿತರ ಸವಾಲು, ಸಮಸ್ಯೆ, ಸಂಘರ್ಷಗಳ ನಡುವೆಯೇ ಭಾರತ ಅಭಿವೃದ್ಧಿ ಹಾದಿಯಲ್ಲಿ ಸಾಗುತ್ತಿದೆ. ವಿಕಸಿತ ಭಾರತದತ್ತ ಸರಕಾರ ಕೆಲಸ ಮಾಡಲಿದೆ. ಕೃಷಿ, ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳ ಕುರಿತು ಸರಕಾರ ವಿಶೇಷ ಗಮನಹರಿಸಲಿದೆ ಎಂದು ಮುರ್ಮು ಹೇಳಿದರು.

70 ವರ್ಷದವರಿಗೆ ಉಚಿತ ಚಿಕಿತ್ಸೆ

ದೇಶದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆಯಡಿ 70 ವರ್ಷ ಆದವರಿಗೆ ಉಚಿತ ಚಿಕಿತ್ಸೆ ದೊರೆಯಲಿದೆ. ಪ್ರಸ್ತುತ ಆಯುಷ್ಮಾನ್ ಭಾರತ-ಪಿಎಂ ಜನಾರೋಗ್ಯ ಯೋಜನೆಯಡಿ 55 ಕೋಟಿ ಫಲಾನುಭವಿಗಳು ಉಚಿತ ಚಿಕಿತ್ಸೆಯ ಪ್ರಯೋಜನ ಪಡೆಯುತ್ತಿದ್ದಾರೆ. ದೇಶಾದ್ಯಂತ ಇನ್ನೂ 25 ಸಾವಿರ ಜನೌಷಧ ಕೇಂದ್ರ ತೆರೆಯುವ ಕಾರ್ಯ ನಡೆದಿದೆ ಎಂದು ರಾಷ್ಟ್ರಪತಿ ಸದನದ ಮೂಲಕ ದೇಶಕ್ಕೆ ತಿಳಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ; ಅಪರಾಧಿಗೆ ಕಠಿಣ ಶಿಕ್ಷೆ

ದೇಶದಲ್ಲಿ ಸ್ಪರ್ಧಾತ್ಮಕ ಹಾಗೂ ನೀಟ್, ನೆಟ್ ಮೊದಲಾದ ಮಹತ್ವದ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿ ವಿದ್ಯಾರ್ಥಿಗಳ ಬದುಕಿನ ಜತೆ ಚೆಲ್ಲಾಟವಾಡುವವರಿಗೆ ಕಠಿಣ ಶಿಕ್ಷೆ ಕಾದಿದೆ. ತನಿಖೆ ನಡೆಯುತ್ತಿದ್ದು, ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದವರಿಗೆ ಕಠಿಣ ಶಿಕ್ಷೆ ಕೊಡಿಸಲು ಸರಕಾರ ಬದ್ಧವಾಗಿದೆ. ಪರೀಕ್ಷಾ ಪದ್ಧತಿಗಳಲ್ಲಿ ಸುಧಾರಣೆ ತರಲು ಸರಕಾರ ಕಟಿಬದ್ಧವಾಗಿದ್ದು, ಅದಾಗಲೇ ಕ್ರಮ ಜರುಗಿಸಲು ಆರಂಭಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ಈ ಸಂದರ್ಭ ಪ್ರತಿಪಕ್ಷಗಳ ಸದಸ್ಯರು 'ನೀಟ್' ಎಂದು ಪದೇ ಪದೇ ಕೂಗಲಾರಂಭಿಸಿದರು.

ಕೋರ್ಟ್‌ಗೆ ಸಿಎಂ ಕೇಜ್ರಿವಾಲ್ ಮನವಿ

ಪ್ಯಾಂಟ್ ಸಡಿಲಾಗಿದೆ, ದಯವಿಟ್ಟು ಬೆಲ್ಟ್ ಕೊಡಿಸಿ

ದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣ ದಲ್ಲಿ ಬಂಧಿತರಾಗಿ ಸದ್ಯ ಸಿಬಿಐ ವಶದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿ ವಾಲ್, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ವಿಚಿತ್ರವಾದ ಮನವಿಯನ್ನು ಮಾಡಿದ್ದಾರೆ. 'ನನ್ನ ಹೊಟ್ಟೆ ಕರಗಿದೆ. ಪ್ಯಾಂಟ್ ಸಡಿಲಾಗಿದೆ. ಸೊಂಟದಲ್ಲಿ ನಿಲ್ಲುತ್ತಿಲ್ಲ. ಪ್ಯಾಂಟ್ ಜಾರದಂತೆ ಕೈಗಳಲ್ಲಿ ಹಿಡಿದುಕೊಳ್ಳಬೇಕಾಗಿದೆ. ಹಾಗಾಗಿ, ನನಗೊಂದು ಬೆಲ್ಟ್ ಕೊಡಲು ಆದೇಶ ಮಾಡಿ' ಎಂದು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಲ್ಲಿ ಸಿಎಂ ಕೇಜ್ರಿವಾಲ್ ಮನವಿ ಮಾಡಿದ್ದಾರೆ. ಇದಕ್ಕೆ ಸಮ್ಮತಿಸಿರುವ ನ್ಯಾಯಾಧೀಶರು, ಆರೋಪಿಗೆ ಒಂದು ಬೆಲ್ಟ್ ಕೊಡಿ, ಹಾಗೆಯೇ, ಓದಲು ಭಗವದ್ಗೀತೆ ಕೊಡಿ ಎಂದು ಸಿಬಿಐ ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ಅಲ್ಲದೇ, ಆರೋಪಿ ಕೇಜ್ರಿವಾಲ್ ಅನಾರೋಗ್ಯ ಹಿನ್ನೆಲೆಯಲ್ಲಿ ಸಿಬಿಐ ಕಸ್ಟಡಿಯಲ್ಲಿರುವಾಗ ಮನೆಯಿಂದಲೇ ಊಟ ತರಿಸಿಕೊಳ್ಳಬಹುದು. ವೈದ್ಯರು ಸೂಚಿಸಿದ ಮಾತ್ರೆಗಳನ್ನು ಸೇವಿಸಬಹುದು. ಪ್ರತಿದಿನವೂ ಪತ್ನಿ ಮತ್ತು ವಕೀಲರನ್ನು ತಲಾ ಅರ್ಧ ಗಂಟೆ ಕಾಲ ಭೇಟಿಯಾಗಬಹುದು ಎಂದು ವಿಶೇಷ ಅನುಮತಿಯನ್ನೂ ನೀಡಿದ್ದಾರೆ.

ಆಡ್ವಾಣಿ ಚೇತರಿಕೆ ಮನೆಗೆ ವಾಪಸ್

ದೆಹಲಿ: ಬಿಜೆಪಿಯ ಹಿರಿಯ ನಾಯಕ, ಮಾಜಿ



ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ(96) ಆರೋಗ್ಯ ಏರುಪೇರಾದ ಕಾರಣ ದೆಹಲಿಯ ಏಮ್ಸ್‌ಗೆ ದಾಖಲಿಸಲಾಗಿತ್ತು. ಆಡ್ವಾಣಿ ಅವರು ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು ಬುಧವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಯುರಾಲಜಿ ಮತ್ತು ಜೆರಿಯಾಟ್ರಿಕ್ ತಜ್ಞರು ಚಿಕಿತ್ಸೆ ನೀಡಿದ್ದಾರೆ. ಬಳಿಕ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದರಿಂದ ಗುರುವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಮರಳಿದ್ದಾರೆ. ವೈದ್ಯಕೀಯ ತಂಡ ಹಿರಿಯ ನೇತಾರನ ಆರೋಗ್ಯದತ್ತ ನಿಗಾ ಇರಿಸಿದೆ.

ವಂದೇಭಾರತ್ ಸೇರಿ 4 ರೈಲು ವೇಗ ಕಡಿತ

ದೆಹಲಿ: ವಂದೇ ಭಾರತ್, ಗತಿಮಾನ್ ಎಕ್ಸ್‌ಪ್ರೆಸ್ ಸೇರಿದಂತೆ ದೇಶದ ಅತಿವೇಗದ 4 ರೈಲುಗಳ ವೇಗ ತಗ್ಗಿಸಲು ಭಾರತೀಯ

ರೈಲ್ವೆ ಇಲಾಖೆ ನಿರ್ಧರಿಸಿದೆ. ಗಂಟೆಗೆ 160 ಕಿ.ಮೀ. ವೇಗದಲ್ಲಿ ಚಲಿಸುವ ಈ 4 ರೈಲುಗಳ ವೇಗ 130 ಕಿ.ಮೀಗೆ ತಗ್ಗಲಿದೆ. ಶತಾಬ್ದಿ ಎಕ್ಸ್‌ಪ್ರೆಸ್ ರೈಲುಗಳು, ದೆಹಲಿ-ಝಾನ್ಸಿ ಗತಿಮಾನ್ ಎಕ್ಸ್‌ಪ್ರೆಸ್, ದೆಹಲಿ-ಖಜುರಾಹೋ ವಂದೇಭಾರತ್, ದೆಹಲಿ-ರಾಣಿ ಕಮಲಾಪತಿ ವಂದೇಭಾರತ್ ವೇಗ ಕಡಿತವಾಗಲಿದೆ. ರೈಲು ಪಯಣದ ಅವಧಿ 25-30 ನಿಮಿಷ ಹೆಚ್ಚಲಿದೆ. ಅಲ್ಲದೇ ಇದೆಲ್ಲದರ ಪರಿಭಾಮ 10 ಸೂಪರ್‌ಫಾಸ್ಟ್ ರೈಲುಗಳ ಸಂಚಾರ ಸಮಯ ವ್ಯತ್ಯಯವಾಗಲಿದೆ. ಕಾಂಚನಗಂಗಾ ಎಕ್ಸ್‌ಪ್ರೆಸ್ ಅಪಘಾತ, ದೆಹಲಿ-ಝಾನ್ಸಿ ರೈಲು ಮಾರ್ಗ ರೈಲಿನ ಸುರಕ್ಷತೆ-ಎಚ್ಚರಿಕೆ ನೀಡುವ ವ್ಯವಸ್ಥೆ ವೈಫಲ್ಯ ಹಿನ್ನೆಲೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎನ್ನಲಾಗಿದೆ.

ಕಾಶ್ಮೀರ: ಭೂಮಿ ಖರೀದಿ ಅಸಾಧ್ಯ

ಪಣಜಿ: ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ವಿಧಿ 370 ರದ್ದಾಗಿದ್ದರೂ ಇಲ್ಲಿ ಭೂಮಿ ಖರೀದಿಸುವುದು ಬೇರೆ ರಾಜ್ಯದವರಿಗೆ ಅಸಾಧ್ಯವಾಗಿದೆ. 'ಡೊಮಿಸಿಲ್ ಪ್ರಮಾಣಪತ್ರ' ನಿಯಮ ಬೇರೆ ರಾಜ್ಯದವರ ಭೂಮಿ ಖರೀದಿ ಇಚ್ಛೆಗೆ ಅಡ್ಡಿಯಾಗಿದೆ ಎಂದು ದೆಹಲಿ ಪನೂನ್ ಕಾಶ್ಮೀರ ಸಂಘಟನೆ ಯುವ ಅಧ್ಯಕ್ಷ ವಿಠ್ಠಲ್ ಚೌಧರಿ ವಿಷಾದಿಸಿದರು.

'ಕಾಶ್ಮೀರಿ ಹಿಂದೂ ಪುನರ್ವಸತಿ' ವಿಚಾರವಾಗಿ ಗೋವಾ ವೈಶ್ವಿಕ ಹಿಂದೂ ರಾಷ್ಟ್ರ ಮಹೋತ್ಸವದಲ್ಲಿ ಮಾತನಾಡಿದ ಚೌಧರಿ, ಕಾಶ್ಮೀರದ ಬಗ್ಗೆ ಒಳ್ಳೆಯ ಚಿತ್ರಣವನ್ನಷ್ಟೇ ನೀಡಲಾಗುತ್ತದೆ. ಅಲ್ಲಿನ ಭಯಗ್ರಸ್ತ ಸ್ಥಿತಿ ಮರೆ ಮಾಡಲಾಗಿದೆ. ಕಾಶ್ಮೀರಿ ಹಿಂದೂಗಳ ವಂಶವಿನಾಶ ಆಗುತ್ತಿದೆ. ಅದನ್ನು ಯಾರೂ ಹೇಳುತ್ತಿಲ್ಲ. ಕಾಶ್ಮೀರದಲ್ಲಿ ಪನೂನ್ ಕಾಶ್ಮೀರ ಮೂಲಕ ಸನಾತನ ಧರ್ಮ ಪ್ರಚಾರ ಆರಂಭವಾಗಬೇಕು. ಅದುವೇ ಹಿಂದೂ ರಾಷ್ಟ್ರದ ಮೊದಲ ಹೆಜ್ಜೆ ಆಗಲಿದೆ ಎಂದರು.

ವೈದ್ಯ, ಮಗಳಲ್ಲಿ ಝಿಕಾ ವೈರಸ್

ಪುಣೆ: ಮಹಾರಾಷ್ಟ್ರದ ಪುಣೆ ನಗರದಲ್ಲಿ ಝಿಕಾ ವೈರಸ್ ಪತ್ತೆಯಾಗಿದ್ದು, ಆತಂಕಕ್ಕೆ ಕಾರಣವಾಗಿದೆ. 46 ವರ್ಷದ



ವೈದ್ಯ ಮತ್ತು ಅವರ 15 ವರ್ಷದ ಪುತ್ರಿಯಲ್ಲಿ ಝಿಕಾ ಲಕ್ಷಣ ಕಂಡು ಬಂದಿವೆ. ಪ್ರಯೋಗಾಲಯ ವರದಿಯೂ ಪಾಸಿಟಿವ್ ಬಂದಿದೆ. ಆದರೆ ಇಬ್ಬರ ದೇಹಾರೋಗ್ಯ ಸ್ಥಿರವಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ವೈದ್ಯರಲ್ಲಿ ಇತ್ತೀಚೆಗೆ ಜ್ವರ-ಮೈಮೇಲೆ ದದ್ದು ಕಾಣಿಸಿದವು. ನಂತರ ಆಸ್ಪತ್ರೆಗೆ ದಾಖಲಿಸಿ, ಅಪ್ಪ-ಮಗಳ ರಕ್ತವನ್ನು ನಗರದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ(ಎನ್‌ಐವಿ) ಕಳುಹಿಸಲಾಯಿತು. ಝಿಕಾ ವೈರಸ್ ಪಾಸಿಟಿವ್ ಎಂದು ವರದಿ ಬಂದಿರುವುದಾಗಿ ಆರೋಗ್ಯಾಧಿಕಾರಿ ಹೇಳಿದ್ದಾರೆ.

ಪಟನಾದಲ್ಲಿ ಇಬ್ಬರು ಆರೋಪಿಗಳ ಬಂಧನ

ನೀಟ್‌ನಲ್ಲಿ ಸಿಬಿಐ ಮೊದಲ ಬೇಟೆ

ಪಟನಾ: ವೈದ್ಯಕೀಯ ಶಿಕ್ಷಣ ಪ್ರವೇಶದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-2024) ಪ್ರಶ್ನೆಪತ್ರಿಕೆಗಳ ಸೋರಿಕೆ ಪ್ರಕರಣದ ತನಿಖೆ ಆರಂಭಿಸಿರುವ ಸಿಬಿಐ,

ಮೊದಲಿಗೇ ಬಿಹಾರದಲ್ಲಿ ಇಬ್ಬರು ಆರೋಪಿಗಳನ್ನು ಗುರುವಾರ ಬಂಧಿಸಿದೆ. ಪಟನಾ ನಗರದ ಮನೀಶ್ ಕುಮಾರ್, ಆಶುತೋಷ್ ಬಂಧಿತರು.

ನೀಟ್ ವಿದ್ಯಾರ್ಥಿಗಳನ್ನು ಖಾಲಿ ಇರುವ ಶಾಲೆಯೊಂದಕ್ಕೆ ವಾಹನದಲ್ಲಿ ಕರೆದೊಯ್ದ ಮನೀಶ್ ಮತ್ತು ಆಶುತೋಷ್, ಅಲ್ಲಿ ಪ್ರಶ್ನೆಪತ್ರಿಕೆ(ಸೋರಿಕೆಯಾಗಿದ್ದು) ಹಂಚಿದ್ದರು. ಅಲ್ಲದೇ ಕೆಲ ವಿದ್ಯಾರ್ಥಿಗಳಿಗೆ ಉಳಿದುಕೊಳ್ಳಲು ತಮ್ಮ ಮನೆಯಲ್ಲೇ ಅವಕಾಶ ಮಾಡಿಕೊಟ್ಟಿದ್ದರು ಎಂದು ತನಿಖೆ ವೇಳೆ ತಿಳಿದುಬಂದಿದೆ ಎಂದು ಸಿಬಿಐ ಮೂಲಗಳು ತಿಳಿಸಿವೆ. ಉಳಿದವರಿಗೆ ಪಟನಾದ ಬಾಯ್ಸ್ ಹಾಸ್ಟೆಲ್‌ನಲ್ಲಿ ಉಳಿಯಲು ವ್ಯವಸ್ಥೆ ಮಾಡಿದ್ದರು. ಮೇ 4ರಂದು ಪರೀಕ್ಷಾರ್ಥಿಗಳು ಹಾಸ್ಟೆಲ್‌ನಲ್ಲಿದ್ದು ಸೋರಿಕೆಯಾಗಿದ್ದ ಪ್ರಶ್ನೆಪತ್ರಿಕೆ ಓದಿಕೊಂಡು, ಉತ್ತರ ಸಿದ್ಧಪಡಿಸಿ ನೆನಪಿನಲ್ಲಿಟ್ಟುಕೊಳ್ಳಲು ಆರೋಪಿಗ ಳಿಬ್ಬರೂ ಅಗತ್ಯ ಸೌಲಭ್ಯ ಒದಗಿಸಿದ್ದರು. ಮೇ 5ರಂದು ನೀಟ್ ಪರೀಕ್ಷೆಗೆ ವಿದ್ಯಾರ್ಥಿಗಳು ತೆರಳಲೂ ವಾಹನ ಸೌಕರ್ಯ ಮಾಡಿಕೊಟ್ಟಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಅಪ್ಪನಿಗೆ ಅಪ್ರಾಪ್ತೆಯ ಯಕೃತ್ ದಾನಕ್ಕೆ ಹೈಕೋರ್ಟ್ ಸಮ್ಮತಿ

ಪಾಪಾ ಕೊ ಬಚಾಲಿಯಾ ಬೇಟಿ...

ಇಂದೋರ್: 'ಬೇಟಿ ಪಡಾವೊ, ಬೇಟಿ ಬಚಾವೊ'... ಇದು ಕೇಂದ್ರ ಸರಕಾರದ ಜನಪ್ರಿಯ ಘೋಷಣೆ. ಮಧ್ಯಪ್ರದೇಶದ ಅಪ್ರಾಪ್ತ ಪುತ್ರಿಯೊಬ್ಬಳು ಅಪ್ಪನಿಗೆ ಯಕೃತ್ ದಾನ ಮಾಡುವ ಮೂಲಕ 'ಪಾಪಾ ಕೊ ಬಚಾಲಿಯಾ ಬೇಟಿ'.. ಎನಿಸಿಕೊಂಡಿದ್ದಾಳೆ.

42 ವರ್ಷ ವಯಸ್ಸಿನ ತನ್ನ ಅಸ್ವಸ್ಥ ತಂದೆಯ ಪ್ರಾಣ ರಕ್ಷಣೆಗಾಗಿ ಮಧ್ಯಪ್ರದೇಶದ ಅಪ್ರಾಪ್ತ ಪುತ್ರಿಯೊಬ್ಬಳು ತನ್ನ ಯಕೃತ್‌ನ ಭಾಗವನ್ನೇ ದಾನ ಮಾಡಲು ಮುಂದಾಗಿದ್ದಾಳೆ. ತಂದೆಯ ಸದ್ಯದ ಆರೋಗ್ಯ ಸ್ಥಿತಿ, ಪುತ್ರಿಯ ತ್ಯಾಗ ಮನೋಭಾವವನ್ನು ಕಂಡು ಮರುಗಿದ ಮಧ್ಯಪ್ರದೇಶ ಹೈಕೋರ್ಟ್, ಪ್ರಾಪ್ತ ವಯಸ್ಕಳಾಗಿಲ್ಲದಿದ್ದರೂ ಪುತ್ರಿಯ ಅಂಗದಾನಕ್ಕೆ ಸಮ್ಮತಿ ನೀಡಿದೆ. ಶಿವನಾರಾಯಣ ಬಾಥಮ್

ಅವರಿಗೆ ಜ್ಯೇಷ್ಠ ಪುತ್ರಿ ಪ್ರೀತಿ(17) ಯಕೃತ್‌ನ ಭಾಗ ದಾನ ಮಾಡಲು ಒಪ್ಪಿದ್ದು ಯಕೃತ್ ಕಸಿಗೆ ಅನುಮತಿ ನೀಡಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ನ್ಯಾ. ವಿಶಾಲ್ ಮಿಶ್ರಾ ಅವರು ಅರ್ಜಿ ವಿಚಾರಣೆ ನಡೆಸಿದ್ದಾಗ ಮಾಹಿತಿ ನೀಡಿದ ಸರಕಾರಿ ವಕೀಲರು, ರಾಜ್ಯ ಸರಕಾರದ ವೈದ್ಯಕೀಯ ಮಂಡಳಿ ತಪಾಸಣೆ ನಡೆಸಿದೆ. ಪ್ರೀತಿ ಯಕೃತ್ ದಾನ ಮಾಡುವುದಕ್ಕೆ ಸಮಸ್ಯೆ ಇಲ್ಲ ಎಂದು ತಿಳಿಸಿದರು.

ಶಿವನಾರಾಯಣ 6 ವರ್ಷಗಳಿಂದ ಗಂಭೀರ ಸ್ವರೂಪದ ಯಕೃತ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ತಂದೆಗೆ 80 ವರ್ಷ, ತಾಯಿ ಮಧುಮೇಹಿ. ಹಾಗಾಗಿ ಅವರಿಬ್ಬರಿಂದ ಅಂಗದಾನ ಸಾಧ್ಯವಿಲ್ಲ. ಪುತ್ರಿಯೊಬ್ಬಳೇ ಅಂಗದಾನಕ್ಕೆ ಅರ್ಹಳು ಎಂದು ವಕೀಲ ನಿಲೇಶ್ ಮನೋರೆ ತಿಳಿಸಿದ್ದಾರೆ.

ನನ್ನ ಹೆಮ್ಮೆಯ ಮಗಳು ನನಗೆ ಜೀವದಾನ ಮಾಡಲು ಮುಂದಾಗಿದ್ದಾಳೆ ಶಿವನಾರಾಯಣ ಭಾವುಕರಾಗಿದ್ದಾರೆ. ಸೂಕ್ತ ಸುರಕ್ಷಾ ಕ್ರಮಗಳನ್ನು ಕೈಗೊಂಡು ಯಕೃತ್ ಕಸಿ ಪ್ರಕ್ರಿಯೆ ತ್ವರಿತವಾಗಿ ನಡೆಸಿ ಎಂದು ಏಕಸದಸ್ಯ ಪೀಠ ಆದೇಶಿಸಿದೆ.

2 ಸಾವಿರ ಎಕರೆಗಳಲ್ಲಿ ಬೃಹತ್ ವಿಮಾನ ನಿಲ್ದಾಣ | ವರ್ಷಕ್ಕೆ 3 ಕೋಟಿ ಪ್ರಯಾಣಿಕರ ಸಾಮರ್ಥ್ಯ

ಹೊಸೂರಲ್ಲಿ ಅಂ.ರಾ.ವಿಮಾನ ನಿಲ್ದಾಣ

ಚೆನ್ನೈ: ತಮಿಳುನಾಡಿನ ಗಡಿ ಜಿಲ್ಲೆ ಹೊಸೂರಿನಲ್ಲಿ ಹೊಸ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಪ್ರಕಟಿಸಿದ್ದಾರೆ.

ನೂತನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು 2,000 ಎಕರೆ ವಿಸ್ತಾರದಲ್ಲಿ ನಿರ್ಮಿಸಲಾಗುವುದು. ಈ ನಿಲ್ದಾಣ ವರ್ಷಕ್ಕೆ 3 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವಷ್ಟು ಸಾಮರ್ಥ್ಯ ಹೊಂದಿರಲಿದೆ ಎಂದು ವಿವರಿಸಿದರು.

ನಿಯಮ 110ರಡಿ ವಿಧಾನಸಭೆಯಲ್ಲಿ ಈ ವಿಷಯ ಪ್ರಕಟಿಸಿದ ಸಿಎಂ, ಹೊಸೂರು ಇತ್ತೀಚೆಗೆ ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕ್ ವಾಹನಗಳ ತಯಾರಿಕೆಯ

ಕೇಂದ್ರವಾಗುತ್ತಿದೆ, ಹೆಚ್ಚಿನ ಹೂಡಿಕೆ ಆಕರ್ಷಿಸುತ್ತಿದೆ. ಹೊಸೂರು ಸುತ್ತಲಿನ ಹಲವು ಉತ್ಪಾದನಾ ಮತ್ತು ಕೈಗಾರಿಕಾ ಘಟಕಗಳಿಗೆ ದೇಶ-ವಿದೇಶದ ಸಂಪರ್ಕ ಹೆಚ್ಚಿಸುವ ಅಗತ್ಯವಿದೆ. ಹಾಗಾಗಿ ಹೊಸ ವಿಮಾನ ನಿಲ್ದಾಣದ ಅಗತ್ಯವಿದೆ ಎಂದರು.

ಹೊಸೂರು ವಾಹನ ಮತ್ತು ವಿದ್ಯುತ್ ವಾಹನ ಉತ್ಪಾದನೆ, ಎಲೆಕ್ಟ್ರಾನಿಕ್ಸ್ ನ್ಯೂಕ್ಲಿಯಸ್ ಆಗಿ ಹೊರಹೊಮ್ಮಿದೆ. ಯೋಜಿತ ಐಟಿ ಪಾಕ್ ಜತೆಗೆ ಐಟಿ ಕೇಂದ್ರವಾಗಿಯೂ ಅಭಿವೃದ್ಧಿ ಹೊಂದುತ್ತಿದೆ. ಚೆನ್ನೈ, ತಿರುವಳ್ಳೂರ್, ಶ್ರೀಪೆರಂಬದೂರ್, ಕೊಯಮತ್ತೂರು ಮತ್ತಿತರ ಪ್ರಮುಖ ವ್ಯಾಪಾರ ಕೇಂದ್ರ-ಕೈಗಾರಿಕಾ ವಲಯಗಳಿಗೆ ಸಮೀಪದಲ್ಲಿದೆ. ಬೆಂಗಳೂರಿಗೂ ಸಮೀಪವಾಗಿದೆ. ಕೃಷ್ಣಗಿರಿ ಮತ್ತು ಧರ್ಮಪುರಿ ಪ್ರದೇಶಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಹೊಸೂರು ವಿಮಾನ ನಿಲ್ದಾಣ ಅಗತ್ಯವಿದೆ ಎಂದರು.

ಪುಣೆ ಮೂಲದ ಆಪರೇಟರ್ ತನೇಜಾ ಏರೋಸ್ಪೇಸ್- ಏವಿಯೇಷನ್ ಲಿ. ಒಡೆತನದ ತನೇಜಾ ಏರೋಡ್ರಮ್ ವಿಮಾನ ನಿಲ್ದಾಣ ಸದ್ಯ ಹೊಸೂರಲ್ಲಿದೆ.

ಸೆಮಿಸ್‌ನಲ್ಲಿ ರಶೀದ್ ಪಡೆಗೆ ಹೀನಾಯ ಸೋಲು | ಮಿಂಚಿದ ಶಮ್ಸಿ, ಜಾನ್ಸೆನ್

ಆಫ್ಘನ್ ಸುಲಭ ತುತ್ತು, ಆಫ್ರಿಕಾ ಪ್ರಶಸ್ತಿ ಸುತ್ತಿಗೆ

ತರೌಬಾ: ಟಿ20 ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ಸೆಮಿಫೈನಲ್ ಆಡಿದ ಅಫ್ಘಾನಿಸ್ತಾನವು ದ.ಆಫ್ರಿಕಾ ವಿರುದ್ಧದ ಸೆಮಿಫೈನಲ್‌ನಲ್ಲಿ ಹೀನಾಯ ಸೋಲನುಭವಿಸಿದೆ. ಆ ಮೂಲಕ ವಿಶ್ವಕಪ್‌ನಿಂದ ಆಫ್ಘನ್ನರು ಹೊರಬಿದ್ದಿದ್ದು, ಕನಿಷ್ಠ ಪ್ರತಿರೋಧ ತೋರದೆ ಪಯಣ ನಿಲ್ಲಿಸಿದರು. ಇನ್ನೊಂದೆಡೆ ಸೆಮಿಸ್‌ನಲ್ಲಿ ಹರಿಣರು ಭರ್ಜರಿ ಗೆಲುವು ಸಾಧಿಸಿದ್ದು, ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಈ ಹಿಂದೆ ಲೀಗ್ ಹಾಗೂ ಸೂಪರ್ 8 ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ದಂತಹ ತಂಡಗಳನ್ನು ಸೋಲಿಸಿದ್ದ ಆಫ್ಘನ್ ತೀವ್ರ ಹೋರಾಟದ ನಂತರ ಸೆಮಿಫೈನಲ್‌ಗೆ ಬಂದಿದ್ದರು. ಅದಲ್ಲದೆ, ಲೀಗ್ ಹಂತದಲ್ಲಿ ಭರ್ಜರಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಪ್ರದರ್ಶನ ತೋರಿದ್ದರು. ಆದರೆ ಬ್ಯಾಟಿಂಗ್ ವಿಭಾಗವು ಸೆಮಿಸ್‌ನಲ್ಲಿ ಕೈಕೊಟ್ಟಿದ್ದು, ತಂಡವು ಕನಿಷ್ಠ ಮೂರಂಕಿ ಮೊತ್ತಕ್ಕೆ ತಲುಪಲಿಲ್ಲ. ಅದಲ್ಲದೇ ಮೊದಲ ಬಾರಿಗೆ ಸೆಮಿಫೈನಲ್ ಆಡಿದ್ದ ಅಫ್ಘಾನಿಸ್ತಾನ ತಂಡವು ಇದುವರೆಗಿನ ಸೆಮಿಫೈನಲ್‌ನಲ್ಲಿ ಕನಿಷ್ಠ ರನ್ ಗಳಿಸಿದ ಕಳಪೆ ದಾಖಲೆ ಬರೆದಿದೆ.

ಇಲ್ಲಿನ ಬ್ರಿಯಾನ್ ಲಾರಾ ಕ್ರೀಡಾಂಗಣದಲ್ಲಿ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನವು ಹರಿಣರ ಬಿಗಿ ಬೌಲಿಂಗ್‌ಗೆ ತತ್ತರಿಸಿ 56 ರನ್‌ಗಳಿಗೆ ಸರ್ವಪತನ ಕಂಡಿತು. ಅದನ್ನು ಬೆನ್ನುಹತ್ತಿದ ದ.ಆಫ್ರಿಕಾ 8.5 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 60 ರನ್ ಗಳಿಸಿ ಗೆಲುವು ಸಾಧಿಸಿ ಫೈನಲ್ ಲಗ್ಗೆ ಇಟ್ಟಿತು.

ಆರಂಭದಿಂದಲೂ ತತ್ತರಿಸಿದ ಆಫ್ಘನ್

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನದ ಯಾವುದೇ ಬ್ಯಾಟರ್‌ಗಳು 10ಕ್ಕಿಂತ ಹೆಚ್ಚು ರನ್ ಗಳಿಸಲೇ ಇಲ್ಲ. ಅಜ್ಮತ್ ಉಲ್ಲಾ ಉಮರ್ಜಾಯ್ (10) ಮಾತ್ರ ಎರಡಂಕಿ ರನ್ ಗಳಿಸಿದ ಏಕೈಕ ಬ್ಯಾಟರ್ ಆದರೆ, ರಹಮಾನುಲ್ಲಾ ಗುರ್ಬಾಜ್, ಮೊಹಮ್ಮದ್ ನಬಿ ಮತ್ತು ನೂರ್ ಅಹ್ಮದ್ ಶೂನ್ಯಕ್ಕೆ ಔಟಾದರು. ಇದಲ್ಲದೆ ಇಬ್ರಾಹಿಂ ಜದ್ರಾನ್, ನಂಗೆಲಿ ಖರೋಟೆ, ನವೀನ್ ಉಲ್ ಹಕ್ ಮತ್ತು ಫಜಲ್ ಹಕ್ ಫಾರೂಕಿ ತಲಾ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕರೀಂ ಜನ್ನತ್ ಮತ್ತು ರಶೀದ್ ಖಾನ್ ತಲಾ 8 ರನ್ ಗಳಿಸಿದರೆ, ಗುಲ್ಬದಿನ್ ನೈಬ್ 9 ರನ್ ಗಳಿಸಿ ವಿಕೆಟ್ ಕಳೆದುಕೊಂಡರು.

- ಮೊದಲ ಸೆಮಿಸ್‌ನಲ್ಲಿ ಆಫ್ಘನ್ನರಿಗೆ ಹೀನಾಯ ಸೋಲು
- ಫೈನಲ್‌ಗೇರಿದ ದ.ಆಫ್ರಿಕಾ
- ವಿಶ್ವಕಪ್ ಸೆಮಿಸ್‌ನಲ್ಲಿ ಕನಿಷ್ಠ ಸ್ಕೋರ್
- 10ರ ಗಡಿ ದಾಟದ ಆಫ್ಘನ್ ದಾಂಡಿಗರು.

ಪರಿಣಾಮ ಅಫ್ಘಾನಿಸ್ತಾನ ಕೇವಲ 11.5 ಓವರ್‌ಗಳಲ್ಲಿ 56 ರನ್‌ಗಳಿಗೆ ಸರ್ವಪತನ ಕಂಡಿತು.

ದ.ಆಫ್ರಿಕಾಗೆ ಸುಲಭ ತುತ್ತು: ಅಲ್ಪ ಗುರಿ ಬೆನ್ನತ್ತಲು ಬಂದ ಹರಿಣಗಳ ಪಡೆ ಯಾವುದೇ ತೊಂದರೆಯಿಲ್ಲದೆ 8.5 ಓವರ್ ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ ಸುಲಭವಾಗಿ ಬಾರಿಸಿ ಬೀಗಿತು. ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ 8 ಎಸೆತಗಳಲ್ಲಿ 5 ರನ್ ಗಳಿಸಿ ಔಟಾದರು. ಇದರ ಹೊರತಾಗಿ ರೀಸ್ ಹೆನ್ರಿಕ್ಸ್ 23 ರನ್ ಮತ್ತು ನಾಯಕ ಆಡಮ್ ಮಾರ್ಕ್ರಾಮ್ 29 ರನ್‌ಗಳನ್ನು ಹೊಡೆದು ತಮ್ಮ ತಂಡವನ್ನು ಫೈನಲ್‌ಗೆ ಕರೆದೊಯ್ದರು.

ಇತಿಹಾಸದಲ್ಲೇ ಕನಿಷ್ಠ ಸ್ಕೋರ್

ಮೊದಲ ಸೆಮಿಫೈನಲ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಅಫ್ಘಾನಿಸ್ತಾನವು ಟಿ20 ವಿಶ್ವಕಪ್ ಇತಿಹಾಸದಲ್ಲಿ ಕಳಪೆ ದಾಖಲೆ ಬರೆದಿದೆ. ಸಂಪೂರ್ಣ ತಂಡವು ಕೇವಲ 56 ರನ್‌ಗೆ ಆಲೌಟ್ ಆಗಿದ್ದು, ಇದುವಿಶ್ವಕಪ್‌ನ ಸೆಮಿಸ್‌ನಲ್ಲಿ ಗಳಿಸಿದ ಕನಿಷ್ಠ ಸ್ಕೋರ್ ಆಗಿದೆ. ಇದರೊಂದಿಗೆ ದ.ಆಫ್ರಿಕಾಗೆ ವಿಶ್ವಕಪ್‌ನಲ್ಲಿ ಕಡಿಮೆ ಮೊತ್ತಕ್ಕೆ ಆಲೌಟ್ ಮಾಡಿದ ತಂಡ ಎಂಬ ಹಿರಿಮೆ ಸಿಕ್ಕಿದೆ.

10 ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ ಪಡೆಯ ಬ್ಯಾಟಿಂಗ್ ವಿಭಾಗ ಯಾವ ಮಟ್ಟದಲ್ಲಿ ಕುಸಿದಿತ್ತು ಎಂದರೆ, ಅಜ್ಮತುಲ್ಲಾ ಅವರು 10 ರನ್ ಗಳಿಸಿದ್ದು ತಂಡದಲ್ಲಿನ ಗರಿಷ್ಠ ಸ್ಕೋರ್ ಆಗಿದೆ. ಉಳಿದಂತೆ ಗುಲ್ಬದಿನ್ 9, ರಶೀದ್, ಕರೀಮ್ 8 ರನ್ ಗಳಿಸಿದ್ದಾರೆ.

02 ಅಫ್ಘಾನಿಸ್ತಾನ ತಂಡದ ನಾಲ್ವರು ಬ್ಯಾಟರ್‌ಗಳು 2 ರನ್ ಗಳಿಸಿ ವಿಕೆಟ್ ನೀಡಿದ್ದಾರೆ. ಅಲ್ಲದೆ ಸ್ಫೋಟಕ ಬ್ಯಾಟರ್ ಗುರ್ಬಾಜ್ ಹಾಗೂ ನಬಿ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಇಬ್ರಾಹಿಂ, ನವೀನ್, ಖರೋಟೆ, ಫಾರುಕಿ ನಾಲ್ವರು ಬಾಟರ್‌ಗಳು ಕೇವಲ 2 ರನ್ ಗಳಿಸಿ ವಿಕೆಟ್ ಒಪಪಿಸಿದ್ದರು.

03 ಅಫ್ಘಾನಿಸ್ತಾನ ತಂಡವನ್ನು ಬೆಂಡೆತ್ತಿದ ದ. ಆಫ್ರಿಕಾ ಬೌಲರ್‌ಗಳು ಭರ್ಜರಿ ಪ್ರದರ್ಶನ ತೋರಿದ್ದಾರೆ. ಪ್ರಾರಂಭಿಕ ಹಂತದಿಂದಲೂ ಮಾರಕ ಬೌಲಿಂಗ್ ದಾಳಿ ಮಾಡಿದ್ದ ಜಾನ್ಸೆನ್ ಹಾಗೂ ಶಮ್ಸಿ ತಲಾ 3 ವಿಕೆಟ್ ಪಡೆದುಕೊಂಡರು. ಜಾನ್ಸೆನ್ 16 ರನ್‌ಗೆ 3 ವಿಕೆಟ್ ಕಿತ್ತರೆ, ಶಮ್ಸಿ ಕೇವಲ 6 ರನ್ ನೀಡಿ 3 ವಿಕೆಟ್ ವಿಕೆಟ್ ಕಬಳಿಸಿದ್ದಾರೆ.

ಶ್ರೀಲಂಕಾ ಕೋಚ್ ಕ್ರಿಸ್ ರಾಜೀನಾಮೆ

ಆಂಟಿಗುವಾ: ಟಿ20 ವಿಶ್ವಕಪ್‌ನಲ್ಲಿ ಶ್ರೀಲಂಕಾ ತಂಡವು ಕಳಪೆ ಪ್ರದರ್ಶನ ತೋರಿದ್ದು,

ತಂಡದ ಮುಖ್ಯ ತರಬೇತುದಾರ ಕ್ರಿಸ್ ಸಿಲ್ವರ್‌ವುಡ್ ರಾಜೀನಾಮೆ ನೀಡಿದ್ದಾರೆ. ಈ ಬಾರಿಯ ವಿಶ್ವಕಪ್‌ನಲ್ಲಿ ಶ್ರೀಲಂಕಾ ತಂಡವು ಗುಂಪು ಹಂತದಿಂದಲೇ ಹೊರಬಂದಿತ್ತು. ಇದು ಐಸಿಸಿ ಪಂದ್ಯಾವಳಿಯಲ್ಲಿ ಅದರ ಕೆಟ್ಟ ಪ್ರದರ್ಶನವಾಗಿದೆ. ಹೀಗಾಗಿ ಈ ನಡೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದ್ದು, ಅಂತಾರಾಷ್ಟ್ರೀಯ ಕೋಚ್ ಆಗಿರುವುದು ಎಂದರೆ ಪ್ರೀತಿಪಾತ್ರರಿಂದ ದೀರ್ಘಕಾಲ ದೂರವಿರುವುದು ಎಂದರ್ಥ. ನನ್ನ ಕುಟುಂಬವನ್ನು ಸಮಾಲೋಚಿಸಿದ ನಂತರ, ನಾನು ಭಾರವಾದ ಹೃದಯದಿಂದ ಮನೆಗೆ ಹಿಂತಿರುಗಿ ನನ್ನ ಕುಟುಂಬದೊಂದಿಗೆ ಸಮಯ ಕಳೆಯುವ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದೇನೆ. ಶ್ರೀಲಂಕಾ ಕ್ರಿಕೆಟ್‌ನ ಭಾಗವಾಗಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ನಾನು ಬಹಳಷ್ಟು ಒಳ್ಳೆಯ ನೆನಪುಗಳೊಂದಿಗೆ ಹೊರಡುತ್ತಿದ್ದೇನೆ ಎಂದು ಕ್ರಿಸ್ ಹೇಳಿದ್ದಾರೆ.

ಒಲಿಂಪಿಕ್ಸ್ ಶ್ರೀಹರಿ, ಧಿನಿಧಿ ಅರ್ಹ

ಬೆಂಗಳೂರು: ಪ್ಯಾರಿಸ್ ಒಲಿಂಪಿಕ್ಸ್‌ಗೆ ಕರ್ನಾಟಕದ ಸ್ವಿಮ್ಮರ್‌ಗಳಾದ ಶ್ರೀಹರಿ ನಟರಾಜನ್ ಹಾಗೂ ಧಿನಿಧಿ ದೇಸಿಂಘು ಅರ್ಹತೆ ಪಡೆದಿದ್ದಾರೆ. ಶ್ರೀಹರಿಗೆ ಇದು ಸತತ 2ನೇ ಒಲಿಂಪಿಕ್ಸ್ ಕ್ರೀಡಾಕೂಟವಾಗಿದ್ದು, 14 ವರ್ಷದ ಧಿನಿಧಿಗೆ ಇದು ಮೊದಲ ಒಲಿಂಪಿಕ್ಸ್ ಸ್ಪರ್ಧೆಯಾಗಲಿದೆ. ಈ ಬಗ್ಗೆ ಭಾರತೀಯ ಈಜು ಫೆಡರೇಶನ್ ಖಚಿತಪಡಿಸಿಕೊಂಡಿದೆ.

2021ರ ಟೋಕಿಯೊ ಒಲಿಂಪಿಕ್ಸ್ ಶ್ರೀಹರಿ ಮೊದಲ ಬಾರಿಗೆ ಭಾಗವಹಿಸಿದ್ದರು. ಆದರೆ ಮೊದಲ ಪದಕ ಗೆಲ್ಲುವಲ್ಲಿ ವಿಫಲರಾಗಿದ್ದರು. ಇದೀಗ ದ್ವಿತೀಯ ಪ್ರಯತ್ನದಲ್ಲಿ ಐತಿಹಾಸಿಕ ಪದಕವೊಂದನ್ನು ಗೆಲ್ಲುವ ವಿಶ್ವಾಸದೊಂದಿಗೆ ಕಣಕ್ಕಿಳಿಯಲಿದ್ದಾರೆ.

ಶ್ರೀಹರಿ 100 ಮೀ, ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವುದು ಸಂತಸ ತಂದಿದೆ ಹೇಳಿದ್ದಾರೆ. ಇನ್ನು ಮಹಿ ಳೆಯರ ವಿಭಾಗದಲ್ಲಿ ಆಯ್ಕೆಯಾದ ಕಿರಿಯ ಈಜುಪಟು ಎನಿಸಿಕೊಂಡಿರುವ ಧಿನಿಧಿ, 200 ಮೀ. ಫ್ರೀ ಸ್ಟೈಲ್ ವಿಭಾಗದಲ್ಲಿ ಸ್ಪರ್ಧಿಸಲಿ ದ್ದಾರೆ.

400 ಮೀಟರ್ ಓಟ: ಕಿರಣ್ ಅರ್ಹ

ಪಂಚಕುಲದಲ್ಲಿ ನಡೆದ ರಾಷ್ಟ್ರೀಯ



ಅಂತರ-ರಾಜ್ಯ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಮಹಿಳಾ ಓಟಗಾರ್ತಿ ಕಿರಣ್ ಪಹಲ್ 400 ಮೀಟರ್ ಓಟದಲ್ಲಿ 50.92 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ್ದು, ಒಲಿಂಪಿಕ್ಸ್‌ಗೆ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಅಲ್ಲದೆ ಅವರು ಈ ಚಾಂಪಿಯನ್‌ಶಿಪ್‌ನಲ್ಲಿ ದಾಖಲೆ ಬರೆದಿದ್ದು, ಇದೀಗ ಎರಡನೇ ಅತ್ಯುತ್ತಮ ರಾಷ್ಟ್ರೀಯ ಓಟವಾಗಿದೆ. ಹಿಮಾ ದಾಸ್ ಅವರ 50.79 ಸೆಕೆಂಡುಗಳ ನಂತರದ ಸ್ಥಾನವನ್ನು ಕಿರಣ್ ಪಹಲ್ ಪಡೆದಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಬೇಕಾಗಿರುವ ಸ್ವಯಂಚಾಲಿತ ಕಟ್ ಆಫ್ 50.95 ಸೆಕೆಂಡುಗಳು ಮತ್ತು ಸೆಮಿಫೈನಲ್‌ನಲ್ಲಿ 50.92 ಸೆಕೆಂಡುಗಳಲ್ಲಿ ರೋಚಕ ಸಮಯದಲ್ಲಿ ಅವರು ಅರ್ಹರಾಗಿದ್ದು, ಆ ಮೂಲಕ ಕಿರಣ್ ಪಹಲ್ ಒಲಿಂಪಿಕ್ಸ್‌ನಲ್ಲಿ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ.

ಪಾಸಿಟಿವ್ ವರದಿಗಳು ಕೋಮು ಸೌಹಾರ್ದತೆಗೆ ಪೂರಕ: ಕಮಿಷನರ್

ಪತ್ರಕರ್ತ ಮಿಥುನ್ ಕೊಡೆತ್ತೂರುಗೆ ಬ್ರಾಂಡ್ ಮಂಗಳೂರು ಪ್ರಶಸ್ತಿ ಪ್ರದಾನ

ಮಂಗಳೂರು: ಸೌಹಾರ್ದ ಮಂಗಳೂರು ಸ್ಥಾಪಿಸುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಕೊಡಮಾಡುವ ಬ್ರಾಂಡ್ ಮಂಗಳೂರು 2024ನೇ ಪ್ರಶಸ್ತಿಯನ್ನು ಹೊಸದಿಗಂತ ಪತ್ರಿಕೆಯ ವರದಿಗಾರ ಮಿಥುನ್ ಕೊಡೆತ್ತೂರು ಅವರಿಗೆ ಪ್ರದಾನ ಮಾಡಲಾಯಿತು. ನಗರದ ಪತ್ರಿಕಾ ಭವನದಲ್ಲಿ ಜರುಗಿದ ಸರಳ ಕಾರ್ಯಕ್ರಮದಲ್ಲಿ ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರು ಪ್ರಶಸ್ತಿ ಪ್ರದಾನಗೈದು ಮಾತಾಡಿದರು.

ಪ್ರತಿಯೊಂದು ಕಡೆಯಲ್ಲೂ ಪಾಸಿಟಿವ್ ಮತ್ತು ನೆಗೆಟಿವ್ ಅಭಿಪ್ರಾಯ ಇದ್ದೇ ಇರುತ್ತದೆ. ನಾವು ನೋಡುವ ರೀತಿ ಪಾಸಿಟಿವ್ ಆಗಿದ್ದರೆ ಎಲ್ಲವೂ ಪಾಸಿಟಿವ್ ಆಗಿಯೇ ಗೋಚರಿಸುತ್ತದೆ. ಮಂಗಳೂರು ಅನ್ನುವುದೇ ಒಂದು ದೊಡ್ಡ ಬ್ರಾಂಡ್. ಬೇರೆ ಕಡೆಗಿಂತ ಇಲ್ಲಿನ ಜನರು ಭಿನ್ನವಾಗಿದ್ದಾರೆ. ಇಲ್ಲಿನ ಜನರು ವಿಶ್ವದಲ್ಲಿ ಗುರುತಿಸಲ್ಪಡುತ್ತಿದ್ದಾರೆ ಎಂದರು.

ಬಳಿಕ ಮಾತಾಡಿದ ಮಿಥುನ್ ಕೊಡೆತ್ತೂರು ಅವರು, ಸಮಾಜದಲ್ಲಿ ಹಿಂದೂ ಮುಸ್ಲಿಂ ಕ್ರೈಸ್ತರು ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ದೇವಸ್ಥಾನಗಳಿಗೆ ಹೂವು ಕೊಂಡೊಯ್ಯುವಾಗ ಅದನ್ನು ಮುಸ್ಲಿಮರು ಅಥವಾ ಕ್ರೈಸ್ತರು ಬೆಳೆದಿದ್ದಾರೆಯೇ ಎಂದು ನೋಡುವುದಿಲ್ಲ. ಅದೇ ರೀತಿ ತಿನ್ನುವ ಅನ್ನ ಯಾರು ಬೆಳೆದಿದ್ದಾರೆ ಅನ್ನೋದು ತಿಳಿದಿರುವುದಿಲ್ಲ. ಎಲ್ಲವೂ ನಮ್ಮಲ್ಲಿನ ಚಿಂತನೆಯಲ್ಲಿ ಅಡಕವಾಗಿರುತ್ತದೆ ಎಂದರು.

ಮಂಗಳೂರು ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲೆಯ ಜನರು ಪರಿಶ್ರಮದಿಂದ ಮೇಲೆ ಬಂದವರು. ಇಲ್ಲಿನ ಜನರು ಎಲ್ಲ ಭಾಷೆಯನ್ನು ಮಾತಾಡುತ್ತಾರೆ ಎಂದರು. ಮಂಗಳೂರಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಭಾಗ್ಯ. ಇಲ್ಲಿನ ಪತ್ರಕರ್ತರು ಸಾಮಾಜಿಕ ವ್ಯವಸ್ಥೆಯಲ್ಲಿನ ಸರಿ ತಪ್ಪುಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. ಕೋಮು ಸೌಹಾರ್ದ ಸ್ಥಾಪಿಸುವ ನಿಟ್ಟಿನಲ್ಲಿ ಬ್ರಾಂಡ್ ಮಂಗಳೂರು ಪ್ರಶಸ್ತಿಯನ್ನು ಪತ್ರಕರ್ತರ ಸಂಘ ಕೊಡುತ್ತಿರುವುದು ಒಳ್ಳೆಯ ವಿಚಾರ ಎಂದರು.

ವೇದಿಕೆಯಲ್ಲಿ ಕ್ಯಾ. ಗಣೇಶ್ ಕಾರ್ಣಿಕ್, ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ ಆರ್, ಕ್ರೆಡೈ ಅಧ್ಯಕ್ಷ ವಿನೋದ್ ಪಿಂಟೋ, ಆಯುಷ್ ಇಲಾಖೆಯ ಮುಹಮ್ಮದ್ ಇಕ್ಬಾಲ್, ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ್ ಇಂದಾಜೆ ಸ್ವಾಗತಿಸಿದರು. ಕೋಶಾಧಿಕಾರಿ ಪುಷ್ಪರಾಜ್ ಬಿ ಎನ್ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಕುಂದೇಶ್ವರ ವಂದಿಸಿದರು.

ನಗರದ ಪತ್ರಿಕಾ ಭವನದಲ್ಲಿ ಜರುಗಿದ ಸರಳ ಕಾರ್ಯಕ್ರಮದಲ್ಲಿ ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರು ಪ್ರಶಸ್ತಿ ಪ್ರದಾನಗೈದು ಮಾತಾಡಿದರು.

> ಕಳೆದೆರಡು ದಶಕಗಳಿಂದ ಇಲ್ಲಿ ಕೋಮು ಗಲಭೆ, ವೈಷಮ್ಯ ಬೆಳೆದಿದೆ. ಇದನ್ನು ಮಟ್ಟಹಾಕಲು ಪತ್ರಕರ್ತರ ನೆರವು ಅಗತ್ಯ. ಪಾಸಿಟಿವ್ ವರದಿಗಳ ಅಗತ್ಯವಿದೆ. ಆ ಕೆಲಸವನ್ನು ಮಾಡುವ ಪತ್ರಕರ್ತರಿಗೆ ಪ್ರಶಸ್ತಿ ನೀಡುವುದು ಖುಷಿಯ ವಿಚಾರ.
>
> ಅನುಪಮ್ ಅಗರ್ವಾಲ್, ಪೊಲೀಸ್ ಕಮಿಷನರ್

ಇಲ್ಲಿ ಹುಟ್ಟಿರುವುದೆ ಭಾಗ್ಯ

ಮಂಗಳೂರಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಭಾಗ್ಯ. ಇಲ್ಲಿನ ಪತ್ರಕರ್ತರು ಸಾಮಾಜಿಕ ವ್ಯವಸ್ಥೆಯಲ್ಲಿನ ಸರಿ ತಪ್ಪುಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. ಕೋಮು ಸೌಹಾರ್ದ ಸ್ಥಾಪಿಸುವ ನಿಟ್ಟಿನಲ್ಲಿ ಬ್ರಾಂಡ್ ಮಂಗಳೂರು ಪ್ರಶಸ್ತಿಯನ್ನು ಪತ್ರಕರ್ತರ ಸಂಘ ಕೊಡುತ್ತಿರುವುದು ಒಳ್ಳೆಯ ವಿಚಾರ ಎಂದು ಮಂಗಳೂರು ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ತಿಳಿಸಿದರು.

ಬೆಂಗಳೂರು ವಿಶ್ವಕ್ಕೆ ಪಸರಿಸಿದ ಕೀರ್ತಿ ಕೆಂಪೇಗೌಡರದು

ಚಿಕ್ಕಮಗಳೂರು: ಅಭಿವೃದ್ಧಿಯ ಹರಿಕಾರ ನಾಡಪ್ರಭು ಕೆಂಪೇಗೌಡರು ಕರ್ನಾಟಕಕ್ಕೆ ಅದರಲ್ಲೂ ರಾಜಧಾನಿ ಬೆಂಗಳೂರಿಗೆ ನೀಡಿರುವ ಕೊಡುಗೆ ಅಪಾರ ಎಂದು ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮಣಗೌಡ ಹೇಳಿದರು.

ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ನಾಡಪ್ರಭು ಕೆಂಪಗೇಗೌಡ ಜಯಂತಿ ಅಂಗವಾಗಿ ಗುರುವಾರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಕರ್ನಾಟಕವನ್ನು ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಬಹಳ ದೂರದೃಷ್ಟಿ ಹೊಂದಿದ ವ್ಯಕ್ತಿ ಅವರು ನಾಡು ಕಟ್ಟಿದ್ದಾರೆ. ನಾಲ್ಕು ದಿಕ್ಕಿಗೂ ನಾಲ್ಕು ದ್ವಾರ ಮಾಡಿ, ವೃತ್ತಿಗೊಂದು ಮಾರು ಕಟ್ಟೆ ಸ್ಥಾಪಿಸಿ, ಕೆರೆಕಟ್ಟೆಗಳನ್ನು ಅಭಿವೃದ್ಧಿ ಮಾಡಿದ್ದರು ಎಂದರು.

ಕುಡಿಯುವ ನೀರು ಮತ್ತು ಕೃಷಿ ಅಗತ್ಯಗಳನ್ನು ಪೂರೈಸುವ ಸಲುವಾಗಿ ಸಾವಿರಾರು ಕೆರೆಗಳನ್ನು ಅಭಿವೃದ್ಧಿಪಡಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ರಾಷ್ಟ್ರದಲ್ಲಿ ಸಾಫ್ಟ್‌ವೇರ್ ರಫ್ತು ಬೆಂಗಳೂರಿನಿಂದಲೇ ಆಗುತ್ತದೆ. ಗ್ಲೋಬಲ್ ಐಟಿ ವಸ್ತುಗಳು ಬೆಂಗಳೂರಿನಿಂದ ರಫ್ತಾಗುತ್ತವೆ ಎಂದು ತಿಳಿಸಿದರು.

ಕೆಂಪೇಗೌಡರು ಅಂದು ದೂರದೃಷ್ಟಿಯಿಂದ ಕೈಗೊಂಡ ಯೋಜನೆಗಳು ಇಂದು ಫಲ ನೀಡುತ್ತಿವೆ ಎಂದ ಅವರು ಯುವಪೀಳಿಗೆ ವಿಶೇಷವಾಗಿ ಅವರ ಚಿಂತನೆ, ಯೋಚನೆ, ಸಾಧನೆಗಳನ್ನು ನೆನಪಿನಲ್ಲಿಟ್ಟು ಕೊಂಡು ತಾವು ಕಷ್ಟಪಟ್ಟು ಕೆಲಸ ಮಾಡಿದರೆ ಅಭಿವೃದ್ಧಿ ಕಟ್ಟಿಟ್ಟ ಬುತ್ತಿ ಎಂದು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಮಹಾಪ್ರಧಾನ ಕಾರ್ಯದರ್ಶಿ ಜಿ.ಎಸ್.ಚಂದ್ರಪ್ಪ ಮಾತನಾಡಿ ದೇಶ-ವಿದೇಶಗಳಲ್ಲಿ ನಾಡಿನ ಕೀರ್ತಿಗೆ ಮುಗಿಲೆತ್ತರಕ್ಕೆ ಕೊಂಡೊಯ್ದು ಅಪರೂಪ ವ್ಯಕ್ತಿ ಕೆಂ ಪೇಗೌಡರು. ಇದೀಗ ಬೆಂಗಳೂರು ರಾಜಧಾನಿಯನ್ನು ವಿಶ್ವದ ಹಲವಾರು ಮಂದಿ ನೆನಪಿಟ್ಟುಕೊಳ್ಳಲು ಅವರ ಕೊಡುಗೆ ಅಪಾರ ಎಂದರು.

ಬೆಂಗಳೂರು ನಗರದ ನಿರ್ಮಾತೃ ಕೆಂಪೇಗೌಡರ ಜೀವನ ಮತ್ತು ಸಾಧನೆ ಎಲ್ಲರಿಗೂ ಮಾದರಿ. ಇಂದು ಬೆಂಗಳೂರು ಬೃಹದಾಕಾರವಾಗಿ ಬೆಳೆದು ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ. ಅಲ್ಲದೇ ಆ ಮಹಾನೀಯರ ಹೆಸರನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಡಲಾಗಿರುವುದು ಹೆಮ್ಮೆಯ ಸಂಗತಿ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಮಾಜಿ ಅಧ್ಯಕ್ಷ ಹೆಚ್.ಎಸ್.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀದೇವಿ, ಮುಖಂಡ ಆನಂದೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿಗೆ ವಿದ್ಯುತ್ ತಂತಿ ತಗುಲಿ ಗಾಯ

ಕೊಪ್ಪ: ನುಗ್ಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೆಚ್.ಹೊಸೂರು ಎಂಬಲ್ಲಿ ಶಾಲೆ ಮುಗಿಸಿ ಮನೆಗೆ ನಡೆದುಕೊಂಡು ಹೋಗುತ್ತಿದ್ದ ವಿದ್ಯಾರ್ಥಿಯೊಬ್ಬನಿಗೆ ರಸ್ತೆಯ ಮೇಲೆ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯಿಂದ ವಿದ್ಯುತ್ ಹರಿದು ಗಾಯವಾಗಿದೆ. ಹೆಚ್.ಹೊಸೂರು ಗ್ರಾಮದ ಸಂತೋಷ್ ರವರ ಮಗನಾದ 2ನೆ ತರಗತಿಯ ವಿದ್ಯಾರ್ಥಿಯಾದ ಕ್ರಿಶ್ ಎಂಬ ಎರಡನೇ ತರಗತಿ ವಿದ್ಯಾರ್ಥಿಯೂ ಶಾಲೆ ಮುಗಿಸಿ ಸಂಜೆ ಸುಮಾರಿಗೆ ಮನೆಗೆ ತೆರಳುತ್ತಿದ್ದ ವೇಳೆಯಲ್ಲಿ ರಸ್ತೆ ವಿದ್ಯುತ್ ತಂತಿ ತಗುಲಿ ಶಾಕ್ ಹೊಡೆದಿದೆ. ವಿದ್ಯಾರ್ಥಿ ಕೊಪ್ಪದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಘಟನ ಸ್ಥಳಕ್ಕೆ ಮೆಸ್ಕಾಂ ಇಲಾಖೆಯ ಅಧಿಕಾರಿಗಳು, ನುಗ್ಗಿ ಗ್ರಾ.ಪಂ ಸದಸ್ಯರಾದ ಹೆಚ್.ಆರ್ ಜಗದೀಶ್, ಹರೀಶ್ ಭೇಟಿ ನೀಡಿದರು.

'ಪ್ರಕೃತಿಯೇ ಮಹಾ ಮಾತೆ'ಕೃತಿ ಬಿಡುಗಡೆ

ಮಂಗಳೂರು: ಡಾ.ಮಾಲತಿ ಶೆಟ್ಟಿ ಮಾಣೂರು ಸಾರಥ್ಯದ ಸಾಹಿತ್ಯ ಪರ ಅಮೃತ ಪ್ರಕಾಶ ಪತ್ರಿಕೆ ವತಿಯಿಂದ ನಡೆದ 41ನೇ ಸರಣಿ ಕೃತಿ ಬಿಡುಗಡೆ ಲೇಖಕ, ವಿಜಯಾ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರಾದ ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿಯವರ ಕೃತಿ ''ಪ್ರಕೃತಿಯೇ ಮಹಾಮಾತೆ'' ಎಂಬ ಪುಸ್ತಕ ಲೋಕಾರ್ಪಣೆಯು ಮಂಗಳೂರಿನ ಪತ್ರಿಕಾ ಭವನದಲ್ಲಿ ಜೂನ್ 27ರಂದು ನಡೆಯಿತು . ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮಕೃಷ್ಣ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ಮಂಗಳೂರು ಇದರ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈ ಯವರು ವಹಿಸಿದರು. ''ಪ್ರಕೃತಿಯೇ ಮಹಾಮಾತೆ'' ಕೃತಿಯನ್ನು ಎಸ್.ಡಿ.ಎಂ. ಪಿ.ಜಿ. ಮ್ಯಾನೇಜ್‌ಮೆಂಟ್ ಸೆಂಟರ್‌ನ ನಿವೃತ್ತ ಪ್ರಾಂಶುಪಾಲರು ಮತ್ತು ನಿರ್ದೇಶಕರಾದ ಡಾ. ದೇವರಾಜ್ ಕೆ. ಕೃತಿ ಬಿಡುಗಡೆಗೊಳಿಸಿದರು. ಮುಖ್ಯ ಅತಿಥಿಗಳಾಗಿ ಉದ್ಯಮಿ ಸಮಾಜಸೇವಕ ವಿಕಾಸ ಸೇವಾ ಪ್ರತಿಷ್ಠಾನ ಸಂಘದ ಅಧ್ಯಕ್ಷರಾದ ಸದಾನಂದ ಉಪಾಧ್ಯಾಯರೂ , ಮತ್ತು ಕೃತಿಯ ಲೇಖಕರಾದ ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ, ಅಮೃತಪ್ರಕಾಶ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ಡಾ. ಮಾಲತಿ ಶೆಟ್ಟಿ ಮಾಣೂರು ಉಪಸ್ಥಿತರಿದ್ದರು.

ಸ್ಕೇಟಿಂಗ್ ಸಾಧಕರಿಗೆ ಸನ್ಮಾನ 29ಕ್ಕೆ

ಮಂಗಳೂರು: ಹೈ ಫ್ಲೈಯರ್ಸ್ ಸ್ಕೇಟಿಂಗ್ ಕ್ಲಬ್ ಇದರ ವಾರ್ಷಿಕ ದಿನಾಚರಣೆ ಹಾಗೂ ರೋಲರ್ ಸ್ಕೇಟಿಂಗ್ ಫೆಡರೇಶನ್ ಆಫ್ ಇಂಡಿಯಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜೂ.29ರಂದು ಸಾಯಂಕಾಲ 7ಕ್ಕೆ ನಗರದ ಬೆಂದೂರ್‌ನ ಸೆಬಾಸ್ಟಿಯನ್ ಹಾಲ್‌ನಲ್ಲಿ ನಡೆಯಲಿದೆ. ಮಂಗಳೂರು ಮಹಾ ನಗರ ಪಾಲಿಕೆಯ ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಡಾ ಆಯುಕ್ತೆ ನೂರ್ ಜಹಾನ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ರೆಡ್ ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತರಾಮ ಶೆಟ್ಟಿ, ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಲಿಲ್ಲಿ ಪಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವೆಟ್‌ವೆಲ್‌ಗೆ ಅಪಾಯ ಎಚ್ಚರಿಕೆ ವಹಿಸಿ: ಶಾಸಕ

ಮಂಗಳೂರು: ಕರ್ನಾಟಕ ಅರ್ಬನ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಆ್ಯಂಡ್ ಫೈನಾನ್ಸ್ ಕಾರ್ಪೊರೇಶನ್(ಕೆಯುಐಡಿಎಫ್‌ಸಿ) ಮೂಲಕ ಸುಮಾರು 10 ಕೋಟಿ ರೂಪಾಯಿ ವೆಚ್ಚದಲ್ಲಿ ತಿರುವೈಲು ವಾರ್ಡ್‌ನಲ್ಲಿ ನಿರ್ಮಿಸುತ್ತಿರುವ ವೆಟ್‌ವೆಲ್ ಪ್ರಾಜೆಕ್ಟ್ ಕೆತ್ತಿಕಲ್ ಗುಡ್ಡದ ಮಣ್ಣುಗಾರಿಕೆಯಿಂದ ಅಪಾಯ ಎದುರಾಗಿದ್ದು, ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಅವರು ಜೂ.26ರಂದು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ವೆಟ್‌ವೆಲ್ ಗೆ ಅಪಾಯವಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕೆಂದು ಸೂಚನೆ ನೀಡಿದರು. ಶಾಸಕರೊಂದಿಗೆ ಕೆಯುಐಡಿಎಫ್‌ಸಿ ಕಾರ್ಯಕಾರಿ ಇಂಜಿನಿಯರ್ ಸುರೇಶ್, ಎಡಬ್ಲ್ಯು ವೆಂಕಟರಮಣ, ಕನ್ಸಲ್ಟೆಂಟ್ ಜಯಪ್ರಕಾಶ್, ಯೋಜನೆಯ ಗುತ್ತಿಗೆದಾರ ಸಂಸ್ಥೆಯ ಪ್ರಾಜೆಕ್ಟ್ ಮ್ಯಾನೇಜರ್ ಸಂತೋಷ್ ಮತ್ತಿತರರು ಇದ್ದರು.

ವಿದ್ಯುತ್ ತಗುಲಿ ಮಾರಣಾಂತಿಕ ಅಪಘಾತ

ಮಂಗಳೂರು: ಮೆಸ್ಕಾಂ ಮಂಗಳೂರು ವಿಭಾಗ ವ್ಯಾಪ್ತಿಯ ರೊಸಾರಿಯೋ ಶಾಲೆ ಹಿಂಭಾಗ ನಿರೇಶ್ವಾಲ್ಯ ಪರಿವರ್ತಕದಿಂದ ಹೊರಡುವ ದಾರಿದೀಪದ ಲೈನ್ ಮೇಲೆ, ಬುಧವಾರ ರಾತ್ರಿ ಸುರಿದ ಜೋರಾದ ಗಾಳಿ- ಮಳೆಯಿಂದಾಗಿ ಹತ್ತಿರದಲ್ಲಿದ್ದ ಮರದ ಕೊಂಬೆ ಬಿದ್ದು, ತಂತಿ ತುಂಡಾಗಿರುತ್ತದೆ. ತುಂಡಾದ ತಂತಿಯಿಂದ ದೇವರಾಜ್ ಮತ್ತು ರಾಜು ಎಂಬವರುಗಳಿಗೆ ವಿದ್ಯುತ್ ತಗುಲಿ ಮಾರಾಣಾಂತಿಕ ಅಪಘಾತವಾಗಿರುತ್ತದೆ. ಮಳೆಗಾಲದಲ್ಲಿ ಎದುರಾಗುವ ಸಂಭಾವ್ಯ ಅವಘಡಗಳನ್ನು ತಪ್ಪಿಸಲು ಮೆಸ್ಕಾಂ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಂಡಿದಾಗ್ಯೂ ಪ್ರಾಕೃತಿಕ ವಿಕೋಪದಿಂದ ಈ ಅವಘಡ ನಡೆದಿದೆ. ಘಟಿಸಬಾರದ ಘಟನೆ ನಡೆದಿರುವುದಕ್ಕೆ ಮೆಸ್ಕಾಂ ತೀವ್ರ ವಿಷಾದ ವ್ಯಕ್ತಪಡಿಸುತ್ತದೆ.

ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಖುದ್ದಾಗಿ ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತಾರೆ ಮತ್ತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಘಟನೆಯ ಬಗ್ಗೆ ಚರ್ಚಿಸಿ ಮೃತರ ಅವಲಂಬಿತರಿಗೆ ಸಾಂತ್ವನಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪ್ರಕೃತಿ ವಿಕೋಪವನ್ನು ತಡೆಯಲು ಮೆಸ್ಕಾಂನಿಂದ ಎಲ್ಲಾ ಕ್ರಮಕೈಗೊಳ್ಳಲಾಗಿರುತ್ತದೆ. ಮೆಸ್ಕಾಂನ ಎಲ್ಲಾ ಅಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಗೆ ಅಪಾಯಕಾರಿ ಸ್ಥಳಗಳನ್ನು ತೀವ್ರಗತಿಯಲ್ಲಿ ಗುರುತಿಸಿ, ಮುಂಜಾಗ್ರತಾಕ್ರಮ ವಹಿಸಲು ಈಗಾಗಲೇ ಸೂಚಿಸಲಾಗಿದೆ. ಅಪಾಯಕಾರಿ ವಿದ್ಯುತ್ ಮಾರ್ಗಗಳು ಕಂಡುಬಂದಲ್ಲಿ ತಕ್ಷಣವೇ ಹತ್ತಿರದ ಮೆಸ್ಕಾಂ ಕಚೇರಿಗೆ ಅಥವಾ ಸಹಾಯವಾಣಿ ಸಂಖ್ಯೆ 1912 ಗೆ ಮಾಹಿತಿ ನೀಡುವಂತೆ ಮೆಸ್ಕಾಂ ಪಕಟ್ರಣೆಯಲ್ಲಿ ಕೋರಿದೆ.

> ಗಾಳಿ ಮಳೆಯಿಂದ ಉಂಟಾಗುವ ಸಂಭಾವ್ಯ ಅವಘಡಗಳನ್ನು ತಪ್ಪಿಸಲು ಸಾಕಷ್ಟು ಮಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ ಪ್ರಾಕೃತಿಕ ವಿಕೋಪದಿಂದ ಈ ದುರ್ಘಟನೆ ನಡೆದಿರುವುದು ದುಃಖಕರ ವಿಷಯ. ಮುಂದಿನ ದಿನಗಳಲ್ಲಿ ಮೆಸ್ಕಾಂನಿಂದ ಇನ್ನೂ ಪರಿಣಾಮಕಾರಿಯಾಗಿ, ವಿದ್ಯುತ್ ಲೈನ್‌ಗಳನ್ನು, ಸ್ಥಳಗಳನ್ನು ಪರಿಶೀಲಿಸಿ ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಮೆಸ್ಕಾಂ ವ್ಯಾಪ್ತಿಯ ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಪುನಃ ಸೂಚನೆ ಕೊಟ್ಟಿರುತ್ತೇನೆ. ಸಾರ್ವಜನಿಕರು ತುಂಡಾಗಿ ಬಿದ್ದಿರುವ ಮೆಸ್ಕಾಂನ ವಿದ್ಯುತ್ ತಂತಿ ಮತ್ತಿತರ ಉಪಕರಣಗಳನ್ನು ಮುಟ್ಟಬಾರದು. ಇಂತಹ ಸನ್ನಿವೇಶಗಳು ಕಂಡುಬಂದಲ್ಲಿ ಮೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಅಥವಾ ಹತ್ತಿರದ ಮೆಸ್ಕಾಂ ಕಚೇರಿಗೆ ಮಾಹಿತಿ ನೀಡುವಂತೆ ಮನವಿ ಮಾಡುತ್ತೇನೆ.
>
> ಡಿ.ಪದ್ಮಾವತಿ, ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು

ಕಲಾತ್ಮಕ ಚಟುವಟಿಕೆಯಿಂದ ಯಶಸ್ಸು ಸಾಧ್ಯ

ಮಂಗಳೂರು: ಜಗತ್ತಿನ ಶ್ರೀಮಂತ ಕಲೆ ಒಂದು ಇದ್ದರೆ ಅದು ಯಕ್ಷಗಾನ ಮಾತ್ರ. ಕುಣಿತ, ಸಂಗೀತ ,ಮಾತುಗಾರಿಕೆ, ಬಣ್ಣಗಾರಿಕೆ, ಅಭಿನಯ ಹೀಗೆ ಎಲ್ಲವೂ ಒಟ್ಟಿಗೆ ಏಕೈಕ ಕಲೆ ಅದು. ಯಕ್ಷಗಾನದ ಮೂಲಕ ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆ ಜಗತ್ತಿನುದ್ದಕ್ಕೂ ಪಸರಿಸಿದೆ. ವಿದ್ಯಾರ್ಥಿಗಳು, ಯುವ ಸಮುದಾಯ ಶೈಕ್ಷಣಿಕ ಚಟುವಟಿಕೆಯೊಂದಿಗೆ ಯಕ್ಷಗಾನ ಕಲೆ ಸೇರಿದಂತೆ ಯಾವುದಾದರೂ ಕಲಾತ್ಮಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಮುನ್ನಡೆದರೆ ಯಶಸ್ಸು ನಮ್ಮನ್ನು ಅರಸಿಕೊಂಡು ಬರುತ್ತದೆ ಎಂದು ಖ್ಯಾತ ಯಕ್ಷಗಾನ ಭಾಗವತರಾದ ಪಟ್ಲ ಸತೀಶ್ ಶೆಟ್ಟಿ ಅವರು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಹಾಗೂ 2023-24ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತು ವತಿಯಿಂದ ಮೂರು ದಿನಗಳ ಕಾಲ ನಡೆಯಲಿರುವ 'ಸಂಭ್ರಮ-2024' ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ಯಾವುದೇ ಸಾಧನೆಯ ಹಿಂದೆ ಹಿರಿಯರ ಶ್ರಮವಿರುತ್ತದೆ. ಅದನ್ನು ನಾವು ಮರೆಯದೆ ನಾವು ದುಡಿದ ಸಂಪತ್ತಿನಲ್ಲಿ ಒಂದು ಭಾಗ ಸಮಾಜಕ್ಕೆ ವಿನಿಯೋಗಿಸಿದರೆ ಅದೊಂದು ಪುಣ್ಯದ ಕಾರ್ಯ.

ದೇವರ ಕೃಪೆ, ಹಿರಿಯರ ಆಶೀರ್ವಾದದಿಂದ ಯಕ್ಷಗಾನ ನನಗೆ ಸಾವಿರಾರು ಅಭಿಮಾನಿ ಬಂಧುಗಳನ್ನು ಕೊಟ್ಟಿದೆ. ಕಳೆದ ವರ್ಷ 4000 ವಿದ್ಯಾರ್ಥಿಗಳಿಗೆ ಪಟ್ಲ ಫೌಂಡೇಶನ್ ಮೂಲ ಉಚಿತ ಯಕ್ಷ ಶಿಕ್ಷಣ ನೀಡಿದ್ದೆವು. ಈ ವರ್ಷ ಕಾಸರಗೋಡು, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆ ಸೇರಿಂದತೆ ಸುಮಾರು 10, 000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಯಕ್ಷ ಶಿಕ್ಷಣ ಆರಂಭಿಸಿದ್ದೇವೆ ಎಂದರು. ಇದೇ ಸಂದರ್ಭದಲ್ಲಿ 2023-24ನೇ ಸಾಲಿನ ದಕ್ಷಿಣಪೂರ್ವವಲಯ ಯುವಜನೋತ್ಸವ ಮತ್ತು ರಾಷ್ಟ್ರಮಟ್ಟದ ಯುವಜನೋತ್ಸವ ಸ್ಪರ್ಧೆಯಲ್ಲಿ ಭಾಗವಹಿಸಿ ಬಹು ಮಾನ ಪಡೆದು ಮಂಗಳೂರು ವಿಶ್ವವಿದ್ಯಾನಿ ಲಯಕ್ಕೆ ಗೌರವ ತಂದು ಕೊಟ್ಟ ಆಳ್ವಾಸ್ ಕಾಲೇಜು ತಂಡ ಹಾಗೂ ಗೋವಿಂದದಾಸ ಕಾಲೇಜು ತಂಡ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ನ ವಿದ್ಯಾರ್ಥಿ ಗಳನ್ನು 'ಪ್ರತಿಭಾ ಪುರಸ್ಕಾರ-2024'ನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಂಗಳೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ, ಹಣಕಾಸು ಅಧಿಕಾರಿ ಪ್ರೊ.ಸಂಗಪ್ಪ ಹಾಗೂ ವಿದ್ಯಾರ್ಥಿ ಪರಿಷತ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೀನುಗಾರರ ರಕ್ಷಣೆಗೆ ಸರಕಾರ ಬದ್ಧ: ತಮ್ಮಯ್ಯ

ಚಿಕ್ಕಮಗಳೂರು: ಮೀನುಗಾರಿಕೆ ಮತ್ತು ಮೀನು ಕೃಷಿಕರಿಗೆ ಅನುಕೂಲವಾಗುವಂತೆ ಉತ್ತಮ ಗುಣಮಟ್ಟದ ಮೀನುಮರಿಗಳನ್ನು ವಿತರಣೆ ಮಾಡಲಾಗಿದೆ ಎಂದು ಶಾಸಕ ಹೆಚ್.ಡಿ ತಮ್ಮಯ್ಯ ತಿಳಿಸಿದರು.

ಅವರು ಇತ್ತೀಚೆಗೆ ಮೀನುಗಾರಿಕೆ ಇಲಾಖೆಯಲ್ಲಿ ಏರ್ಪಡಿಸಿದ್ದ 2023-24ನೇ ಸಾಲಿಗೆ ವೃತ್ತಿಪರ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ ಹಾಗೂ ಹರಿಗೋಲು ವಿತರಿಸಿ ಮಾತನಾಡಿದರು. ತಾಲೂಕು ಅಗಸರ ಕಟ್ಟೆ ಮೀನುಮರಿ ಪಾಲನಾ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕರು ಮೀನುಗಾರರ ವಿವಿಧ ಬೇಡಿಕೆಗಳನ್ನು ಹಂತ-ಹಂತವಾಗಿ ಪೂರೈಕೆ ಮಾಡಲು ಸರಕಾರ ಬದ್ಧವಾಗಿರುವುದಾಗಿ ಭರವಸೆ ನೀಡಿದರು. ಚಿಕ್ಕಮಗಳೂರು ತಾಲೂಕಿನಲ್ಲಿ ಸುಸಜ್ಜಿತವಾದ ಮೀನು ಮಾರುಕಟ್ಟೆ ನಿರ್ಮಾಣ ಮಾಡುವಂತೆ ಕೋರಿದ ಮೀನುಗಾರರೊಂದಿಗೆ ಚರ್ಚಿಸಿ ಇದಕ್ಕೆ ಬೇಕಾದ ಅಗತ್ಯ ಅನುದಾನ ಬಿಡುಗಡೆ ಮಾಡುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

ಇಲಾಖೆ ವ್ಯಾಪ್ತಿಯ ಕೆರೆಗಳಲ್ಲಿ ಮೀನುಗಾರಿಕೆಗೆ ಸೂಕ್ತ ನಿರ್ವಹಣೆ ಮಾಡುವ ಕುರಿತು ಮತ್ತು ಮೀನುಗಾರರು ಮೀನುಗಾರಿಕೆ ಮಾಡುವಾಗ ಕಡ್ಡಾಯವಾಗಿ ಲೈಫ್ ಜಾಕೆಟ್ ಧರಿಸುವ ಮೂಲಕ ಜೀವ ರಕ್ಷಣೆ ಮಾಡಿಕೊಳ್ಳುವಂತೆ ವಿನಂತಿಸಿದರು.

ಮೀನುಗಾರರಿಗೆ ಇಲಾಖೆ ವತಿಯಿಂದ ಲೈಫ್ ಜಾಕೆಟ್ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು ಕೂಡಲೇ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದುಹೇಳಿದರು. ಈ ಸಂದರ್ಭದಲ್ಲಿ ಮೀನುಗಾರಿಕಾ ಸಹಾಯಕ ನಿರ್ದೇಶಕರಾದ ಸಿ.ಆರ್.ಕವನ ಮತ್ತಿತರರು ಉಪಸ್ಥಿತರಿದ್ದರು.

ವೃತ್ತಿಪರ ಮೀನುಗಾರರಿಗೆ ಮೀನು ಗಾರಿಕೆ ಸಲಕರಣೆ ಕಿಟ್ ಹಾಗೂ ಹರಿಗೋಲು ವಿತರಿಸಲಾಯಿತು.

ಉಡುಪಿ ಭಾರಿ ಮಳೆ, ಹಲವೆಡೆ ಹಾನಿ

ಎರಡು ದಿನಗಳಿಂದ ಜಿಲ್ಲೆಯಾದ್ಯಂತ ಎಡೆಬಿಡದೇ ಮಳೆ

ಉಡುಪಿ: ಕಳೆದ ಎರಡು ದಿನಗಳಿಂದ ಜಿಲ್ಲೆಯಾದ್ಯಂತ ಎಡೆಬಿಡದೇ ಮಳೆ ಸುರಿಯುತ್ತಿದೆ. ಗಾಳಿ ಮಳೆಗೆ ಅಪಾರ ಪ್ರಮಾಣದಲ್ಲಿ ನಷ್ಟವುಂಟಾಗಿದೆ. ಜಿಲ್ಲೆಯಲ್ಲಿನ ನದಿಗಳು ಉಕ್ಕಿ ಹರಿಯುತ್ತಿದ್ದು, ಕೆಲವೆಡೆ ಪ್ರವಾಹದ ಭೀತಿ ಎದುರಾಗಿದೆ. ನದಿ, ಹೊಳೆ ಬದಿಯ ತಗ್ಗು ಪ್ರದೇಶ, ಗದ್ದೆ, ತೋಟಗಳು ಜಲಾವೃತಗೊಂಡಿವೆ. ಜಿಲ್ಲೆಯಲ್ಲಿ ಎರಡು ದಿನದಲ್ಲಿ 25ಕ್ಕೂ ಹೆಚ್ಚು ಮನೆಗಳು ಹಾನಿಗೊಂಡಿದೆ. ಹಲವೆಡೆ ಮರಗಳು ಉರುಳಿ ಬಿದ್ದಿದೆ. ವಿದ್ಯುತ್ ಕಂಬಗಳು ನೆಲಕ್ಕುರುಳಿದೆ.

ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದ ಭಾರತಿ ಎಂಬವರ ಮನೆಗೆ ಗಾಳಿ ಮಳೆಯಿಂದ ಹಾನಿಯಾಗಿದ್ದು ಅಂದಾಜು 10 ಸಾವಿರ ರೂ., ಕಾವ್ರಾಡಿ ಗ್ರಾಮದ ಶಾರದ ಅವರ ಮನೆ ಹಾನಿಗೀಡಾಗಿದ್ದು 60 ಸಾವಿರ ರೂ. ನಷ್ಟ ಸಂಭವಿಸಿದೆ.

ಉಡುಪಿ ತಾಲೂಕು ಪೆರ್ಡೂರು ಗ್ರಾಮದ ಪವಿತ್ರ ರಾಘವೇಂದ್ರ, ಅವರ ಮನೆಗೆ 40 ಸಾವಿರ ರೂ., ಮೀನಾಕ್ಷಿ ಗೋಪಾಲ ಅವರ ಮನೆಗೆ 10 ಸಾವಿರ ರೂ., ಗಣಪ ಹರಿಜನ ಅವರ ಮನೆಗೆ 10 ಸಾವಿರ ರೂ., ಪುತ್ತೂರು ಗ್ರಾಮದ ಲೋಕು ಪೂಜಾರಿ ಮನೆ ಮೇಲೆ ಮರ ಬಿದ್ದು 25 ಸಾವಿರ ರೂ. ನಷ್ಟವುಂಟಾಗಿದೆ.

ಕಾಪು ತಾಲೂಕು ಮೂಳೂರು ಗ್ರಾಮದ ಉದಯ ಪೂಜಾರಿ ಅವರ ಮನೆ ಮೇಲೆ ಮರ ಬಿದ್ದು 40 ಸಾವಿರ ರೂ., ಇನ್ನಂಜೆ ಗ್ರಾಮದ ಅರುಣ್ ಕುಮಾರ್ ಮನೆಯ ಮೇಲೆ ಮರ ಬಿದ್ದು 45 ಸಾವಿರ ರೂ., ಕಳತ್ತೂರು ಗ್ರಾಮದ ಶಾಲಿನಿ ಮುಖಾರ್ತಿ ಅವರ ಮನೆಗೆ 40 ಸಾವಿರ ರೂ. ನಷ್ಟ ಸಂಭವಿಸಿದೆ.

ಕುಂದಾಪುರ ತಾಲೂಕಿನ ಗುಜ್ಜಾಡಿ ಗ್ರಾಮದ ವಾಸುದೇವ ಶೇರೆಗಾರ ಅವರ ಜಾನುವಾರು ಕೊಟ್ಟಿ ಛಾವಣಿ ಕುಸಿದು 15 ಸಾವಿರ ರೂ., ಬ್ರಹ್ಮಾವರ ತಾಲೂಕಿನ ಹಂದಾಡಿ ಗ್ರಾಮದ ರಘುನಾಥ ನಾಯಕ್ ಅವರ ಕೊಟ್ಟಿಗೆ ಕುಸಿದು 15 ಸಾವಿರ ರೂ. ಮತ್ತು ಬೈಂದೂರು ತಾಲೂಕಿನ ಕಿರಿಮಂಜೇಶ್ವರ ಗ್ರಾಮದ ನಾರಾಯಣ ಹೆಬ್ಬಾರ್ ಅವರ ಕೊಟ್ಟಿಗೆ ಕುಸಿದು 50 ಸಾವಿರ ರೂ. ನಷ್ಟವುಂಟಾಗಿದೆ. ಬುಧವಾರ ರಾತ್ರಿ ಜಿಲ್ಲೆಯಲ್ಲಿ ಸರಾಸರಿ 119.50 ಮಿ. ಮೀ. ಮಳೆ ದಾಖಲಾಗಿದೆ. ಕಾರ್ಕಳ 154. 30, ಕುಂದಾಪುರ 83. 40, ಉಡುಪಿ 142. 90, ಬೈಂದೂರು 81. 40, ಬ್ರಹ್ಮಾವರ 159. 20, ಕಾಪು 173. 80, ಹೆಬ್ರಿ 105. 20 ಮಿ.ಮೀ. ಮಳೆಯಾಗಿದೆ. ಕರಾವಳಿಯಲ್ಲಿ ಇನ್ನೆರಡು ದಿನ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅದರಂತೆ ಉಡುಪಿ ಜಿಲ್ಲಾಡಳಿತ ಆರೆಂಜ್ ಅಲರ್ಟ್ ಘೋಷಿಸಿದೆ.

ರಾಹುಲ್‌ಗಾಂಧಿ ಪ್ರತಿಪಕ್ಷ ನಾಯಕ: ಸ್ವಾಗತಾರ್ಹ

ಚಿಕ್ಕಮಗಳೂರು: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಭಾರತ್ ಜೋಡೋ ಯಾತ್ರೆ ಕೈಗೊಂಡ ರಾಹುಲ್‌ಗಾಂಧಿ ಇತಿಹಾಸ ಪುಟ ಸೇರಿದ್ದಾರೆ ಎಂದು ಕೆಪಿಸಿಸಿ ಸಂಯೋಜಕ ಹಿರೇ ಮಗಳೂರು ರಾಮಚಂದ್ರ ಹೇಳಿದ್ದಾರೆ.

ಈ ಕುರಿತು ಹೇಳಿಕೆಯಲ್ಲಿ ತಿಳಿಸಿರುವ ಅವರು ಲೋಕಸಭೆಯ ವಿರೋಧಪಕ್ಷದ ನಾಯಕರಾಗಿ ರಾ ಹುಲ್‌ಗಾಂಧಿ ಅವರನ್ನು ಆಯ್ಕೆ ಮಾಡಿರುವುದಕ್ಕೆ ಸ್ವಾಗತಾರ್ಹ ವ್ಯಕ್ತಪಡಿಸಿದ್ದಾರೆ. ಬಿಜೆಪಿ ದುರಾಡಳಿತದಿಂದ ದೇಶದ ಜನ ತತ್ತರಿಸಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬದು ಕು ದುಸ್ತರವಾಗಿದೆ. ಹೀಗಾಗಿ ರಾಹುಲ್ ಗಾಂಧಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಗೊಳಿಸಿ ದೇಶದ ಜನಸಾಮಾನ್ಯರ, ರೈತರ, ಕೂಲಿ ಕಾರ್ಮಿಕರ ಧ್ವನಿಯಾಗಿ ಕೆಲಸ ಮಾಡಲಿದ್ದಾರೆ ಎಂದಿದ್ದಾರೆ. ರಾಜ್ಯದಲ್ಲಿ ಭಾರತ್ ಜೋಡೋ ಯಾತ್ರೆಯಲ್ಲಿ ಸಂಚರಿಸಿದ ವೇಳೆಯಲ್ಲಿ ತಾವು ಕೂಡಾ ರಾಹುಲ್ ಗಾಂಧಿ ಅವರಿಗೆ ಬೆಂಬಲವಾಗಿ ತೆರಳಿ ಬಿಜೆಪಿ ದುರಾಡಳಿತದ ವಿರುದ್ಧ ಧ್ವನಿ ಎತ್ತಲಾಗಿತ್ತು. ಇದೀಗ ಲೋಕ ಸಭಾದಲ್ಲಿ ವಿರೋಧ ಸ್ಥಾನ ಲಭಿಸಿರುವುದು ಪಕ್ಷಕ್ಕೆ ಇನ್ನಷ್ಟು ಬಲಬಂದಂತಾಗಿದೆ ಎಂದಿದ್ದಾರೆ.

ವಿ+
ಸೋಮವಾರ

{ಆರ್.ಅಶೋಕ್ } ಪ್ರತಿಪಕ್ಷ ನಾಯಕ

ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಹೆಚ್ಚಾಗುತ್ತಿವೆ. ಎಲ್ಲರ ಆರೋಗ್ಯ ಕಾಪಾಡುವ ಅಧಿಕಾರಿಗಳಿಗೆ ಡೆಂಘೀ ಬಂದಿದೆ ಎಂದರೆ ಸರಕಾರದಲ್ಲಿ ಎಷ್ಟರಮಟ್ಟಿಗೆ ಇವರು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗಲಿದೆ. ಮತ್ತೊಂದೆಡೆ, ಕಲುಷಿತ ನೀರು ಕುಡಿದು ಜನರು ಸಾವನ್ನಪ್ಪಿದ್ದಾರೆ.

ಮನೆಗಳಿಗೆ ಅಪಾಯ: ನಿವಾಸಿಗಳ ಸ್ಥಳಾಂತರ

ಮಂಗಳೂರು: ನಗರದ ಕಾವೂರು ಸೂಜಿಕಲ್ ಗುಡ್ಡೆ ಎಂಬಲ್ಲಿ ಭೂಕುಸಿತದಿಂದ ಕೆಲವು ಮನೆಗಳು ಅಪಾಯಕಾರಿ ಸ್ಥಿತಿಯಲ್ಲಿದ್ದು, ತಕ್ಷಣವೇ ಅಲ್ಲಿನ ನಿವಾಸಿಗಳ ಸ್ಥಳಾಂತರಕ್ಕೆ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಸೂಚಿಸಿದ್ದಾರೆ.

ಅವರು ಗುರುವಾರ ಮಂಗಳೂರು ತಾಲೂಕಿನ ವಿವಿಧ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಕಾವೂರು ಸೂಜಿಕಲ್ ಗುಡ್ಡೆಯಲ್ಲಿ ಖಾಸಗಿ ಮನೆ ಕಟ್ಟಡ ನಿರ್ಮಿಸಲು ಅಗೆಯಲಾದ ಮಣ್ಣಿನಿಂದ ಎತ್ತರದ ಪ್ರದೇಶದಲ್ಲಿರುವ ಮನೆಗಳು ಕೆಳಗೆ ಬೀಳುವ ಸ್ಥಿತಿಯಲ್ಲಿವೆ. ಈ ನಿಟ್ಟಿನಲ್ಲಿ ಇಲ್ಲಿನ ನಿವಾಸಿಗಳನ್ನು ಬೇರೆಡೆ ಬಾಡಿಗೆ ಮನೆಗಳಿಗೆ ಸ್ಥಳಾಂತರಿಸಲು ಅವರು ಮಂಗಳೂರು ಮಹಾನಗರಪಾಲಿಕೆ ಆಯುಕ್ತರಿಗೆ ನಿರ್ದೇಶಿಸಿದರು. ಅಲ್ಲದೇ, ಘಟನೆಗೆ ಕಾರಣರಾದ ಖಾಸಗಿ ಮನೆಯ ನಿರ್ಮಾಣ ಕಾಮಗಾರಿಯನ್ನು ನಿಲ್ಲಿಸಲು ಸೂಚಿಸಿದರು. ಬಳಿಕ ಕೆಂಜಾರು ಶ್ರೀದೇವಿ ಕಾಲೇಜು ಆವರಣದಲ್ಲಿ ಉಂಟಾದ ಭೂಕುಸಿತ, ಮರವೂರು ಅಂತೋನಿಕಟ್ಟೆ ಎಂಬಲ್ಲಿ ಕಾಂಕ್ರೀಟ್ ತಡೆಗೋಡೆ ಕುಸಿದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಸುರತ್ಕಲ್ ಬಾಳ ಸಮೀಪ ಐ.ಎಸ್.ಪಿ.ಆರ್.ಎಲ್. ಗೆ ಸೇರಿದ ಪೈಪ್ ಲೈನ್ ಹಾದುಹೋದ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ತುರ್ತು ಕ್ರಮ ಕೈಗೊಳ್ಳಲು ಐ.ಎಸ್.ಪಿ.ಆರ್.ಎಲ್. ಅಧಿಕಾರಿಗಳಿಗೆ ಸೂಚಿಸಿದರು.

ಸಮುದಾಯ ಭವನ ಪೂರಕ

ಮೂಡಿಗೆರೆ: ಸರಕಾರದ ಹಣದಿಂದ ನಿರ್ಮಾಣ ಮಾಡುವ ಸಮುದಾಯ ಭವನವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದಾಗ ಮಾತ್ರ ಅವುಗಳು ಸದ್ಬಳಕೆಯಾಗಲು ಸಾಧ್ಯ ಎಂದು ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ಹೇಳಿದರು. ಅವರು ಗುರುವಾರ ತಾಲೂಕಿನ ಘಟ್ಟದಹಳ್ಳಿಯಲ್ಲಿ ಅವರ ಎಂಎಲ್‌ಸಿ ಅನುದಾನದಲ್ಲಿ ನಿರ್ಮಾಣಗೊಂಡಿರುವ ನೂತನ ಸಮುದಾಯ ಭವನ ಕಟ್ಟಡ ಉದ್ಘಾಟಿಸಿ ಮಾತನಾಡಿದರು. ಪ್ರತಿ ಗ್ರಾಮಗಳಲ್ಲಿ ಒಂದು ಸಮುದಾಯ ಭವನ ಇರಲೇಕು. ಸಮುದಾಯ ಭವನಗಳಿಂದ ಗ್ರಾಮಗಳಲ್ಲಿ ಮದುವೆ ಸೇರಿದಂತೆ ವಿವಿಧ ರೀತಿಯ ಶುಭ ಸಮಾರಂಭಗಳು ನಡೆಸಲು ಅನುಕೂಲವಾಗುತ್ತದೆ. ಹಾಗಾಗಿ ಸಮುದಾಯ ಭವನಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಸದ್ಬಳಕೆ ಮಾಡಿಕೊಳ್ಳಬೇಕಂದು ಮನವಿ ಮಾಡಿದರು. ಸ್ಥಳೀಯ ಮೆಸ್ಕಾಂ ಲೈನ್‌ಮ್ಯಾನ್, ಅಂಗನವಾಡಿ ಕಾರ್ಯಕರ್ತರು, ಶ್ರೀಶೂಕಿಯರು, ಶಾಲೆ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಮಾಕೋನಹಳ್ಳಿ ಗ್ರಾ.ಪಂ. ಅಧ್ಯಕ್ಷ ಪ್ರಕಾಶ್, ಉಪಧ್ಯಕ್ಷೆ ಮಂಜುಳ, ಕೃಷ್ಣೇಗೌಡ, ಅಣ್ಣೇಗೌಡ, ಎಂ.ಎನ್.ಅಶ್ವತ್, ಕೆ.ಮಂಚೇಗೌಡ, ಕೆ.ಪಿ.ರುದ್ರೇಶ್ ಮತ್ತಿತರರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ಚಿಕ್ಕಮಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಗ್ರಾಮ ಪಂ ಚಾಯಿತಿ ಸ್ವಚ್ಛವಾಹಿನಿ ಆಟೋ ಡ್ರೈವರ್ಸ್ ಮತ್ತು ಸಹಾಯಕಿಯರ ಜಿಲ್ಲಾ ಸಂಘದ ಮಹಿಳೆಯರು ನಗರದ ಜಿಲ್ಲಾ ಪಂಚಾಯಿತಿ ದ್ವಾರದ ಎದುರು ಪ್ರತಿಭಟನೆ ನಡೆಸಿದರು.

ಬಳಿಕ ಮಾತನಾಡಿದ ಸಂಘದ ರಾಜ್ಯ ಸಂಚಾಲಕ ಡಿ.ಎಂ.ಮಲಿಯಪ್ಪ ಸ್ವಚ್ಛವಾಹಿನಿ ಮಹಿಳಾ ಕಾ ರ್ಮಿಕರು ಕಸವಿಲೇವಾರಿ ಮಾಡುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದು ಕಸವನ್ನು ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಕಸವಿಲೇವಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪರಿಣಾಮ ಸರಕಾರದ ಪ್ರಮುಖ ಅಭಿ ಯಾನದ ಸ್ವಚ್ಛ ಭಾರತ್ ಅಭಿಯಾನವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವುದಾಗಿ ಕೇಂದ್ರ ಸರಕಾರವು ಉಲ್ಲೇಖಿಸಿದೆ. ಆದರೆ ಗ್ರಾಮಗಳ ಸ್ವಚ್ಛತೆಯ ಜವಾಬ್ದಾರಿ ವಹಿಸಿರುವಂತಹ ಸ್ವಚ್ಛವಾಹಿನಿ ನೌಕರರಿಗೆ ಮೂಲ ಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ ಎಂದರು.

ಹೀಗಾಗಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಟ ವೇತನ 26 ಸಾವಿರ ನಿಗಧಿಪಡಿಸ ಬೇಕು. ತರಬೇತಿ ಪಡೆದ ಸ್ವಚ್ಛವಾಹಿನಿ ನೌಕರರಿಗೆ ಗ್ರಾ.ಪಂ.ಗಳಲ್ಲಿ ಕೆಲಸ ಕೊಡಲು ಸೂಕ್ತ ಕ್ರಮ ಕೈಗೊಳ್ಳ ಬೇಕು. ಬಾಕಿ ವೇತನ ಕೂಡಲೇ ಪಾವತಿಸಬೇಕು. 15ನೇ ಹಣಕಾಸಿನಂತೆ 6 ತಿಂಗಳ ವೇತನವನ್ನು ಕಡ್ಡಾಯ ವಾಗಿ ನೀಡಬೇಕು. ನೌಕರರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರುಗಳಾದ ಬಿಂಧು, ಆಶಾ, ಮಮತ, ಶೀಲಾ, ಪ್ರತಿಮಾ, ಜ್ಯೋತಿ, ಶ್ವೇತಾ, ಸ್ಮಿತಾ, ಸುಪ್ರೀತ, ಪುಷ್ಪಲತಾ ಮತ್ತಿತರರು ಹಾಜರಿದ್ದರು.

ಧೈರ್ಯವಾಗಿ ಸವಾಲು ಎದುರಿಸಿ

ಚಿಕ್ಕಮಗಳೂರು: ವಿದ್ಯಾರ್ಥಿದೆಸೆಯಿಂದಲೇ ನಾಯಕತ್ವ ಗುಣ ಬೆಳೆಸಿಕೊಂಡರೆ ಭವಿಷ್ಯದ ಸವಾಲುಗಳನ್ನು ಧೈರ್ಯವಾಗಿ ಎದುರಿಸಲು ಸಾಧ್ಯವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಬೋಜೇಗೌಡ ಹೇಳಿದರು. ನಗರದ ಬೈಪಾಸ್ ಸಮೀಪ ಎಸ್.ಆರ್.ಪ್ರೈಮ್ ನರ್ಚರ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನೂತನ ವಾಗಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡ ಎಸ್.ಎಲ್.ಬಿ.ಗೆ ಅಭಿನಂದನಾ ಸಮಾರಂಭ ಹಾಗೂ ಶಾಲಾ ವಿದ್ಯಾರ್ಥಿಗಳ ಸಂಘ ಸ್ಥಾಪನೆಗೆ ಪ್ರಯೋಗಿಕವಾಗಿ ಬುಧವಾರ ಚಾಲನೆ ನೀಡಿ ಅವರು ಮಾತನಾಡಿ ದರು. ಮಕ್ಕಳು ಬಾಲ್ಯಂದಲೇ ಮತದಾನದ ಹಕ್ಕನ್ನು ತಿಳಿದುಕೊಳ್ಳಬೇಕು. ಸಮರ್ಪಕ ಅಭ್ಯರ್ಥಿಗಳನ್ನು ಗುರುತಿಸುವಂತಹ ಕೆಲಸ ಮಾಡಿದರೆ ಸದೃಢ ಸರ್ಕಾರ ಲಭ್ಯವಾಗಲಿದೆ. ಸಮಾಜದಲ್ಲಿ ಬಡವರ, ಹಿಂದುಳಿದ ಪರವಾಗಿ ಸರ್ಕಾರಗಳು ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದರು.

ಹೀಗಾಗಿ ಭವಿಷ್ಯದಲ್ಲಿ ಮತದಾನಕ್ಕೆ ತೆರಳಲು ಮುನ್ನ ಅರಿ ವು ಹೊಂದುವುದು ಮುಖ್ಯ ಎಂದರು. ಸುಖಸುಮ್ಮನೆ ಮತದಾನಕ್ಕೆ ಭಾಗಿಯಾಗದೇ ಗುಣಮಟ್ಟದ ಆಡಳಿತ ನೀಡಲು ಮತಯಾಚಿಸಬೇಕು. ಆ ನಿಟ್ಟಿನಲ್ಲಿ ಶಾಲೆಯ ವಿದ್ಯಾರ್ಥಿಗಳ ಚುನಾವಣೆಯಲ್ಲಿ ಇವಿಎಂ ಮಿಷನ್‌ನೊಂದಿಗೆ ವಿಶೇಷವಾಗಿ ನಾಯ ಕತ್ವ ಗುರುತಿಸಲು ಮುಂದಾಗಿರುವುದು ಉತ್ತಮ ಸಂಗತಿ ಎಂದು ತಿಳಿಸಿದರು

ವಿಶ್ವವಾಣಿ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್
28.06.2024
ಬೆಂಗಳೂರು . ಶುಕ್ರವಾರ

ಚಂದನವನದಲ್ಲಿ ಸಂಗೀತಾ ಸಂಭ್ರಮ

> ಮಹಿಳಾ ಪ್ರಧಾನ ಸಿನಿಮಾಗಳಲ್ಲಿ ನಟಿಸಬೇಕು ಎಂಬುದು ನನ್ನ ಆಸೆ. ಅಂತಹ ಕಥೆಗಾಗಿ ಕಾಯುತ್ತಿದ್ದೇನೆ. ನಟಿ ಎಂದ ಮೇಲೆ ಆ ಪಾತ್ರಕ್ಕೆ ಪ್ರಾಮುಖ್ಯತೆ ಇರಬೇಕಲ್ಲವೆ.

ಪ್ರಶಾಂತ್ ಟಿ.ಆರ್

ಚಾರ್ಲಿ ಬೆಡಗಿ ಸಂಗೀತಾ ಶೃಂಗೇರಿ ಬಿಗ್ ಬಾಸ್ ಮನೆಗೆ ಹೋಗಿ ಬಂದ ಬಳಿಕ ಸಖತ್ ಬ್ಯುಸಿಯಾಗಿದ್ದಾರೆ. ಸಂಗೀತಾ ಅವರಿಗೆ ಸಾಲು ಸಾಲು ಅವಕಾಶಗಳು ಅರಸಿ ಬರುತ್ತಿವೆ. ಹೊಸತನದ ಕಥೆಗಳತ್ತ ಹೊರಳಿರುವ ಸಂಗೀತಾ ವಿಭಿನ್ನ ಪಾತ್ರಗಳನ್ನು ಆಯ್ದು ಕೊಳ್ಳುತ್ತಿದ್ದಾರೆ. ತಮ್ಮ ಸಿನಿಮಾ ಹಾಗೂ ಬಿಗ್ ಬಾಸ್ ಮನೆಯ ಮರೆಯಲಾಗದ ನೆನಪುಗಳ ಬಗ್ಗೆ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ಬಿಗ್ ಬಾಸ್ ಮನೆಯಲ್ಲಿ ಕಲಿತ್ತಿದ್ದು?

ಬಿಗ್ ಬಾಸ್ ಮನೆಯಲ್ಲಿ ಸಾಕಷ್ಟು ಕಲಿತ್ತಿದ್ದೇನೆ. ಅದರಲ್ಲೂ ಮುಖ್ಯವಾಗಿ ತಾಳ್ಮೆಕಲಿತ್ತಿದ್ದೇನೆ. ನನಗೆ ಮೊದಲು ಬಲು ಬೇಗ ಸಿಟ್ಟು ಬರುತ್ತಿತ್ತು. ಆದರೆ ಬಿಗ್ ಬಾಸ್ ಮನೆಗೆ ಹೋಗಿ ಬಂದ ಮೇಲೆ ಯಾವುದೇ ವಿಚಾರಕ್ಕೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ತಾಳ್ಮೆ ಮೈಗೂಡಿಸಿಕೊಂಡಿದ್ದು ಖುಷಿಕೊಟ್ಟಿದೆ. ಎಲ್ಲರೊಂದಿಗೂ ಬೆರೆತು ಕಲೆತಿದ್ದು ಎಂದಿಗೂ ಮರೆಯಲಾಗದ ನೆನಪಾಗಿ ಉಳಿದಿದೆ.

ಬಿಗ್ ಬಾಸ್ ಮನೆಯಲ್ಲಿ ಹೇಗೆ ಫಿಟ್ ನೆಸ್ ಕಾಯ್ದುಕೊಂಡಿರಿ?

ಬಿಗ್ ಬಾಸ್ ಮನೆಯಲ್ಲಿ ಇದ್ದಾಗಲೂ ತಪ್ಪದೇ ವರ್ಕ್ ಔಟ್ ಮಾಡುತ್ತಿದೆ. ಮುಂಜಾನೆ ಒಂದು ಗಂಟೆ ಯೋಗ ಜತೆಗೆ ಜಿಮ್‌ನಲ್ಲಿ ಕಸರತ್ತು ನಡೆಸುತ್ತಿದ್ದೆ. ಒಮ್ಮೊಮ್ಮೆ ಮನೆಯಲ್ಲಿ ಟಾಸ್ಕ್ ಇದ್ದಾಗ ಒಂದು ಗಂಟೆಯಾದರೂ ತಪ್ಪದೇ ಯೋಗ ಮಾಡುತ್ತಿದ್ದೆ. ಹಾಗಾಗಿ ಫಿಟ್ ನೆಸ್ ಕಾಪಾಡಿಕೊಳ್ಳಲು ಸಾಧ್ಯವಾಯಿತು. ಬಿಗ್ ಬಾಸ್ ಮನೆಯಲ್ಲಿ ಸಮಯವೇ ತಿಳಿಯುತ್ತಿರಲಿಲ್ಲ, ಸೂರ್ಯನ ಚಲನೆ ನೋಡಿ ಸಮಯ ಅರಿಯುತ್ತಿದ್ದೆ.

ರಿಯಾಲಿಟಿ ಶೋ ಬಳಿಕ ಸಿನಿಮಾದಲ್ಲಿ ಅವಕಾಶಗಳು ಬರುತ್ತಿವೆಯೆ ?

ಹೌದು, ಬಿಗ್ ಬಾಸ್ ಮನೆಗೆ ಹೋಗಿ ಬಂದ ಬಳಿಕ ಸಿನಿಮಾದಲ್ಲಿ ನಟಿಸಲು ಹೆಚ್ಚಿನ ಅವಕಾಶಗಳು ಅರಸಿ ಬರುತ್ತಿವೆ. ನಾನು ಎಲ್ಲಿಗೇ ಹೋದರು ಜನರು ನನ್ನನ್ನು ಪ್ರೀತಿಯಿಂದ ಕಾಣುತ್ತಾರೆ, ಕರುನಾಡಿನ ಜನರ ಪ್ರೀತಿ ಸಂಪಾದಿಸಿದ ಸಂತಸ ನನಗಿದೆ. ಅದೇ ನನ್ನ ನಿಜವಾದ ಆಸ್ತಿ. ಇನ್ನು ಈ ಹಿಂದಿಗಿಂತ ಸಾಕಷ್ಟು ಸಿನಿಮಾಗಳಲ್ಲಿ ನಟಿಸಲು ಅವಕಾಶಗಳು ಅರಸಿ ಬರುತ್ತಿವೆ. ನಾನು ಸಾಕಷ್ಟು ಕಥೆಗಳನ್ನು ಕೇಳಿದ್ದೇನೆ. ಅದರಲ್ಲಿ ನನಗೆ ಒಪ್ಪಿಗೆಯಾಗುವ ಕಥೆಗಳನ್ನು ಮಾತ್ರ ಆಯ್ದುಕೊಳ್ಳುತ್ತಿದ್ದೇನೆ.

> ಈಗಾಗಲೇ ಹರ ಹರಾ ಮಹಾದೇವ ಧಾರಾವಾಹಿಯಲ್ಲಿ ನಟಿದ್ದೇನೆ. ಅದರಲ್ಲಿನ ಪಾತ್ರ ನನಗೆ ಖುಷಿಕೊಟ್ಟಿದೆ. ಹಾಗಾಗಿ ಸದ್ಯಕ್ಕೆ ಕಿರುತೆರೆಗೆ ಹೋಗುವ ಯೋಚನೆ ಇಲ್ಲ. ಸಿನಿಮಾಗಳಲ್ಲಿಯೇ ಮುಂದುವರಿಯುತ್ತೇನೆ.

ಪರಭಾಷೆಯ ಸಿನಿಮಾಗಳಲ್ಲಿ ನಟಿಸುವ ಆಸೆ ಇದೆಯೆ ?

ಒಬ್ಬ ಕಲಾವಿದೆ ಎಂದ ಮೇಲೆ ಭಾಷೆಯ ಎಲ್ಲೆ ಇರುವುದಿಲ್ಲ. ಮುಂದೆ ಬೇರೆ ಭಾಷೆಯಲ್ಲಿ ಒಳ್ಳೆಯ ಕಥೆ ಹಾಗೂ ಪಾತ್ರ ಸಿಕ್ಕಿದರೆ ಖಂಡಿತಾ ನಟಿಸುತ್ತೇನೆ. ನಾನು ಕನ್ನಡತಿ ಎಂಬ ಹೆಮ್ಮೆ ಇದೆ, ಹಾಗಾಗಿ ಕನ್ನಡ ಸಿನಿಮಾಗಳಿಗೆ ನನ್ನ ಮೊದಲ ಆದ್ಯತೆ.

ಎಸ್ ಸೈಲೆನ್ಸ್ ಫುಲ್ ವೈಲೆಂಟ್

> ಇಲ್ಲಿ ಮದುವೆಯ ಬಳಿಕ ಹುಟ್ಟುವ ಪ್ರೇಮಕಥೆಯನ್ನು ಮನಕ್ಕೆ ಮುಟ್ಟುವಂತೆ ಕಟ್ಟಿಕೊಟ್ಟಿದ್ದೇವೆ. ಮದುವೆ ಆದ ನಂತರ ಜೀವನ ಮುಗಿಯಿತು ಎನ್ನುವವರಿಗೆ ಅಲ್ಲಿಂದಲೇ ನಿಜವಾದ ಜೀವನ ಆರಂಭ ಎಂಬುದನ್ನು ತಿಳಿ ಹೇಳಿದ್ದೇವೆ. ಹಾಗಾಗಿ ಇದು ಎಲ್ಲರಿಗೂ ಕನೆಕ್ಟ್ ಆಗುವ ಸ್ಟೋರಿಯಾಗಿದೆ. ಅಂದುಕೊಂಡಂತೆ ಚಿತ್ರ ಮೂಡಿಬಂದಿದೆ, ಮುಂದಿನ ತಿಂಗಳು ಪ್ರೇಕ್ಷಕರ ಮುಂದಿಡಲಿದ್ದೇವೆ.
>
> -ಪಿವಿಆರ್ ಸ್ವಾಮಿ ನಿರ್ದೇಶಕ

ಎಲ್ಲರಿಗೂ ತಾಳ್ಮೆ ಇದ್ದೇ ಇರುತ್ತದೆ, ತಾಳ್ಮೆ ಮೀರಿದಾಗ ಸೈಲೆಂಟ್ ಆಗಿದ್ದ ವ್ಯಕ್ತಿಯೂ ವೈಲೆಂಟಾಗುತ್ತಾನೆ. ಆಗ ಅದು ಸಮಾಜದ ಮೇಲೆ ಹೇಗೆ ಪರಿಣಾಮ ಬಿರುತ್ತದೆ ಎಂಬುದನ್ನು ಎಸ್ ಸೈಲೆನ್ಸ್ ಚಿತ್ರದಲ್ಲಿ ಹೇಳಲಾಗಿದೆ. ಈ ಹಿಂದೆ ರಾಜತಂತ್ರ ಹೆಣೆದು ಸೈ ಎನಿಸಿ ಕೊಂಡಿದ್ದ ಪಿವಿಆರ್ ಸ್ವಾಮಿ ಈ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ.

ಚಿತ್ರದ ಶೀರ್ಷಿಕೆಯೇ ವಿಭಿನ್ನವಾಗಿದೆ. ಇಲ್ಲಿ ಎಸ್ ಎಂದರೆ ವ್ಯಕ್ತಿಯ ಹೆಸರು, ಸೈಲೆಂಟ್ ಆಗಿದ್ದ ವ್ಯಕ್ತಿ ಯಾರು ಎಂಬುದೇ ಚಿತ್ರದ ಸಸ್ಪೆನ್ಸ್. ಸೈಲೆಂಟ್ ಆದವನು ವೈಲೆಂಟ್ ಆಗಿದ್ದು ಯಾಕೆ ಎಂಬುದನ್ನು ಥ್ರಿಲ್ಲರ್ ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ.

ನೈಜ ಘಟನೆ

ಎಸ್ ಸೈಲೆನ್ಸ್ ನೈಜ ಘಟನೆಯಾಧಾರಿತ ಚಿತ್ರವಾಗಿದ್ದು ನಿರ್ಮಾಪಕ ಮೋಹನ್ ಕುಮಾರ್ ತಮ್ಮ ಊರಿನಲ್ಲಿ ನಡೆದ ಘಟನೆಯನ್ನು ಆಧರಿಸಿ ಚಿತ್ರದ ಕಥೆ ಹೆಣೆದಿದ್ದರೆ, ನೈಜ ಘಟನೆಗೆ ಒಂದಷ್ಟು ಕಾಲ್ಪನಿಕ ಅಂಶಗಳನ್ನು ಬೆರೆಸಿ ಅದಕ್ಕೆ ಹಾರರ್, ಸಸ್ಪೆನ್ಸ್, ಥ್ರಿಲ್ಲರ್, ಕಾಮಿಡಿ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಬೆಂಗಳೂರಿನಲ್ಲಿ ಆರಂಭವಾಗುವ ಕಥೆ ಕುಂದಾಪುರದವರೆಗೂ ಸಾಗುತ್ತದೆ.

ಜೀವನಕ್ಕೆ ಹತ್ತಿರವಾದ ಕಥೆ

ಎಸ್ ಸೈಲೆನ್ಸ್ ನಿಜಜೀವನಕ್ಕೆ ಹತ್ತಿರವಾದ ಕಥೆಯನ್ನು ಒಳಗೊಂಡಿದೆ. ಕೆಲವರು ಲೈಫ್ ಈಸ್ ವೆರಿ ಶಾರ್ಟ್ ಅನ್ನುತ್ತಾ, ಜೀವನ ಇರೋದೇ ಎಂಜಾಯ್ ಮಾಡೋಕೆ ಎಂದು ತಿಳಿದಿರುತ್ತಾರೆ. ಅಂತಹವರ ಜೀವನ ಇನ್ನೂ ಶಾರ್ಟ್ ಆಗಿರುತ್ತದೆ ಎಂಬುದು ಅವರಿಗೆ ತಿಳಿದಿರುವುದಿಲ್ಲ. ಅಂತಹವರಿಗೆ ಜೀವನ ಎಷ್ಟು ಸುದೀರ್ಘ ಎಂಬುದನ್ನು ಸಾರುವ ಸ್ಟೋರಿ ಇಲ್ಲಿದೆ. ಉಗ್ರಂ ಪ್ರದೀಪ್ ನಾಯಕನಾಗಿ ನಟಿಸಿದ್ದು, ನಿಖಿತಾ, ಸುಶ್ಮಿತಾ ಗೌಡ, ಮೀರಾ ಗೌಡ, ಪ್ರೀತಿ, ವಿಂದ್ಯಾ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ಮಾಪಕ ಮೋಹನ್ ಕುಮಾರ್ ಪೊಲೀಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದಾರೆ. ಸೆನ್ಸಾರ್ ಪಾಸ್ ಆಗಿರುವ ಎಸ್ ಸೈಲೆನ್ಸ್ ಮುಂದಿನ ತಿಂಗಳು ತೆರೆಗೆ ಬರಲಿದೆ.

ಭ್ರಷ್ಟಚಾರದ ವಿರುದ್ಧ ಸೇನಾಪತಿ ಸಮರ

ಹದಿನೆಂಟು ವರ್ಷಗಳ ಹಿಂದೆ ತೆರೆಗೆ ಬಂದಿದ್ದ ಇಂಡಿಯನ್ ಚಿತ್ರ ಭರ್ಜರಿ ಸದ್ದು ಮಾಡಿತ್ತು. ಈಗ ಅದೇ ಸೀಕ್ವೆಲ್ ಆಧರಿಸಿ ಇಂಡಿಯನ್ 2 ತೆರೆಗೆ ಬರಲು ಸಿದ್ಧವಾಗಿದೆ. ಮೊದಲ ಭಾಗದಲ್ಲಿ ಅವಶ್ಯವಿದ್ದರೆ ಮರಳಿ ಬರುವೆ ಎಂಬ ಡೈಲಾಗ್ ಇತ್ತು. ಅಂತೆಯೇ ಈಗ ಸರಿ ಸುಮಾರು ಎರಡು ದಶಕಗಳ ಬಳಿಕ ಸೇನಾಪತಿ ಮರಳಿ ಬಂದಿದ್ದು ಭ್ರಷ್ಟಾಚರದ ವಿರುದ್ಧ ಸಮರ ಸಾರಿದ್ದಾರೆ. ಸದ್ಯ ಇಂಡಿಯನ್ 2 ಟ್ರೇಲರ್ ರಿಲೀಸ್ ಆಗಿದ್ದು ಇದನ್ನು ನೋಡಿದ ಸಿನಿಪ್ರಿಯರು ಖುಷಿಯಾಗಿದ್ದಾರೆ. ಸರಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತುಂಬಿದೆ, ಜನಪ್ರತಿನಿಧಿಗಳ ಸೋಗಿನಲ್ಲಿರುವ ರಾಜಕಾರಣಿಗಳು ಸ್ವಾರ್ಥದ ಹಾದಿ ಹಿಡಿದು ಅನಾಚಾರದತ್ತ ಮುಖ ಮಾಡಿದ್ದಾರೆ, ಇದಕ್ಕೆಲ್ಲ ಕಡಿವಾಣ ಹಾಕೋದು ಯಾರು ಎನ್ನುವ ಪ್ರಶ್ನೆ ಬಂದಾಗ ಅವತರಿಸಿ ಬರುವವನೇ ಸೇನಾಪತಿ. ಕಮಲ್ ಹಾಸನ್ ಸೇನಾಪತಿಯಾಗಿ ಹಲವು ಗೆಟಪ್‌ನಲ್ಲಿ ಮಿಂಚಿದ್ದಾರೆ, ಆ್ಯಕ್ಷನ್‌ನಲ್ಲಿಯೂ ಗಮನಸೆಳೆದಿದ್ದಾರೆ. ಅವರ ಪಾತ್ರ, ಅದಕ್ಕೆ ಮಾಡಿ ಕೊಂಡಿರುವ ತಯಾರಿ ಎಲ್ಲವೂ ಅತ್ಯದ್ಭುತವಾಗಿದೆ. ಸಿದ್ಧಾರ್ಥ ಕೂಡ ಯುವ ಹೋರಾಟಗಾರನಾಗಿ ಕಾಣಿಸಿಕೊಂಡಿದ್ದಾರೆ, ಕಾಜಲ್ ಅಗರ್ ವಾಲ್, ರಾಕುಲ್ ಪ್ರೀತ್ ಸಿಂಗ್, ಬಾಬಿ ಸಿಂಹ, ವಿವೇಕ್, ಮನೋಬಾಲ, ಗುಲ್ಶನ್ ಗ್ರೋವರ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿಎ. ಅನಿರುದ್ಧ್ ರವಿಚಂದ್ರನ್ ಸಂಗೀತ ಚಿತ್ರಕ್ಕೆ ಶಕ್ತಿ ತುಂಬಿದೆ. ಶಂಕರ್ ನಿರ್ದೇಶನದ ಇಂಡಿಯನ್ 2, ಲೈಕಾ ಪ್ರೊಡಕ್ಷನ್ಸ್ ಮತ್ತು ರೆಡ್ ಜಾಯಿಂಟ್ ಬ್ಯಾನರ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಇಂಡಿಯನ್ 2 ಜುಲೈ 12 ರಂದು ವಿಶ್ವಾದ್ಯಂತ ಅದ್ದೂರಿ ಯಾಗಿ ತೆರೆಗೆ ಬರಲಿದೆ.



ಮೆಜೆಸ್ಟಿಕ್‌ನಲ್ಲಿ ಶ್ರುತಿ ಕಿಡ್ನಾಪ್

ಬೆಂಗಳೂರಿನ ಕೇಂದ್ರಬಿಂದು ಮೆಜೆಸ್ಟಿಕ್ ಏರಿಯಾದಲ್ಲಿ ಏನೇನೆಲ್ಲ ಅಕ್ರಮ ಚಟುವಟಿಕೆಗಳು ನಡೆಯುತ್ತವೆ, ಅಲ್ಲಿನ ರೌಡಿಸಂ ಹೇಗಿರುತ್ತದೆ ಎಂಬುದನ್ನು ಮೆಜೆಸ್ಟಿಕ್ 2 ಚಿತ್ರದ ಮೂಲಕ ನಿರ್ದೇಶಕ ರಾಮು ಹೇಳಲು ಹೊರಟಿದ್ದಾರೆ. ಈ ಹಿಂದೆ ಬಂದ ಮೆಜೆಸ್ಟಿಕ್ ಚಿತ್ರದ ಸೀಕ್ವೆಲ್ ಆಧರಿಸಿಯೇ ಈ ಸಿನಿಮಾ ಕೂಡ ಸಿದ್ಧವಾಗುತ್ತಿದ್ದು, ಭರತ್ ನಾಯಕನಾಗಿ ನಟಿಸುತ್ತಿದ್ದಾರೆ. ಮೆಜೆಸ್ಟಿಕ್ 2 ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ರಾಮೋಹಳ್ಳಿಯಲ್ಲಿ ಬೀಡುಬಿಟ್ಟಿರುವ ಚಿತ್ರತಂಡ ಕ್ಲೈಮ್ಯಾಕ್ಸ್ ಭಾಗದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದೆ. ಪೆಟ್ರೋಲ್ ಪ್ರಸನ್ನ ತಾಯಿಯ ಪಾತ್ರದಲ್ಲಿ ಶ್ರುತಿ ನಟಿಸುತ್ತಿದ್ದು, ಶ್ರುತಿ ಅವರನ್ನು ವಿಲನ್‌ಗಳು ಕಿಡ್ನಾಪ್ ಮಾಡಿರುತ್ತಾರೆ. ನಾಯಕ ಭರತ್ ಹಾಗೂ ಪೆಟ್ರೋಲ್ ಪ್ರಸನ್ನ ಇಬ್ಬರೂ ಶ್ರುತಿ ಅವರನ್ನು ಹುಡುಕಿಕೊಂಡು ಬರುವ ದೃಶ್ಯವನ್ನು ಚಿತ್ರೀಕರಿಸಿಕೊಳ್ಳಲಾಗಿದೆ. ರೌಡಿಸಂ ಹಾಗೂ ಆ್ಯಕ್ಷನ್ ಬೇಸ್ ಕಥಾಹಂದರ ಹೊಂದಿರುವ ಮೆಜೆಸ್ಟಿಕ್ 2 ಚಿತ್ರದಲ್ಲಿ ಭರತ್‌ಗೆ ನಾಯಕಿಯಾಗಿ ಸಂಹಿತಾ ವಿನ್ಯಾ ನಟಿಸುತ್ತಿದ್ದಾರೆ. ಹಿರಿಯ ನಟಿ ಶೃತಿ ತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿನು ಮನಸು ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಅಮ್ಮಾ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಟಿ.ಆನಂದಪ್ಪ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಟಾಕ್ಸಿಕ್ ತಂಡಕ್ಕೆ ಹುಮಾ ಖುರೇಷಿ

ಯಶ್ ಅಭಿನಯದ ಟಾಕ್ಸಿಕ್ ಸೆಟ್ಟೇರಿದಾಗನಿಂದಲೂ ಸಖತ್ ಸದ್ದು ಮಾಡುತ್ತಿದೆ. ಟಾಕ್ಸಿಕ್‌ನಲ್ಲಿ ಯಶ್ ಜತೆಗೆ ನಾಯಕಿಯಾಗಿ ಯಾರು ನಟಿಸಬಹುದು ಎಂಬ ಕುತೂಹಲ ಕಾಡುತ್ತಿದೆ. ರಾಕಿಬಾಯಿಗೆ ಜತೆಯಾಗಿ ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ ನಟಿಸಬಹುದು ಅಥವಾ ನಯನಾ ತಾರಾ ಬಣ್ಣಹಚ್ಚಬಹುದು ಎಂಬ ಮಾತುಗಳೂ ಕೇಳಿ ಬರುತ್ತಿವೆ. ಈ ಬಗ್ಗೆ ಚಿತ್ರತಂಡ ಅಧಿಕೃತವಾಗಿ ಘೋಷಿಸಲಿಲ್ಲ. ಈ ನಡುವೆ ಬಾಲಿವುಡ್ ಬೇಬೋ ಟಾಕ್ಸಿಕ್‌ನಲ್ಲಿ ನಟಿಸಬೇಕಿತ್ತಾದರೂ ಕಾರಣಾಂತರಗಳಿಂದ ಚಿತ್ರದಿಂದ ಹೊರ ನಡೆದರು. ಹೀಗಿರುವಾಗಲೇ ಮತ್ತೊಬ್ಬ ಮುಂಬೈ ಬೆಡಗಿ ಟಾಕ್ಸಿಕ್ ತಂಡಕ್ಕೆ ಸೇರಿದ್ದಾರೆ. ಹೌದು, ಬಿಟೌನ್ ಸುಂದರಿ ಹುಮಾ ಖುರೇಷಿ ಚಿತ್ರದ ಮುಖ್ಯ ಪಾತ್ರದಲ್ಲಿ ನಟಸಲಿದ್ದಾರೆ. ಕಥೆ ಕೇಳಿ ಮಚ್ಚಿರುವ ಹುಮಾ, ಚಿತ್ರದ ಪವರ್ ಫುಲ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಬೇಡಿಕೆಯ ನಟಿಯಾಗಿರುವ ಹುಮಾ, ರಜನಿಕಾಂತ್ ಅಭಿನಯದ ಕಾಲ ಚಿತ್ರದ ಮೂಲಕ ದಕ್ಷಿಣ ಭಾರತದ ಚಿತ್ರರಂಗಕ್ಕೂ ಪರಿಚಿತರಾಗಿದ್ದಾರೆ. ಈಗ ಟಾಕ್ಸಿಕ್ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೂ ಎಂಟ್ರಿಕೊಡಲಿದ್ದಾರೆ. ಹುಮಾ ಖುರೇಷಿ, ಟಾಕ್ಸಿಕ್ ತಂಡ ಸೇರುತ್ತಿರುವುದು ಚಿತ್ರದ ಬಗ್ಗೆ ನಿರೀಕ್ಷೆ ದುಪ್ಪಟ್ಟುಗೊಳಿಸಿದೆ. ಜಾಲಿ ಎಲ್‌ಎಲ್‌ಬಿ 3, ಗುಲಾಬಿ ಚಿತ್ರದಲ್ಲಿ ನಟಿಸುತ್ತಿರುವ ಹುಮಾ, ಈ ಚಿತ್ರದ ಬಳಿಕ ಟಾಕ್ಸಿಕ್ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಟಾಕ್ಸಿಕ್‌ನಲ್ಲಿ ಯಶ್ ಗ್ಯಾಂಗ್‌ಸ್ಟರ್ ಪಾತ್ರದಲ್ಲಿ ಅಬ್ಬರಿಸಲಿದ್ದಾರೆ. ಚಿತ್ರದ ಫಸ್ಟ್‌ಲುಕ್‌ನಲ್ಲಿ ರಾಕಿಬಾಯಿ ಗೆಟಪ್ ಸಿನಿಪ್ರಿಯರ ಮನಸೂರೆಗೊಂಡಿದೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನದಲ್ಲಿ ಚಿತ್ರ ಮೂಡಿಬರುತ್ತಿದ್ದು, ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ.

ಹಾರರ್ ಸಿನಿಮಾದಲ್ಲಿ ರಶ್ಮಿಕಾ

ರಶ್ಮಿಕಾ ಮಂದಣ್ಣ ಪ್ಯಾನ್ ಇಂಡಿಯಾ ನಟಿಯಾಗಿ ಗುರುತಿಸಿ ಕೊಂಡಿದ್ದಾರೆ. ಕನ್ನಡ, ತಮಿಳು, ತೆಲುಗು ಬಳಿಕ ಈಗ ಬಾಲಿವುಡ್‌ನಲ್ಲಿಯೂ ಬೇಡಿಕೆಯ ನಟಿಯಾಗಿದ್ದಾರೆ. ಆ್ಯಕ್ಷನ್, ರೊಮ್ಯಾಂಟಿಕ್ ಕಥೆಯ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ರಶ್ಮಿಕಾ ಈಗ ಹಾರರ್ ಜಾನರ್‌ನತ್ತ ಹೊರಳಿದ್ದಾರೆ. ನಿರ್ದೇಶಕ ಆದಿತ್ಯ ಸರ್ಪೋತ್‌ದಾರ್ ನಿರ್ದೇಶನದ ಹೊಸ ಚಿತ್ರದಲ್ಲಿ ರಶ್ಮಿಕಾ ನಟಿಸುತ್ತಿದ್ದು ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ನಿರ್ದೇಶಕ ಆದಿತ್ಯ ಈ ಹಿಂದೆ ಮಂಜ್ಯ ಚಿತ್ರವನ್ನು ನಿರ್ದೇಶಿಸಿದ್ದರು. ದಿನೇಶ್ ವಿಜಯ್ ಈ ಚಿತ್ರವನ್ನು ನಿರ್ಮಿಸಿದ್ದರು. ಮಂಜ್ಯ ಚಿತ್ರದ ಯಶಸ್ಸಿನ ಖುಷಿಯಲ್ಲಿರುವ ಆದಿತ್ಯ ಹಾಗೂ ವಿಜಯ್ ಈಗ ಮತ್ತೆ ಒಂದಾಗಿದ್ದು, ಮತ್ತೊಂದು ಚಿತ್ರವನ್ನು ನಿರ್ಮಿಸಿ ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಇದೂ ಕೂಡ ಹಾರರ್ ಸಿನಿಮಾವಾಗಿದ್ದು, ಈ ಚಿತ್ರದಲ್ಲಿ ಆಯುಷ್ಮಾನ್ ಖುರಾನ ನಾಯಕನಾಗಿ ನಟಿಸುತ್ತಿದ್ದು ರಶ್ಮಿಕಾ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ನವೆಂಬರ್‌ನಲ್ಲಿ ಈ ಚಿತ್ರ ಸೆಟ್ಟೇರಲಿದೆ. ಸದ್ಯ ರಶ್ಮಿಕಾ, ಪುಷ್ಪ 2 ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಬಳಿಕ ಮತ್ತೊಂದು ಬಾಲಿವುಡ್ ಸಿನಿಮಾದಲ್ಲಿ ನಟಿಸಲಿದ್ದಾರೆ.

ಕಾಗದದಲ್ಲಿ ಅರಳಿದ ಪ್ರೇಮಕಥೆ

ನಿರ್ದೇಶಕ ರಂಜಿತ್ ಕಾಗದದಲ್ಲಿ ಅರಳಿದ ಅಪರೂಪದ ಪ್ರೇಮಕಥೆಯನ್ನು ತೆರೆಗೆ ತರುತ್ತಿದ್ದಾರೆ. ಸದ್ಯ ಕಾಗದ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಕಾಗದ, ಎರಡು ದಶಕದ ಹಿಂದಿನ ಪ್ರೇಮಕಥೆಯನ್ನು ಒಳಗೊಂಡಿದೆ. ಯುವಜನತೆಗೆ ಮೊಬೈಲ್ ಪರಿಚಯವಾಗದ ಕಾಲದಲ್ಲಿ ಕಾಗದದಲ್ಲೇ ಪ್ರೀತಿ ವಿನಿಮಯವಾಗುತ್ತಿತ್ತು. ಆ ಕಾಲಘಟ್ಟದ ಕಥೆ ಇಲ್ಲಿದೆ. ಪರಸ್ಪರ ದ್ವೇಷಿಸುವ ಎರಡು ಹಳ್ಳಿಗಳ ನಡುವೆ ಅರಳುವ ಪ್ರೇಮ, ಈ ದ್ವೇಷದ ದಳ್ಳುರಿಯಲ್ಲಿ ಸಿಲುಕಿ ಪರಿತಪಿಸುವ ಮುಗ್ಧ ಮನಸುಗಳ ಕಥನ ಚಿತ್ರದಲ್ಲಿ ಸಾಗಲಿದೆ. ಆದಿತ್ಯ ನಾಯಕನಾಗಿ ನಟಿಸಿದ್ದು, ಅಂಕಿತಾ ಜಯರಾಮ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನೇಹಾ ಪಾಟೀಲ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿಂದತೆ ಬಲ ರಾಜವಾಡಿ, ನೀನಾಸಂ ಅಶ್ವಥ್, ಮಠ ಕೊಪ್ಪಳ, ಶಿವಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ.

> ನನಗೆ ಮೊದಲಿನಿಂದಲೂ ಒಂದೊಳ್ಳೆಯ ಲವ್ ಸ್ಟೋರಿಯ ಸಿನಿಮಾವನ್ನು ನಿರ್ಮಿಸುವ ಆಸೆಯಿತ್ತು. ಆದರೆ ನನ್ನ ಮನಮುಟ್ಟುವ ಹಾಗೆ ಯಾರು ಕಥೆ ಹೇಳುತ್ತಿರಲಿಲ್ಲ. ನನ್ನನ್ನು ಒಪ್ಪಿಸುವಲ್ಲಿ ರಂಜಿತ್ ಯಶಸ್ವಿಯಾದರು. ನಾವು ಈ ಚಿತ್ರದಲ್ಲಿ ಯಾವುದೇ ಧರ್ಮದ ಭಾವನೆಗಳಿಗೆ ಧಕ್ಕೆ ತರುವ ಸನ್ನಿವೇಶಗಳನ್ನು ತೋರಿಸಿಲ್ಲ. ಎಲ್ಲಕ್ಕಿಂತ ಮನುಷ್ಯತ್ವ ಮುಖ್ಯ ಎಂಬ ಸಂದೇಶವನ್ನು ಚಿತ್ರದಲ್ಲಿ ಸಾರಿದ್ದೇವೆ.
>
> -ಅರುಣ್‌ಕುಮಾರ್ ನಿರ್ಮಾಪಕ

ನಮ್ಮ ಮನೆಯ ಪಕ್ಕದಲ್ಲಿಯೇ ಆಕ್ಟಿಂಗ್ ಸ್ಕೂಲ್ ಇತ್ತು, ಅಲ್ಲಿಗೆ ನಟನೆ ಕಲಿಯಲು ಬರುತ್ತಿದ್ದವರನ್ನು ನೋಡಿ ನನಗೂ ನಟಿಸುವ ಆಸೆಯಾಯಿತು. ಅಂತೆಯೇ ನಟನೆ ಕಲಿತು, ಕಿರುಚಿತ್ರ ಹಾಗೂ ನಾಟಕಗಳಲ್ಲಿ ಅಭಿನಯಿಸಿದೆ. ಈಗ ಕಾಗದ ಚಿತ್ರದ ಮೂಲಕ ಸಿನಿಮಾರಂಗಕ್ಕೆ ಪರಿಚಿತವಾಗುತ್ತಿದ್ದೇನೆ ಎನ್ನುತ್ತಾರೆ ಆದಿತ್ಯ. ಈ ಚಿತ್ರದಲ್ಲಿ ಅಂಕಿತಾ ಬೋಲ್ಡ್ ಹುಡುಗಿಯ ಪಾತ್ರದಲ್ಲಿ ಮಿಂಚಿದ್ದಾರೆ. ಅರುಣ್‌ಕುಮಾರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದು, ಪ್ರದೀಪ್ ವರ್ಮ ಸಂಗೀತ ನಿರ್ದೇಶನ, ವೀನಸ್ ನಾಗರಾಜ ಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕಾಗದ ಜುಲೈ 5 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

ಚಿತ್ರವಾಗಿದ್ದು
ನಿರ್ಮಾಣಕ್ಕೆ